ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 12 ಭಾನುವಾರ 2023

ಸಂಪುಟ: 43 | ಸಂಚಿಕೆ: 295 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ದೇವೇಗೌಡರ ಪ್ರಧಾನಿ, ಎಸ್.ಎಂ.ಕೃಷ್ಣ, ಕುಮಾರಸ್ವಾಮಿ ಮುಖ್ಯಮಂತ್ರಿ ಮಾಡಿದಂತೆ...

ಈಗ ನನಗೂ ಆಶೀರ್ವಾದ ಮಾಡಿ

● ಮಂಡ್ಯ ಜನತೆ ಮುಂದೆ ಡಿಕೆಶಿ ಮನವಿ ● ಮದ್ದೂರಲ್ಲಿ ಪ್ರಜಾಧ್ವನಿ ಯಾತ್ರೆ ಸಮಾವೇಶ ● ಕಳೆದ ಬಾರಿ ಜೆಡಿಎಸ್‌ಗೆ ಕೊಟ್ಟಂತೆ ಈ ಬಾರಿ ಏಳಕ್ಕೆ ಏಳೂ ಕ್ಷೇತ್ರ 'ಕೈ'ಗೆ ಕೊಡಿ





ಮದ್ದೂರು, ಫೆ.11(ಮೋಹನ್‌ರಾಜ್)– ಒಕ್ಕಲಿಗ ಸಮುದಾಯದ ದೇವೇಗೌಡರು ಪ್ರಧಾನ ಮಂತ್ರಿಯಾಗಲು ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲು ದೇವರು ಆಶೀರ್ವಾದದ ಜೊತೆಗೆ ನಮ್ಮ–ನಿಮ್ಮೆಲ್ಲರ ಕೊಡುಗೆ, ತ್ಯಾಗವಿದೆ. ನಮ್ಮನ್ನು ಮುಂದಿನ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯ ಜನತೆ ಸ್ಮರಿಸಿಕೊಳ್ಳಿ ಎನ್ನುವ ಮೂಲಕ ಒಕ್ಕಲಿಗ ಸಮುದಾಯ ತಮ್ಮನ್ನು ಬೆಂಬಲಿಸುವಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮನವಿ ಮಾಡಿದರು.

ಪಟ್ಟಣದ ಸರ್ಕಾರಿ ಕ್ರೀಡಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಪ್ರಜಾಧ್ವನಿ ಯಾತ್ರೆ ಉದ್ಘಾಟಿಸಿ ಮಾತನಾಡಿದ ಅವರು, ದೇವೇಗೌಡರು, ಕುಮಾರಸ್ವಾಮಿ, ಎಸ್.ಎಂ.ಕೃಷ್ಣ ಅವರು ಅಧಿಕಾರಕ್ಕೇರುವಾಗ ಈ ಜಿಲ್ಲೆಯ ಜನ ಮಾಡಿದ ಸಹಾಯವನ್ನು ನಾನು ಮರೆತಿಲ್ಲ. ಅದೇ ರೀತಿ ನನಗೂ ಆಶೀರ್ವಾದ ಮಾಡಿ ಎಂದರು. ರೈತರ ಬದುಕಿನಲ್ಲಿ ಬದಲಾವಣೆ ತರುವ ಶಕ್ತಿ ಕಾಂಗ್ರೆಸ್ ಪಕ್ಷಕ್ಕಿದ್ದು, ಕಾವೇರಿ ನೀರು ಸದ್ಬಳಕೆ ಸೇರಿದಂತೆ ಮೇಕೆದಾಟು ಯೋಜನೆ ಅನುಷ್ಠಾನ ಮತ್ತಿತರ ಕಾರ್ಯಕ್ರಮಗಳ ಪೂರ್ಣ ಮಾಡುವ ಜವಾಬ್ದಾರಿ, ತಮ್ಮ ▶ 8ನೇ ಪುಟಕ್ಕೆ

ಕಮಲ ಕೆರೆಯಲ್ಲಿರಲಿ, ತೆನೆ ಹೊಲದಲ್ಲಿರಲಿ: ಡಿಕೆಶಿ

ಮಂಡ್ಯ, ಫೆ.11– ಕಮಲ ಕೆರೆಯಲ್ಲಿದ್ದರೆ ಚೆಂದ, ತೆನೆ ಹೊಲದಲ್ಲಿದ್ದರೆ ಚೆಂದ. ದಾನ, ಧರ್ಮ ಮಾಡಿರುವ ಕೈ ಅಧಿಕಾರಕ್ಕೆ ಬಂದರೆ ಚೆಂದ...ಮದ್ದೂರು ಪಟ್ಟಣದಲ್ಲಿ ಶನಿವಾರ ನಡೆದ ಪ್ರಜಾಧ್ವನಿ ಯಾತ್ರೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಾಚಿಸಿದ ಕವಿತೆ ಇದು.

ವಾಟ್ಸಾಪ್‌ನಲ್ಲಿ ಬಂದಿದ್ದ ಕವಿತೆಯನ್ನು ವಾಚಿಸಿದ ಅವರು "ಎಚ್.ಡಿ.ಕುಮಾರಸ್ವಾಮಿಗೆ ಅಧಿಕಾರ ಕೊಟ್ಟಿದ್ದೀರಿ, ನಾನೂ ನಿಮ್ಮ ಮನೆಯ ಮಗ. ನನಗೂ ಒಮ್ಮೆ ಅಧಿಕಾರ ಕೊಡಿ, ನನ್ನ ಅಧಿಕಾರವನ್ನೂ ಒಂದು ಬಾರಿ ನೋಡಿ" ಎನ್ನುತ್ತಾ ಪರೋಕ್ಷವಾಗಿ ಮುಖ್ಯಮಂತ್ರಿಯಾಗುವ ಅಭಿಲಾಷೆ ವ್ಯಕ್ತಪಡಿಸಿದರು. ಸಾಮೂಹಿಕ ನಾಯಕತ್ವದಲ್ಲಿ ಮುಂದಿನ ವಿಧಾನಸಭಾ ಚುನಾವಣೆ ನಡೆಸುತ್ತೇವೆ. ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಹಾಗೂ ನನ್ನ ನಾಯಕತ್ವಕ್ಕೆ ಜನರು ಆಶೀರ್ವಾದ ಮಾಡಬೇಕು. ಜೆಡಿಎಸ್ ಅಧಿಕಾರಕ್ಕೆ ಬರುವುದಿಲ್ಲ, ▶ 8ನೇ ಪುಟಕ್ಕೆ


ದೇಶ, ರಾಜ್ಯದ ಅಭಿವೃದ್ಧಿಗೆ ಕಾಂಗ್ರೆಸ್ ಕೊಡುಗೆ ಅಪಾರ: ಸಿಆರ್‌ಎಸ್

ಮದ್ದೂರು: ಸ್ವಾತಂತ್ರ್ಯ ನಂತರದಲ್ಲಿ ದೇಶದ ಅಭಿವೃದ್ಧಿಗೆ ಕಾಂಗ್ರೆಸ್ ಕೊಡುಗೆ ಅಪಾರ. ಐಟಿ–ಬಿಟಿ, 18 ವಯೋಮಾನದವರಿಗೆ ಮತದಾನದ ಹಕ್ಕು, ಮಹಿಳಾ ಮೀಸಲಾತಿ ಮತ್ತಿತರ ಸಾಧನೆಗಳು ರಾಜೀವ್‌ಗಾಂಧಿ ಅವರಿಂದ ದೊರಕಿದ್ದಾಗಿ ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಹಿಂದಿನ ಚುನಾವಣೆ ವೇಳೆ ಜಿಲ್ಲೆಯ 7 ಕ್ಷೇತ್ರಗಳನ್ನು ಜೆಡಿಎಸ್ ಅಭ್ಯರ್ಥಿಗಳಿಗೆ ಮೀಸಲಿಟ್ಟು ಅಭಿವೃದ್ಧಿಯಲ್ಲಿ 20 ವರ್ಷ ಹಿಂದೆ ತೆರಳುವಂತಾಗಿದ್ದು, ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಜಿಲ್ಲೆಯ 7 ಸ್ಥಾನಗಳನ್ನು ಕೊಟ್ಟು ಅಭಿವೃದ್ಧಿಗೆ ಕೈಜೋಡಿಸುವಂತೆ ಮನವಿ ಮಾಡಿದರು. ರೈತರಿಗೆ ಅಗತ್ಯ ವಿದ್ಯುತ್ ಸರಬರಾಜು, ಅನ್ನಭಾಗ್ಯ ಅಕ್ಕಿ ಕಡಿತ ಮತ್ತಿತರ ವೈಫಲ್ಯಗಳೊಟ್ಟಿಗೆ 40 ಪರ್ಸೆಂಟ್ ಸರಕಾರವೆಂಬ ಟೀಕೆಗೆ ಗುರಿಯಾಗಿರುವ ಬಿಜೆಪಿ ಸರ್ಕಾರ ಒಂದೆಡೆಯಾದರೆ ಮಹಿಳಾ ಸ್ತ್ರೀಶಕ್ತಿ ಸಂಘಗಳ ಸಾಲ ಮನ್ನಾ ಭರವಸೆ ನೀಡಿದ್ದ ಕುಮಾರಸ್ವಾಮಿ ಅವರ ವಾಗ್ದಾನ ವಿಫಲತೆ ಕುರಿತಾಗಿ ಸಭೆಯಲ್ಲಿ ಹಾಜರಿದ್ದ ಮಹಿಳೆಯರ ಗಮನಸೆಳೆದರು. ಚತುಷ್ಪಥ ಹೆದ್ದಾರಿ ನಿರ್ಮಾಣಕ್ಕೆ ಎಸ್.ಎಂ.ಕೃಷ್ಣ ಅವರೊಂದಿಗೆ ಅಂದಿನ ಸಚಿವ ಡಿ.ಕೆ.ಶಿವಕುಮಾರ್ ಮುನ್ನುಡಿ ಬರೆದರೆ ದಶಪಥ ರಸ್ತೆ ವಿಸ್ತರಣಾ ಕಾಮಗಾರಿ ಸಿದ್ದರಾಮಯ್ಯ ಅವಧಿಯಲ್ಲಿ ಡಿ.ಕೆ.ಶಿವಕುಮಾರ್ ಅವರ ಜತೆಗೂಡಿ ಕೈಗೊಂಡ ನಿರ್ಣಯವೆಂದರು.

ಚಾಮುಂಡಿಬೆಟ್ಟದಲ್ಲಿ ಚಲಿಸುತ್ತಿದ್ದ ಕಾರಲ್ಲಿ ಆಕಸ್ಮಿಕ ಬೆಂಕಿ

ಸಂಪೂರ್ಣ ಸುಟ್ಟು ಕರಕಲಾದ ಕಾರು, ಅದೃಷ್ಟವಶಾತ್ ಪ್ರಯಾಣಿಕರು ಪಾರು



ಮೈಸೂರು, ಫೆ.11(ಜಿಎ)–ಚಲಿಸುತ್ತಿದ್ದ ಕಾರಿನಲ್ಲಿ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡು ಕಾರು ಸಂಪೂರ್ಣವಾಗಿ ಸುಟ್ಟು ಕರಕಲಾದ ಘಟನೆ ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಇಂದು ಸಂಜೆ ಸಂಭವಿಸಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯವಾಗಿಲ್ಲ. ಬೆಂಗಳೂರಿನ ಹೆಚ್‌ಎಸ್‌ಆರ್ ಲೇಔಟ್ ನಿವಾಸಿ ಜೆ.ಪ್ರಶಾಂತ್ ▶ 2ನೇ ಪುಟಕ್ಕೆ

ಸಂಚಾರ ನಿಯಮ ಉಲ್ಲಂಘನೆ ದಂಡ ಶೇ. 50 ರಿಯಾಯಿತಿ

ಕೊನೆಯ ದಿನ 3,58,588 ಪ್ರಕರಣದಲ್ಲಿ 7,34,72,450 ರೂ. ದಾಖಲೆ ದಂಡ ಸಂಗ್ರಹ

● ಇದು ರಾತ್ರಿ 9 ಗಂಟೆವರೆಗೆ ಸಂಗ್ರಹವಾಗಿದ್ದ ಪ್ರಮಾಣ ● ಒಟ್ಟಾರೆ ಇದುವರೆಗೆ 4,63,167 ಪ್ರಕರಣದಲ್ಲಿ 9,49,10,300 ರೂ. ದಂಡ ಸಂಗ್ರಹ

ಮೈಸೂರು, ಫೆ. 11–ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡದಲ್ಲಿ ಶೇ. 50ರಷ್ಟು ರಿಯಾಯಿತಿ ನೀಡಿದ ಪರಿಣಾಮವಾಗಿ ಮೈಸೂರು ನಗರದಲ್ಲಿ ಫೆಬ್ರವರಿ 3ರಿಂದ ಇಂದು (ಫೆ. 11) ಸಂಜೆ 6 ಗಂಟೆವರೆಗೆ 9.49 ಕೋಟಿ ರೂ. ದಂಡ ಸಂಗ್ರಹವಾಗಿದೆ. ಇಂದು ರಾತ್ರಿ 12 ಗಂಟೆವರೆಗೂ ಕಾಲಾವಕಾಶವಿರುವುದರಿಂದ ದಂಡ ಸಂಗ್ರಹದ ಮೊತ್ತ 10 ಕೋಟಿ ತಲುಪಬಹುದು ಎಂದು ನಿರೀಕ್ಷಿಸಲಾಗಿದೆ.

ಶೇ. 50ರ ರಿಯಾಯಿತಿಯಲ್ಲಿ ದಂಡ ಪಾವತಿಸಲು ಕೊನೆ ದಿನವಾದ ಇಂದು ಸಂಜೆ 5 ಗಂಟೆಗೆ 8.37 ಕೋಟಿ ರೂ. ಸಂಗ್ರಹವಾದರೆ, ರಾತ್ರಿ 9 ಗಂಟೆ ವೇಳೆಗೆ ದಂಡ ಸಂಗ್ರಹದ ಮೊತ್ತ 9.49 ಕೋಟಿಗೆ ಏರಿಕೆಯಾಗಿತ್ತು. ಅಂದರೆ ಮೂರು ಗಂಟೆ ಅವಧಿಯಲ್ಲಿ 1.12 ಕೋಟಿ ರೂ. ದಂಡ ಸಂಗ್ರಹವಾಯಿತು. ತಡರಾತ್ರಿವರೆಗೂ ದಂಡ ಕಟ್ಟಲು ವಾಹನ ▶ 2ನೇ ಪುಟಕ್ಕೆ



ನನ್ನ ಸಾಹಿತ್ಯ ಶತಮಾನಗಳ ಕಾಲ ಉಳಿದರೆ ಅದೇ ನಿಜವಾದ ಪ್ರಶಸ್ತಿ

■ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಖ್ಯಾತ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪ ಆಶಯ
■ ಪ್ರಶಸ್ತಿ ಕ್ಷಣಕ್ಕೆ ಸಂತೋಷ ನೀಡುತ್ತದೆಯಷ್ಟೇ; ಆದರೆ ಸಾಹಿತ್ಯ ಜನರ ಮನಸ್ಸಲ್ಲಿ ಉಳಿದರೆ ಅದು ಸಾರ್ಥಕತೆ
■ ಮೈಸೂರಲ್ಲಿ 'ವಂದನೆ–ಅಭಿನಂದನೆ' ಆತ್ಮೀಯರಿಂದ ಅಭಿನಂದನೆ ಸ್ವೀಕರಿಸಿದ ಪದ್ಮ ಪ್ರಶಸ್ತಿ ಪುರಸ್ಕೃತರು



ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ಪದ್ಮ ಪ್ರಶಸ್ತಿ ಪುರಸ್ಕೃತರಾದ ಸಂಸ್ಕೃತ ಪತ್ರಿಕೆ ಸಂಪಾದಕಿ ಜಯಲಕ್ಷ್ಮೀ, ಡಾ.ಎಸ್.ಸುಬ್ಬರಾಮನ್, ಡಾ.ಎಸ್.ಎಲ್.ಭೈರಪ್ಪ ಹಾಗೂ ಡಾ.ಖಾದರ್ ವಲ್ಲಿ ಡಿದೇಕುಲಾ ಅವರನ್ನು ಅಭಿನಂದಿಸಲಾಯಿತು. ಸುತ್ತೂರು ಶ್ರೀಗಳು, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಡಾ. ಪ್ರಧಾನ ಗುರುದತ್ತ, ಡಾ.ಹೆಚ್.ವಿ.ನಾಗರಾಜರಾವ್, ಡಾ.ರೋಹಿತ್ ಈಶ್ವರ್, ಹೊನ್ನೂರು ಪ್ರಕಾಶ್, ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಮತ್ತಿತರರಿದ್ದರು.

ಮೈಸೂರು, ಫೆ11(ಎಸ್‌ಬಿಡಿ)–ಪ್ರಶಸ್ತಿ ಬಂದರೆ ಸಂತೋಷ, ಆದರೆ ನನ್ನ ಸಾಹಿತ್ಯ ಶತಮಾನಗಳ ಕಾಲ ಉಳಿದರೆ ಅದೇ ನಿಜವಾದ ಪ್ರಶಸ್ತಿ ಎಂದು ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾದ ಖ್ಯಾತ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಆಶಿಸಿದರು.

ಅಖಿಲ ಭಾರತೀಯ ಸಾಹಿತ್ಯ ಪರಿಷತ್, ಹೆಚ್.ವಿ.ರಾಜೀವ್ ಸ್ನೇಹ ಬಳಗ, ಹೊಯ್ಸಳ ಕರ್ನಾಟಕ ಸಂಘ ಹಾಗೂ ವಿವಿಧ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ಆಯೋಜಿಸಿದ್ದ 'ವಂದನೆ–ಅಭಿನಂದನೆ' ಪದ್ಮ ಪುರಸ್ಕೃತರಿಗೆ ಆತ್ಮೀಯ ಗೌರವ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಕುಮಾರವ್ಯಾಸರನ್ನು ಉದಾಹರಿಸಿ ಪ್ರಶಸ್ತಿ ಬಗ್ಗೆ ತಮ್ಮ ಮನದಾಳದ ಇಂಗಿತವನ್ನು ವ್ಯಕ್ತಪಡಿಸಿದರು. ಪ್ರಶಸ್ತಿಗಳು ಬಂದರೆ ಸಂತೋಷ. ಆದರೆ ಸಾಕಷ್ಟು ಸಾಧನೆ ಮಾಡಿದ ಎಷ್ಟೋ ಜನರಿಗೆ ಯಾವುದೇ ಪ್ರಶಸ್ತಿ ಬರುವುದೇ ಇಲ್ಲ. ಇದೆಲ್ಲಾ ನಿಜವಾದ ಪ್ರಶಸ್ತಿಗಳಲ್ಲ. ನಾನು ಕಾಲವಾದ ಬಳಿಕ ಕನಿಷ್ಠ 500 ವರ್ಷ ನನ್ನ ಪುಸ್ತಕ ▶ 8ನೇ ಪುಟಕ್ಕೆ

ಯಾತ್ರಾಸ್ಥಳ ಪ್ರವಾಸಿ ತಾಣವಾಗಬಾರದು...

ಮುಳ್ಳಯ್ಯನಗಿರಿ ಬೆಟ್ಟದಂತಹ ಎತ್ತರವಾದ ಬೆಟ್ಟ ಹತ್ತುವ ಆಸಕ್ತಿ ಚಿಕ್ಕಂದಿನಿಂದಲೂ ಇದೆ. ಹಣ ಜೋಡಿಸಿಕೊಂಡು ಹಿಮಾಲಯಕ್ಕೆ ಹೋಗಿದ್ದೆ. ಆಗ ಬಸ್ಸುಗಳು ಇರಲಿಲ್ಲ. ಇತ್ತೀಚೆಗೆ ಜೋಶಿ ಮಠ ಕುಸಿದಿರುವ ಬಗ್ಗೆ ಎಲ್ಲರಿಗೂ ಗೊತ್ತಿದೆ. ಆದರೆ ವಾಸ್ತವವಾಗಿ ಅದು ಜೊಶಿ ಮಠವಲ್ಲ ಜ್ಯೋತಿರ್ಮಠ. ಬಹಳ ಹಿಂದೆ ಕಾಲ್ನಡಿಗೆಯಲ್ಲಿ ಹೋಗುವ ಕಾಲದಲ್ಲಿ ನಾನು ಅಲ್ಲಿಗೆ ಹೋಗಿದ್ದೆ. ಅದು ಶಂಕರಾಚಾರ್ಯರು ಸ್ಥಾಪಿಸಿದ ಮಠ. ಅಲ್ಲಿ ಲಿಂಗವಿದೆ. ಪಕ್ಕದಲ್ಲಿ ಒಂದು ದೀಪ ಎಣ್ಣೆ ಇಟ್ಟಿರುತ್ತಾರೆ. ಅಲ್ಲಿಗೆ ಹೋಗುವ ಭಕ್ತರು ಉದ್ಧರಣೆಯಲ್ಲಿ ಎಣ್ಣೆಯನ್ನು ತೆಗೆದುಕೊಂಡು ದೀಪಕ್ಕೆ ಹಾಕಬೇಕಷ್ಟೆ. ನಾವು ಮಾಡಬೇಕಿರುವುದು ಅದನ್ನೇ. ಏಕೆಂದರೆ ಜ್ಯೋತಿ ಎನ್ನುವುದೇ ಪರಮಾತ್ಮ. ಆದರೆ ನಾಲ್ಕೈದು ವರ್ಷಗಳ ಹಿಂದೆ ಮತ್ತೆ ಹೋದಾಗ ಅಲ್ಲಿ ಬಹುಮಹಡಿ ಕಟ್ಟಡ, ಬಸ್ಸು ಇನ್ನಿತರ ವಾಹನಗಳ ಸಂಚಾರ ಹೆಚ್ಚಿದೆ. ಯಾತ್ರಾಸ್ಥಳ ಪ್ರವಾಸಿ ತಾಣವಾಗಿ ಬದಲಾಗಿದೆ. ನಮ್ಮ ಚಾಮುಂಡಿಬೆಟ್ಟದಲ್ಲೂ ಕೂಡ ಒಂದೇ ಸಮನೆ ಅಭಿವೃದ್ಧಿ ಕಾರ್ಯಗಳಾಗುತ್ತಿವೆ. ಅಭಿವೃದ್ಧಿ ಎನ್ನುವ ಪದವೇ ಅನರ್ಥವಾಗಿದೆ. ಎಷ್ಟೋ ಕಡೆ ಕುಸಿದಿದ್ದರೂ ರೋಪ್‌ವೇ ಮಾಡುತ್ತೇವೆ ಎನ್ನುತ್ತಾರೆ. ಅದಕ್ಕಾಗಿ ಕಂಬಗಳನ್ನು ನೆಡಲು ಬಂಡೆ ಒಡೆಯಬೇಕು. ಹಾಗೆ ಒಡೆದರೆ ಬೆಟ್ಟ ಕುಸಿಯುತ್ತದೆ. ಇದನ್ನು ಎಷ್ಟು ಬಾರಿ ಹೇಳಿದರೂ ಕೇಳುವುದೇ ಇಲ್ಲ. ಯಾಕೆ ಕೇಳುವುದಿಲ್ಲ ಎಂದರೆ ಇದರಲ್ಲಿರುವುದು ಭ್ರಷ್ಟಾಚಾರ ಅಷ್ಟೇ ಎಂದು ಎಸ್.ಎಲ್.ಭೈರಪ್ಪನವರು ಅಭಿಪ್ರಾಯಿಸಿದರು.

ಕುಕ್ಕರಹಳ್ಳಿ ಕೆರೆಯಲ್ಲಿ ಅಕ್ರಮ ಮೀನುಗಾರಿಕೆ: ನಾಲ್ವರು ಪೊಲೀಸ್ ವಶಕ್ಕೆ

ಕ್ರೈಂ ಬಾಕ್ಸ್

ಮೈಸೂರು, ಫೆ.11–ಮೈಸೂರಿನ ಕುಕ್ಕರಹಳ್ಳಿ ಕೆರೆಯಲ್ಲಿ ರಾತ್ರಿ ವೇಳೆ ಅಕ್ರಮವಾಗಿ ಮೀನು ಹಿಡಿಯುತ್ತಿದ್ದ ನಾಲ್ವರನ್ನು ಮೈಸೂರು ವಿವಿ ಭದ್ರತಾ ಸಿಬ್ಬಂದಿ ಹಿಡಿದು, ಪೊಲೀಸರಿಗೆ ಒಪ್ಪಿಸಿದ್ದಾರೆ. ಇವರಿಂದ ಮಾರುತಿ ಒಮ್ನಿ, 5 ಬಲೆ ಹಾಗೂ 50 ಕೆ.ಜಿ. ಮೀನು ವಶಪಡಿಸಿಕೊಳ್ಳಲಾಗಿದೆ. ಮೈಸೂರಿನ ಬಾಬು, ಆನಂದ, ಅಪ್ಪು ಹಾಗೂ ಇನ್ನೋರ್ವ ಬಾಬು ಪೊಲೀಸರ ಅತಿಥಿಗಳಾಗಿದ್ದು, ಇವರು ಫೆ.9ರಂದು ರಾತ್ರಿ 11 ಗಂಟೆ ಸುಮಾರಿನಲ್ಲಿ ಕುಕ್ಕರಹಳ್ಳಿ ಕೆರೆಯಲ್ಲಿ ತೆಪ್ಪದಲ್ಲಿ ಹೋಗಿ ಬಲೆ ಬೀಸಿ ಮೀನು ಹಿಡಿಯುತ್ತಿದ್ದರು. ಇವರನ್ನು ಹಿಡಿದ ಮೈಸೂರು ವಿವಿ ಭದ್ರತಾ ಸಿಬ್ಬಂದಿ ವಿವಿಯ ಭದ್ರತಾಧಿಕಾರಿ ಎ.ಸಿ.ಅಚ್ಚಪ್ಪ ಅವರಿಗೆ ಒಪ್ಪಿಸಿದ್ದಾರೆ. ಅವರು ಆರೋಪಿಗಳನ್ನು ಜಯಲಕ್ಷ್ಮೀಪುರಂ ಠಾಣೆ ಪೊಲೀಸರ ವಶಕ್ಕೆ ನೀಡಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಚೀಟಿ ಕಟ್ಟಿದ್ದವರಿಗೆ ಲಕ್ಷಾಂತರ ರೂ. ವಂಚಿಸಿದ ದಂಪತಿ

ಹಣಕ್ಕೆ ಪೀಡಿಸಿದರೆ ಆತ್ಮಹತ್ಯೆ ಮಾಡಿಕೊಳ್ಳುವ ಬೆದರಿಕೆ

ಮೈಸೂರು, ಫೆ.11–ಅಕ್ರಮವಾಗಿ ಚೀಟಿ ನಡೆಸುತ್ತಿದ್ದ ದಂಪತಿ ತಮ್ಮ ಬಳಿ ಚೀಟಿ ಹಾಕಿದವರಿಗೆ ಲಕ್ಷಾಂತರ ರೂ. ವಂಚಿಸಿದ್ದಲ್ಲದೇ, ಹಣ ಕೇಳಿದಾಗ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಮೈಸೂರಿನ ಕೇರ್ಗಳ್ಳಿಯಲ್ಲಿರುವ ನ್ಯಾಯಾಂಗ ಬಡಾವಣೆ ನಿವಾಸಿಗಳಾದ ಸಣ್ಣ ಶಿವು ಮತ್ತು ಆತನ ಪತ್ನಿ ಎಂ.ಎಸ್.ಗೀತಾ ಆರೋಪಕ್ಕೆ ಒಳಗಾದವರಾಗಿದ್ದು, ಇವರ ಬಳಿ ಮೈಸೂರಿನ ಕುವೆಂಪುನಗರ ಇ ಅಂಡ್ ಎಫ್ ಬ್ಲಾಕ್‌ನ ಸಿ.ಆರ್. ಗಾಯಿತ್ರಿ, ಅವರ ಪುತ್ರಿ ಪುನೀತಾ ಮತ್ತು ಪುತ್ರ ಯಶವಂತ್ ಚೀಟಿ ಹಾಕಿದ್ದು, ಒಟ್ಟು 23.45 ಲಕ್ಷ ರೂ. ಪಾವತಿಸಿದ್ದಾರೆ. ಇವರಿಗೆ ದಂಪತಿ ಹಣ ಮರುಪಾವತಿ ಮಾಡದೇ ವಂಚಿಸಿದ್ದಾರೆ. ಅಲ್ಲದೇ ಗಾಯತ್ರಿ ಅವರ ಸ್ನೇಹಿತರಾದ ಕುಶಾಲನಗರ ತಾಲೂಕು ಬೈಚನಹಳ್ಳಿ ನಿವಾಸಿ ಎನ್.ಬಿ.ಶೋಭಾ 6.50 ಲಕ್ಷ ಹಾಗೂ ಕುವೆಂಪು ನಗರ 1ನೇ ಹಂತ ಬಿ.ಸಿ.ಶೋಭಾ 4 ಲಕ್ಷ ರೂ. ಚೀಟಿ ಹಣ ಕಟ್ಟಿ ವಂಚನೆಗೊಳಗಾಗಿದ್ದಾರೆ ಎಂದು ಆರೋಪಿಸಲಾಗಿದೆ. ಈ ಸಂಬಂಧ ಕುವೆಂಪುನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಮನೆ ಬೀಗ ಮುರಿದು ಚಿನ್ನಾಭರಣ, ನಗದು ಕಳವು

ಮೈಸೂರು, ಫೆ.11–ಮನೆ ಬೀಗ ಮುರಿದು ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಘಟನೆ ಮೈಸೂರಿನ ಜಯದೇವನಗರದಿಂದ ವರದಿಯಾಗಿದೆ.

ಅಲ್ಲಿನ ನಿವಾಸಿ ಶಿವಸ್ವಾಮಿ(46) ಚಿನ್ನಾಭರಣ ಹಾಗೂ ನಗದು ಕಳೆದುಕೊಂಡವರಾಗಿದ್ದು, ಇವರು ಫೆ.9ರಂದು ತಮ್ಮ ಭಾವಮೈದನ ಮದುವೆಗಾಗಿ ಕುಟುಂಬ ಸಮೇತ ನಂಜನಗೂಡಿಗೆ ತೆರಳಿದ್ದರು. ಮರು ದಿನ ಹಿಂತಿರುಗಿದಾಗ ಮನೆಯ ಬೀಗ ಮುರಿದು ಒಳ ನುಗ್ಗಿದ್ದ ಖದೀಮರು, ಗೋಡ್ರೇಜ್ ಬೀರುವನ್ನು ಮೀಟಿ ಅದರಲ್ಲಿದ್ದ ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಮೇಟಗಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವ ಜನರಲ್ಲಿ ಉದ್ಯೋಗ ಪೂರಕ ಜ್ಞಾನ ತುಂಬಲು ಮತ್ತೆ 10 ಲ್ಯಾಂಗ್ವೇಜ್ ಲ್ಯಾಬ್ ಸ್ಥಾಪನೆ

ಬೆಂಗಳೂರು, ಫೆ.11(ಕೆಎಂಶಿ)– ಯುವಜನರನ್ನು ಉದ್ಯೋಗಕ್ಕೆ ಅರ್ಹ ರನ್ನಾಗಿ ಮಾಡುವ ನಿಟ್ಟಿನಲ್ಲಿ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇನ್ನೂ 10 ಲ್ಯಾಂಗ್ವೇಜ್ ಲ್ಯಾಬ್‌ಗಳನ್ನು ಸ್ಥಾಪಿಸಲಾಗುವುದು ಎಂದು ಕೌಶಲ್ಯಾಭಿವೃದ್ಧಿ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ ಹೇಳಿದ್ದಾರೆ. ಕೌಶಲ್ಯಾಭಿವೃದ್ಧಿ ಇಲಾಖೆಯ ವತಿಯಿಂದ ಮಲ್ಲೇಶ್ವರಂನಲ್ಲಿ ಏರ್ಪಡಿಸಿದ್ದ ಉದ್ಯೋಗ ಮೇಳವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಉದ್ಯೋಗ ಅವ ಕಾಶಗಳಿಗೆ ಕೊರತೆ ಇಲ್ಲ. ಮುಖ್ಯಮಂತ್ರಿಗಳ ಮತ್ತು ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ 18ರಿಂದ 35 ವರ್ಷಗಳ ಒಳಗಿನ ಯುವಜನರಿಗೆ ಕೌಶಲ್ಯಾಭಿ ವೃದ್ಧಿ ತರಬೇತಿ ಕೊಟ್ಟು, ಉದ್ಯೋಗಗಳಿಗೆ ಸಜ್ಜುಗೊಳಿಸಲಾಗುತ್ತಿದೆ ಎಂದರು. ಸ್ಕಿಲ್ ಪೋರ್ಟಲ್ ವೇದಿಕೆಯಲ್ಲಿ ಈಗಾ ಗಲೇ 250 ಕಂಪನಿಗಳು ನೋಂದಣಿ ಆಗಿವೆ. ಹಾಗೆಯೇ ಸ್ಕಿಲ್ ಕನೆಕ್ಟ್ ಉಪಕ್ರಮದಡಿ 25 ಸಾವಿರ ಉದ್ಯೋಗ ನೇಮಕಾತಿಗೆ ಚಾಲನೆ ನೀಡಲಾಗಿದೆ.

ಒಂದನೇ ಪುಟದಿಂದ

ದಾಖಲೆ ದಂಡ ಸಂಗ್ರಹ

ಸವಾರರು ಪೊಲೀಸ್ ಠಾಣೆಗಳ ಮುಂದೆ ಸಾಲುಗಟ್ಟಿ ನಿಂತಿದ್ದು ಕಂಡುಬಂದಿದೆ. ಹೆಚ್ಚಿನ ಸಂಖ್ಯೆಯಲ್ಲಿ ವಾಹನ ಸವಾರರು ದಂಡ ಕಟ್ಟಲು ಆಗಮಿಸಿದ್ದರಿಂದ ಪದೇ ಪದೆ ಸರ್ವರ್ ಡೌನ್ ಆಗುತ್ತಿದ್ದದ್ದು ಕಂಡು ಬಂತು. 2019ರಿಂದ 2022ರ ನವೆಂಬರ್ 30ರವರೆಗೆ ಮೈಸೂರು ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆಯ ಒಟ್ಟು 25,51,048 ಪ್ರಕರಣಗಳಲ್ಲಿ 127,82,93,700 ರೂ. ದಂಡ ಸಂಗ್ರಹವಾಗಬೇಕಾಗಿತ್ತು. ಸರ್ಕಾರವು ಶೇ. 50ರ ರಿಯಾಯ್ತಿ ನೀಡಿದ್ದರಿಂದ 9 ದಿನಗಳ ಅವಧಿಯಲ್ಲಿ ಇನ್ನೂ 3 ಗಂಟೆ ಬಾಕಿ ಇರುವಾಗಲೇ 9.49 ಕೋಟಿ ರೂ. ಸಂಗ್ರಹವಾಗಿದೆ. ಈ ಮೂಲಕ 4,63,167 ಪ್ರಕರಣಗಳು ಇತ್ಯರ್ಥವಾಗಿದೆ. 2019ರಿಂದ 2022ರ ನವೆಂಬರ್ 30ರವರೆಗೆ ಸಂಚಾರ ನಿಯಮ ಉಲ್ಲಂಘನೆಯ ಒಟ್ಟು 30,17,367 ಪ್ರಕರಣಗಳು ದಾಖಲಾಗಿದ್ದು, ಅವುಗಳ ಪೈಕಿ ದಂಡ ಪಾವತಿಸದ 25,51,048 ಪ್ರಕರಣಗಳಲ್ಲಿ 127.82 ಕೋಟಿ ರೂ. ದಂಡ ಬಾಕಿ ಉಳಿದಿತ್ತು, ಈ ಅವಧಿಯಲ್ಲಿ ಅಂದರೆ, 4 ವರ್ಷದಲ್ಲಿ ಕೇವಲ 4,66,319 ಪ್ರಕರಣಗಳು ಮಾತ್ರ ಇತ್ಯರ್ಥವಾಗಿತ್ತು. ಆದರೆ, ದಂಡ ರಿಯಾಯಿತಿ ಫಲವಾಗಿ ಕೇವಲ 9 ದಿನದಲ್ಲಿ 4,63,176 ಪ್ರಕರಣಗಳು ಇತ್ಯರ್ಥವಾಗಿವೆ.

ರಿಯಾಯ್ತಿ ಯೋಜನೆ ಜಾರಿಗೆ ಬಂದ ಫೆಬ್ರವರಿ 3ರಂದು ಯೋಜನೆಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತಾದರು, ಅಂದು 1734 ಪ್ರಕರಣಗಳಲ್ಲಿ 3,67,150 ರೂ. ದಂಡ ಸಂಗ್ರಹವಾಗಿತ್ತು. ಮರುದಿನದಿಂದ ಸಾರ್ವಜನಿಕರ ಪ್ರತಿಕ್ರಿಯೆ ಉತ್ತಮವಾಗಿದ್ದು, ಫೆಬ್ರವರಿ 4 ರಂದು ಒಟ್ಟಾರೆ 13,814 ಪ್ರಕರಣಗಳು ಇತ್ಯರ್ಥವಾಗಿ 29,15,850 ರೂ.ಗಳಿಗೆ ಸಂಗ್ರಹ ಮೊತ್ತ ಏರಿಕೆಯಾಯಿತು. ಫೆಬ್ರವರಿ 5ರಂದು ಒಟ್ಟಾರೆ 22,608 ಪ್ರಕರಣ ಇತ್ಯರ್ಥವಾಗಿ 48,06,400 ರೂ., ಫೆಬ್ರವರಿ 6ರಂದು ಒಟ್ಟಾರೆ 30,569 ಪ್ರಕರಣಗಳಲ್ಲಿ 64,30,550 ರೂ., ಫೆಬ್ರವರಿ 7ರಂದು ಒಟ್ಟಾರೆ 32,154 ಪ್ರಕರಣದಲ್ಲಿ 67,26,900 ರೂ., ಫೆಬ್ರವರಿ 8 ರಂದು ಒಟ್ಟಾರೆ 38,972 ಪ್ರಕರಣದಲ್ಲಿ 80,18,900 ರೂ., ಫೆಬ್ರವರಿ 9ರಂದು 59,534 ಪ್ರಕರಣದಲ್ಲಿ 1,21,20,900 ರೂ., ಫೆಬ್ರವರಿ 10 ಒಟ್ಟಾರೆ 1,04,579 ಪ್ರಕರಣದಲ್ಲಿ 2,14,37,850 ರೂ. ಸಂಗ್ರಹವಾದರೆ, ಇಂದು (ಫೆಬ್ರವರಿ 11) ರಾತ್ರಿ 9 ಗಂಟೆ ವೇಳೆಗೆ 4,63,167 ಪ್ರಕರಣದಲ್ಲಿ 9,49,10,300 ರೂ. ಸಂಗ್ರಹವಾಗಿದೆ. ರಿಯಾಯ್ತಿ ದರದ ದಂಡ ಸಂಗ್ರಹ ಯೋಜನೆಯ ಮೊದಲ 8 ದಿನಗಳಲ್ಲಿ 1,04,579 ಪ್ರಕರಣಗಳು ಇತ್ಯರ್ಥವಾಗಿ 2,14,37,850 ರೂ. ಸಂಗ್ರಹವಾಗಿದ್ದರೆ, ಕೊನೆಯ ದಿನವಾದ ಇಂದು ಮೂರು ಗಂಟೆಗಳ ಕಾಲ ಬಾಕಿ ಇರುವಂತೆಯೇ 3,58,588 ಪ್ರಕರಣಗಳು ಇತ್ಯರ್ಥವಾಗಿ 7,34,72,450 ರೂ. ಸಂಗ್ರಹವಾಗಿದೆ.

ಚಲಿಸುತ್ತಿದ್ದ ಕಾರಲ್ಲಿ ಆಕಸ್ಮಿಕ ಬೆಂಕಿ

ಕುಮಾರ್ ಎಂಬುವರ ಸಂಬಂಧಿಕರು ದೇವರ ದರ್ಶನಕ್ಕಾಗಿ ಚಾಮುಂಡಿಬೆಟ್ಟಕ್ಕೆ ಹುಂಡೈ–ಐ–20 ಕಾರು (ಕೆಎ 16 ಎಂ 9003)ನಲ್ಲಿ ತೆರಳುತ್ತಿದ್ದಾಗ ಬೆಟ್ಟದ ವ್ಯೂ–ಪಾಯಿಂಟ್ ಬಳಿ ಕಾರಿನಿಂದ ಹೊಗೆ ಬರುತ್ತಿರುವುದನ್ನು ಗಮನಿಸಿದ ಕೆಲ ವಾಹನ ಸವಾರರು ಕಾರಿನ ಚಾಲಕನನ್ನು ಎಚ್ಚರಿಸಿದ್ದಾರೆ. ಕಾರು ಚಾಲಕ ಮೈಸೂರಿನ ಕೆ.ಜಿ.ಕೊಪ್ಪಲು ನಿವಾಸಿ ಮಹೇಶ್ ಬಿ.ಗೌಡ ತಕ್ಷಣವೇ ಕಾರನ್ನು ನಿಲ್ಲಿಸಿ, ಕಾರಿನಲ್ಲಿದ್ದವರನ್ನು ಕೆಳಗಿಳಿಸಿ ನಂತರ ಬ್ಯಾನೆಟ್ ತೆರೆದು ನೋಡಿದಾಗ ಇಂಜಿನ್‌ನಿಂದ ಬೆಂಕಿ ಹೊತ್ತಿ ಉರಿಯುತ್ತಿರುವುದು ಕಂಡು ಬಂದಿದೆ. ಬೆಂಕಿ ನಂದಿಸಲು ಎಷ್ಟೇ ಪ್ರಯತ್ನಿಸಿದರೂ, ಬೆಂಕಿಯ ಜ್ವಾಲೆ ಹೆಚ್ಚಾಗಿ ಕ್ಷಣಾರ್ಧದಲ್ಲಿ ಕಾರು ಹೊತ್ತಿ ಉರಿದು ಕರಕಲಾಗಿದೆ. ಈ ಸಂಬಂಧ ಕಾರು ಚಾಲಕ ಮಹೇಶ್ ಬಿ.ಗೌಡ ನೀಡಿದ ದೂರನ್ನು ಕೆ.ಆರ್.ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದಾರೆ.


ನಿಧನ



ಬಿ.ಕೆ. ರಾಜು

ಮೈಸೂರು, ಫೆ. 11– ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಅಧೀಕ್ಷಕರಾದ, ಸಿದ್ಧಾರ್ಥ ಬಡಾವಣೆಯ ನಿವಾಸಿ ಬಿ.ಕೆ. ರಾಜು ಅವರು ಶನಿವಾರ ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ನಿಧನರಾದರು. ಅವರಿಗೆ 77 ವರ್ಷ ವಯಸ್ಸಾಗಿತ್ತು. ದಿವಂಗತರು ಪತ್ನಿ ಎಂ.ಸಿ. ವಿಜಯಲಕ್ಷ್ಮೀ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮಕ್ಕಳು ವಿದೇಶದಲ್ಲಿದ್ದು, ಅವರು ಸೋಮವಾರ (ಫೆ.13) ಮೈಸೂರಿಗೆ ಆಗಮಿಸುವುದರಿಂದ ಅಂದು ಮಧ್ಯಾಹ್ನ 12 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸೌಭಾಗ್ಯ ಮಣಿ





ಮೈಸೂರು, ಫೆ.11– ಮರಿಮಲ್ಲಪ್ಪ ಕಾಲೇಜಿನ ನಿವೃತ್ತ ಶಿಕ್ಷಕಿ ಸೌಭಾಗ್ಯ ಮಣಿ(74) ಶನಿವಾರ ನಿಧನರಾಗಿದ್ದಾರೆ. ಮೃತರು ಅಪಾರ ಬಂಧು ಬಳಗವನ್ನು ಆಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಚಾಮರಾಜನಗರ ಜಿಲ್ಲೆಯ ಗಟವಾಡಿಪುರದ ಫಾರಂ ಹೌಸ್‌ನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾವೇ ಸ್ವಂತವಾಗಿ ಹೈಸ್ಪೀಡ್ ರೈಲು ರೂಪಿಸುವಂತಾಗಲಿ

● ವಂದೇ ಭಾರತ್ ಎಕ್ಸ್‌ಪ್ರೆಸ್ ನಿರ್ಮಾತೃ ಸುಧಾಂಶುಮಣಿ ಅಭಿಮತ, ಜಪಾನೀಸ್ ತಂತ್ರಜ್ಞಾನ ಅವಲಂಬಿಸದೆ ಹೈಸ್ಪೀಡ್ ರೈಲು ತಯಾರಿಸಲು ಸಲಹೆ

● ಮಾಹಿತಿ ತಂತ್ರಜ್ಞಾನಕ್ಕೆ ಮಿಗಿಲಾದ ಬಾಹ್ಯಾಕಾಶ ವಿಜ್ಞಾನಕ್ಕೆ ಒತ್ತು ನೀಡುವಂತೆ ಯುವ ಇಂಜಿನಿಯರ್‌ಗಳಿಗೆ 'ಮೂನ್ ಮ್ಯಾನ್ ಆಫ್ ಇಂಡಿಯಾ'ದ ಡಾ. ಮೈಲಸ್ವಾಮಿ ಅಣ್ಣಾದುರೈ ಸಲಹೆ





ಮೈಸೂರು, ಫೆ.11(ಆರ್‌ಕೆ)–ಜಪಾನೀಸ್ ತಂತ್ರಜ್ಞಾನಕ್ಕಾಗಿ ಕಾಯದೇ ನಾವೇ ಸ್ವತವಾಗಿ ಹೈಸ್ಪೀಡ್ ರೈಲನ್ನು ರೂಪಿಸಬೇಕೆಂದು ದೇಶಕ್ಕೆ ವಂದೇ ಭಾರತ್ ರೈಲು ನಿರ್ಮಿಸಿ ಕೊಟ್ಟಿರುವ ಚೆನ್ನೈನ ಇಂಟೆಗ್ರಲ್ ಕೋಚ್ ಕಾರ್ಖಾನೆ (ICF) ಮಾಜಿ ಪ್ರಧಾನ ವ್ಯವಸ್ಥಾಪಕ ಸುಧಾಂಶುಮಣಿ ಯುವ ವಿಜ್ಞಾನಿಗಳಿಗೆ ಕರೆಕೊಟ್ಟಿದ್ದಾರೆ.

ನ್ಯಾಷನಲ್ ಇನ್ಸಿಟ್ಯೂಷನ್ ಆಫ್ ಇಂಜಿನಿಯರಿಂಗ್ (ಎನ್‌ಐಇ) ಸಹಯೋಗದೊಂದಿಗೆ ಎಲ್‌ಅಂಡ್‌ಟಿ ಟೆಕ್ನಾಲಜೀಸ್ ಸರ್ವಿಸಸ್ (ಎಲ್‌ಟಿಟಿಎಸ್) ಸಂಸ್ಥೆಯು ಮೈಸೂರಿನ ಮಾನಸ ಗಂಗೋತ್ರಿಯಲ್ಲಿರುವ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಘಟಿಕೋತ್ಸವ ಸಭಾಂಗಣದಲ್ಲಿ ಇಂದು ಏರ್ಪಡಿಸಿದ್ದ "ಇಲ್ಯುಮಿನೇಟ್: ಸೆಲಿಬ್ರೇಟಿಂಗ್ ಇಂಜಿನಿಯರಿಂಗ್ ಎಕ್ಸಲೆನ್ಸ್" ವಿಷಯದ ಕಾರ್ಯಾಗಾರದಲ್ಲಿ ಪಾಲ್ಗೊಂಡು ಅವರು ಮಾತನಾಡುತ್ತಿದ್ದರು. ಹೈಸ್ಪೀಡ್ ರೈಲು ರೂಪಿಸಿ ಸ್ವಾವಲಂಬನೆ ಸಾಧಿಸುವುದು ಕಷ್ಟಸಾಧ್ಯವೇನಿಲ್ಲ. ಯಾವುದೇ ನಿಲುವು ಕೈಗೊಂಡರೆ ಅದರ ಮೇಲೆ ವಿಶ್ವಾಸ, ನಂಬಿಕೆ ಇರಬೇಕು. ಮಾಜಿ ರಾಷ್ಟ್ರಪತಿ ಡಾ. ಎಪಿಜೆ ಅಬ್ದುಲ್ ಕಲಾಂ ಅವರ ಕಲ್ಪನೆಯಂತೆ ಕನಸನ್ನು ನನಸು ಮಾಡುವ ಆತ್ಮವಿಶ್ವಾಸವಿರಬೇಕು ಎಂದ ಅವರು, ಆತ್ಮನಿರ್ಭರದಂತಹ ಸವಾಲಿನ ಯೋಜನೆಯನ್ನು 21 ತಿಂಗಳಲ್ಲಿ ಅನುಷ್ಠಾನಗೊಳಿಸಿದ್ದನ್ನು ಇದೇ ಸಂದರ್ಭ ಮೆಲುಕು ಹಾಕಿದರು.

ಇಂಟೆಗ್ರಲ್ ಕೋಚ್ ಕಾರ್ಖಾನೆಯಲ್ಲಿ ಟ್ರೇನ್ ಕೋಚ್‌ಗಳನ್ನು ತಯಾರಿಸುವ ವೇಳೆ ಚೆನ್ನೈನ 29 ಮಂದಿ ಮಹಿಳೆಯರು ಸಾಥ್ ನೀಡಿದ್ದರು. ಅಂತಿಮವಾಗಿ ವಂದೇ ಭಾರತ್ ರೈಲುಗಾಡಿಯನ್ನು ಅತ್ಯದ್ಭುತವಾಗಿ ನಿರ್ಮಿಸಲು ಸಾಧ್ಯವಾಯಿತು ಎಂದು ಸುಧಾಂಶುಮಣಿ ಇದೇ ವೇಳೆ ನುಡಿದರು.

ಭಾರತಕ್ಕಾಗಿ ಭಾರತೀಯರೇ ತಯಾರಿಸಿದ ರೈಲು ಇದು. ಆದ್ದರಿಂದ ನೀವು ಮಾಡುವ ಕೆಲಸವನ್ನು ಪ್ರೀತಿಸಿ. ಅದೇ ರೀತಿ ನಿಮ್ಮ ಸಂಸ್ಥೆಯನ್ನು ಪ್ರೀತಿಸಬೇಕು ಎಂದು ವಿಶೇಷವಾಗಿ ಯುವಕರು ಸೇರಿದಂತೆ ನೆರೆದಿದ್ದವರಿಗೆ ಅವರು ಸಲಹೆ ನೀಡಿದರು.

ಮೂನ್ ಮ್ಯಾನ್ ಆಫ್ ಇಂಡಿಯಾ: ಬಾಹ್ಯಾಕಾಶ ವಿಜ್ಞಾನದೆಡೆಗೆ ಮಕ್ಕಳು ಮತ್ತು ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸುವ ಕೆಲಸ ಶಾಲೆಗಳಲ್ಲಿ ಆಗಬೇಕು ಎಂದು ಮೂನ್ ಮ್ಯಾನ್ ಎಂದೇ ಖ್ಯಾತಿಯಾಗಿರುವ ಬಾಹ್ಯಾಕಾಶ ವಿಜ್ಞಾನಿ ಡಾ. ಮೈಲಸ್ವಾಮಿ ಅಣ್ಣಾದುರೈ ಸಲಹೆ ನೀಡಿದ್ದಾರೆ.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ)ಯಲ್ಲಿ 36 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿ ಚಂದ್ರಯಾನ–1 ಯೋಜನೆ ಯಶಸ್ವಿಗೊಳಿಸಿದ ಕೀರ್ತಿಗೆ ಪಾತ್ರರಾಗಿರುವ ಅವರು, ಯೋಜನೆಯು ಯುವ ಪ್ರತಿಭೆಗಳಿಗೆ ಯಾವ ರೀತಿ ಉತ್ತೇಜನ ನೀಡಿತು ಎಂಬುದನ್ನು ವಿಡಿಯೋ ತೋರಿಸುವ ಮೂಲಕ ವಿವರಿಸಿದರು. ಕೇವಲ ಮಾಹಿತಿ ತಂತ್ರಜ್ಞಾನ ಕ್ಷೇತ್ರವನ್ನು ನಂಬುವ ಬದಲು, ಬಾಹ್ಯಾಕಾಶದೆಡೆಗೂ ಆಸಕ್ತಿ ತೋರಿಸಬೇಕೆಂದು ಅವರು ಇದೇ ಸಂದರ್ಭ ನುಡಿದರು. ಅದಕ್ಕೂ ಮೊದಲು ಎಲ್‌ಟಿಟಿಎಸ್‌ನ ಡೆಲಿವರಿ ಮುಖ್ಯಸ್ಥ ಶೈಲೇಂದ್ರ ಸಂವಾದ ನಡೆಸಿದರು.

ಲೋಕ್ ಅದಾಲತ್‌ನಲ್ಲಿ ವಿಚ್ಛೇದನ ಬಯಸಿದ 36 ಜೋಡಿ ಮತ್ತೆ ಒಂದಾಗಿ ಬಾಳುವ ನಿರ್ಧಾರ



ಮೈಸೂರು, ಫೆ.11(ಎಂಟಿವೈ)– ಮೈಸೂರಿನಲ್ಲಿ ಶನಿವಾರ ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ವಿಚ್ಛೇದನ ಬಯಸಿ ನ್ಯಾಯಾಲಯದ ಮೆಟ್ಟಿಲೇರಿದ್ದ 36 ಜೋಡಿಗಳು ವೈಮನಸ್ಸು ಮರೆತು, ರಾಜೀ ಸಂಧಾನದ ಮೂಲಕ ಮತ್ತೆ ಬಾಳ ಸಂಗಾತಿಗಳಾಗುವ ನಿರ್ಧಾರಕ್ಕೆ ಬಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಮೈಸೂರು ಜಿಲ್ಲಾ ವಕೀಲರ ಸಂಘದ ನೆರವಿನೊಂದಿಗೆ ನಡೆದ ಅದಾಲತ್‌ನಲ್ಲಿ ವಕೀಲರು ಹಾಗೂ ಸಂಧಾನಕಾರರ ಮಧ್ಯಸ್ಥಿಕೆಯಲ್ಲಿ ಎರಡೂ ಕುಟುಂಬಗಳ ಸದಸ್ಯರು, ಮುನಿಸಿಕೊಂಡಿದ್ದ ಜೋಡಿಗಳು ಮಾತುಕತೆ ಮೂಲಕ ವಿವಾದ ಬಗೆಹರಿಸಿಕೊಂಡರಲ್ಲದೆ, ಕೆಟ್ಟ ಘಳಿಗೆಯಲ್ಲಾದ ಮನಸ್ತಾಪಕ್ಕೆ ಇತಿಶ್ರೀ ಹಾಡಿ, ಪರಸ್ಪರ ಅನ್ಯೋನ್ಯತೆಯಿಂದ ಬಾಳ್ವೆ ನಡೆಸಲು ನಿರ್ಧರಿಸಿದ್ದಾರೆ. ಲೋಕ ಅದಾಲತ್ ಹಿನ್ನೆಲೆಯಲ್ಲಿ ಮೈಸೂರಿನ ಮಳಲವಾಡಿಯಲ್ಲಿರುವ ನ್ಯಾಯಾಲಯದ ಕೊಠಡಿಯಲ್ಲಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಜಿ.ಎಸ್.ಸಂಗ್ರೇಶಿ ಅವರ ಸಮ್ಮುಖದಲ್ಲಿ ಈ 36 ಜೋಡಿಗಳು ಪರಸ್ಪರ ಸಿಹಿ ತಿನ್ನಿಸಿ ಹೊಂದಿಕೊಂಡು ಜೀವನ ನಡೆಸುವುದಾಗಿ ವಾಗ್ದಾನ ಮಾಡಿದರು.

ಅದಾಲತ್ ಯಶಸ್ವಿಯಾಗಿದೆ: ಇದೇ ವೇಳೆ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಜಿ.ಎಸ್. ಸಂಗ್ರೇಶಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವಿವಿಧ ಕಾರಣದಿಂದ ಮನಸ್ತಾಪಗೊಂಡು ಪರಸ್ಪರ ವಿಚ್ಛೇದನ ಬಯಸಿದ್ದ 36 ಜೋಡಿಗಳನ್ನು ವಕೀಲರ ಮೂಲಕ ರಾಜೀ ಸಂಧಾನ ನಡೆಸಿ, ಒಂದಾಗಿ ಬಾಳುವಂತೆ ಮನವರಿಕೆ ಮಾಡಿಕೊಡಲಾಗಿದೆ. ಮೈಸೂರು ನಗರ ವ್ಯಾಪ್ತಿಯ 27, ಗ್ರಾಮಾಂತರ ಪ್ರದೇಶದ 9 ಜೋಡಿ ಇಂದು ನಡೆದ ಅದಾಲತ್‌ನಲ್ಲಿ ಮತ್ತೆ ಒಂದಾಗಿ, ಬಾಳುವ ನಿರ್ಧಾರಕ್ಕೆ ಬಂದವು. ಮೈಸೂರು ನ್ಯಾಯಾಲಯದಲ್ಲಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಕೆಯಾದ 1,322 ಪ್ರಕರಣಗಳಿದ್ದು, ಅವುಗಳಲ್ಲಿ 200 ಪ್ರಕರಣಗಳನ್ನು ರಾಜೀ ಸಂಧಾನಕ್ಕೆ ಗುರುತಿಸಲಾಗಿತ್ತು. ಶನಿವಾರ ನಡೆದ ಅದಾಲತ್‌ನಲ್ಲಿ 36 ಜೋಡಿಗೆ ಬುದ್ಧಿವಾದ ಹೇಳಿ, ಸಹಬಾಳು ಸಮಬಾಳು ಮನವರಿಕೆ ಮಾಡಿಕೊಡಲಾಗಿದೆ. ಒಂದಾದ ಜೋಡಿಗಳಿಗೆ ಅದಾಲತ್‌ನಿಂದ ಸಿಹಿ ಹಾಗೂ ಹೂ ಗಿಡವನ್ನು ನೀಡಿ ಶುಭ ಹಾರೈಸಲಾಗಿದೆ ಎಂದರು.

ದಂಡ ರಿಯಾಯ್ತಿಗೆ ಉತ್ತಮ ಪ್ರತಿಕ್ರಿಯೆ: ಸಂಚಾರ ನಿಯಮ ಉಲ್ಲಂಘನೆ ಸಂಬಂಧ ದಂಡ ಪಾವತಿಗೆ ಶೇ.50ರಷ್ಟು ರಿಯಾಯಿತಿ ಘೋಷಣೆ ಮಾಡಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಆರು ಕೋಟಿ ರೂ.ಗಳಿಗೂ ಹೆಚ್ಚು ದಂಡ ಶುಲ್ಕ ಸಂಗ್ರಹವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ, ಕೌಟುಂಬಿಕ ನ್ಯಾಯಾಲಯಗಳ ನ್ಯಾಯಾಧೀಶರಾದ ಗಿರೀಶ್ ಭಟ್, ವೇಲಾ ಕೊಡೆ, ರೋಡಾಲ್ಡ್ ಪೇರೆರಾ, ಮೈಸೂರು ಜಿಲ್ಲಾ ವಕೀಲರ ಸಂಘದ ಮಹದೇವ ಸ್ವಾಮಿ, ಕಾರ್ಯದರ್ಶಿ ಉಮೇಶ್ ಇದ್ದರು.


ಲೋಕ ಅದಾಲತ್‌ನಲ್ಲಿ 4,35,778 ಪ್ರಕರಣಗಳು ಇತ್ಯರ್ಥ 85,50,41,931 ರೂ. ಸರ್ಕಾರಕ್ಕೆ ಜಮಾ

ಮೈಸೂರು, ಫೆ.11– ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಶನಿವಾರ ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ 20,753 ಪ್ರಕರಣಗಳು ರಾಜಿಯಾಗಿದ್ದು, 4,35,778 ಪ್ರಕರಣಗಳು ಇತ್ಯರ್ಥವಾಗಿ 85,50,41,931 ರೂ. ಸರ್ಕಾರಕ್ಕೆ ಜಮೆಯಾಗಿದೆ.

ಮೈಸೂರು ನಗರ ಮತ್ತು ತಾಲೂಕುಗಳಲ್ಲಿನ ನ್ಯಾಯಾಲಯಗಳಲ್ಲಿ ಒಟ್ಟು 1,12,918 ಪ್ರಕರಣಗಳು ಬಾಕಿಯಿದ್ದು, ಅವುಗಳ ಪೈಕಿ 35,821 ಪ್ರಕರಣಗಳು ರಾಜಿಯಾಗಬಲ್ಲ ಪ್ರಕರಣಗಳೆಂದು ಗುರುತಿಸಿ, ಅವುಗಳಲ್ಲಿ 20,753 ಪ್ರಕರಣಗಳನ್ನು ರಾಜಿಯಾಗಿವೆ.

ನ್ಯಾಯಾಲಯದಲ್ಲಿ ಬಾಕಿರುವ ಪ್ರಕರಣಗಳಲ್ಲಿ ರಾಜಿಗೆ ಗುರುತಿಸಲಾದ 20,753 ಪ್ರಕರಣಗಳ ಪೈಕಿ 4,003 ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಹಾಗೂ 3,578 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಅಂದರೆ ಒಟ್ಟಾರೆಯಾಗಿ 7,581 ಪ್ರಕರಣಗಳನ್ನು ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಲಾಗಿದೆ ಎಂದು ಜಿಲ್ಲಾ ಕಾನೂನು ಸೇವಾಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.2.2023 ಭಾನುವಾರ, ಮಳೆ ನಕ್ಷತ್ರ: ಧನಿಷ್ಠ, 6.02.2023ರಿಂದ 18.02.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಸ್ವಾತಿ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಜೆಎಸ್‌ಎಸ್ ಯೋಗ ಫೌಂಡೇಶನ್, ಸಪ್ತಮಾತೃಕ ದೇವಸ್ಥಾನ, ವಿಜಯನಗರ :** ಉಚಿತ ಆಯುರ್ವೇದ ತಪಾಸಣಾ ಶಿಬಿರ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಅತಿಥಿಗಳು : ಮೇಯರ್ ಶಿವಕುಮಾರ್, ಮಾಜಿ ಸಚಿವ ಸಿ.ಹೆಚ್. ವಿಜಯಶಂಕರ್, ಜೆಎಸ್‌ಎಸ್ ಸಂಸ್ಥೆ ಸಂಸ್ಥಾಪಕ ಶ್ರೀಹರಿ, ಭಾರತ್ ಸ್ವಾಭಿಮಾನ್ ಟ್ರಸ್ಟ್‌ನ ಶಶಿಕುಮಾರ್, ಸಹಾಯಕ ನಿರ್ದೇಶಕ ಡಾ. ಲಕ್ಷ್ಮೀನಾರಾಯಣ ಶೆಣೈ, ಮುಡಾ ನಿವೃತ್ತ ಅಭಿಯಂತರ ಭಾಸ್ಕರ್, ಸ್ಥಳ: ಸಪ್ತಮಾತೃಕ ದೇವಸ್ಥಾನ, ವಿಜಯನಗರ, ಬೆಳಗ್ಗೆ 7 ರಿಂದ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಫೆಬ್ರವರಿ ತಿಂಗಳ ಕಾರ್ಯಕ್ರಮಗಳು, ಶ್ರೀ ಪುರಂದರ ಮತ್ತು ಶ್ರೀ ತ್ಯಾಗರಾಜರ ಆರಾಧನೆ, ಬೆಳಗ್ಗೆ 7ಕ್ಕೆ ಮೆರವಣಿಗೆ, ಉಂಛವೃತ್ತಿ, ಬೆಳಗ್ಗೆ 10ಕ್ಕೆ ವಾರ್ಷಿಕೋತ್ಸವ, ಸಾಧಕರಿಗೆ ಸನ್ಮಾನ, ಬೆಳಗ್ಗೆ 11ಕ್ಕೆ ತ್ಯಾಗರಾಜ ಪಂಚರತ್ನ ಕೃತಿಗಳ ಗೋಷ್ಠಿಗಾಯನ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ.

■ **ದಿ ಅನಾಥಾಲಯ :** ತಾತಯ್ಯ ಸ್ಮರಣಾರ್ಥ ಉಪನ್ಯಾಸ ಮಾಲೆ–2023, ಅತಿಥಿ ಉಪನ್ಯಾಸಕರು : ಸಾಂಸ್ಕೃತಿಕ ಚಿಂತಕ ಸಿ.ವಿ. ಕೇಶವಮೂರ್ತಿ, ಅಧ್ಯಕ್ಷತೆ : ಜೆಎಸ್‌ಎಸ್ ಯೋಗ ಫೌಂಡೇಷನ್ ವ್ಯವಸ್ಥಾಪಕ ಟ್ರಸ್ಟಿ ಡಿ. ಶ್ರೀಹರಿ, ಸ್ಥಳ: ಅನಾಥಾಲಯದ ಅನ್ನಪೂರ್ಣ ಸಭಾಂಗಣ, ನಾರಾಯಣಶಾಸ್ತ್ರಿ ರಸ್ತೆ, ಬೆಳಗ್ಗೆ 10ಕ್ಕೆ.

■ **ಶ್ರೀ ದುರ್ಗಾದೇವಿ ದೇವಸ್ಥಾನ :** ಶ್ರೀ ದುರ್ಗಾದೇವಿ ದೇವಸ್ಥಾನದ 19ನೇ ವಾರ್ಷಿಕೋತ್ಸವದ ಮಹಾಪೂಜೆ ಮತ್ತು ಕುಂಬಾಭಿಷೇಕ, ಬೆಳಗ್ಗೆ 10.30 ರಿಂದ ಪುಣ್ಯಾಹ, ಗಣಪತಿಪೂಜೆ, ನವಗ್ರಹ ಪೂಜೆ, ನವಗ್ರಹ ಹೋಮ, ಕಳಶಾರಾಧನೆ, ಗಣಪತಿ ವಾಸ್ತು, ನವಗ್ರಹ ಹೋಮ, ದುರ್ಗಿ ಹೋಮ, ಪೂರ್ಣಾಹುತಿ, ಕುಂಭಾಭಿಷೇಕ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ದುರ್ಗಾದೇವಿ ದೇವಸ್ಥಾನ, ಮೂರನೇ ಮುಖ್ಯರಸ್ತೆ, ಗಾಂಧಿನಗರ.

■ **ರಂಗವಾಹಿನಿ, ರಾಮಮನೋಹರ ಲೋಹಿಯಾ ಟ್ರಸ್ಟ್, ನೆಲೆ ಹಿನ್ನೆಲೆ :** ರಾಜ್ಯ ಮಟ್ಟದ ಮುಳ್ಳೂರು ನಾಗರಾಜ ಕಾವ್ಯ ಪ್ರಶಸ್ತಿ ಪ್ರದಾನ, ರಾಜಶೇಖರ ಕೋಟಿ ನೆನಪು ಕಾರ್ಯಕ್ರಮ, ಉದ್ಘಾಟನೆ : ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ. ಎಂ.ಆರ್. ರವಿ, ಪ್ರಶಸ್ತಿ ಪ್ರದಾನ : ಹಿರಿಯ ಪತ್ರಕರ್ತ ಬಿ.ಎಂ. ಹನೀಫ, ಪ್ರಶಸ್ತಿ ಪುರಸ್ಕೃತರ ಕುರಿತು : ಕವಿ ಸುಬ್ಬು ಹೊಲೆಯಾರ್, ಪ್ರಾಸ್ತಾವಿಕ ಭಾಷಣ : ರಂಗವಾಹಿನಿ ಅಧ್ಯಕ್ಷ ಸಿ.ಎಂ. ನರಸಿಂಹಮೂರ್ತಿ, ಮುಖ್ಯ ಅತಿಥಿಗಳು : ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ಮಂಜುನಾಥ ಸೊಸ್ಲೆ, ಆಂದೋಲನ ಪತ್ರಿಕೆ ಸಂಪಾದಕ ರವಿಕೋಟಿ, ನೆಲೆ ಹಿನ್ನೆಲೆಯ ಕೆ.ಆರ್. ಗೋಪಾಲಕೃಷ್ಣ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ನಾಡಪ್ರಭು ಕೆಂಪೇಗೌಡರ ಯುವ ಸೇವಾ ಬಳಗ :** ಆದಿಶಕ್ತಿ ಹಬ್ಬದ ಪ್ರಯುಕ್ತ ಆದಿಶಕ್ತಿ ನಾಟಿ ಕಿಲಾಡಿ ಜನೋತ್ಸವ, ದೇಶಿ ಕ್ರೀಡಾ ಸ್ಪರ್ಧೆ, ಸ್ಥಳ: ಕೆಂಪೇಗೌಡ ಕ್ರೀಡಾಂಗಣ, ಕುಂಬಾರಕೊಪ್ಪಲು, ಬೆಳಗ್ಗೆ 10 ರಿಂದ.

■ **ಬಸವೇಶ್ವರ ಬಳಗ :** ಜಿ.ಎಸ್. ಸಿದ್ದನಂಜಪ್ಪ ಗುಬ್ಬಿ ಸ್ಮಾರಕ ದತ್ತಿ ಹಾಗೂ ನಂಜಮ್ಮ ಮತ್ತು ವೈ.ಬಿ. ರುದ್ರಮೂರ್ತಿ ಸ್ಮಾರಕ ದತ್ತಿ ಕಾರ್ಯಕ್ರಮ, ಉಪನ್ಯಾಸ : ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಶರಣರ ನಡೆ–ನುಡಿ–ಚಿಂತನೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಬಸವೇಶ್ವರ ಬಳಗದ ಅಧ್ಯಕ್ಷ ಡಾ. ಸಿ. ಶರತ್‌ಕುಮಾರ್, ಮುಖ್ಯ ಅತಿಥಿಗಳು : ಬಳಗದ ಗೌರವಾಧ್ಯಕ್ಷ ಕೆ.ಬಿ. ಪ್ರಭುಪ್ರಸಾದ್, ಸ್ಥಳ: ಶ್ರೀ ಸತ್ಯಸಾಯಿಬಾಬಾ ಪದವಿಪೂರ್ವ ಕಾಲೇಜು, ಜಯಲಕ್ಷ್ಮಿಪುರಂ, ಬೆಳಗ್ಗೆ 11.30ಕ್ಕೆ.

■ **ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಫೌಂಡೇಷನ್ ವಿಭಾಗದ ವಿದ್ಯಾರ್ಥಿಗಳಿಂದ ವುಡ್ ಪ್ರಿಂಟ್ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11.30ರಿಂದ.

■ **ಶ್ರೀ ವಿನಾಯಕ ಕಲಾ ಬಳಗ ಟ್ರಸ್ಟ್ :** ಬೆಂಗಳೂರಿನ ಶ್ರೀ ರೇಣುಕಾಯಲ್ಲಮ್ಮ ಕಲಾ ಬಳಗ ಟ್ರಸ್ಟ್ ವತಿಯಿಂದ ಕುರುಕ್ಷೇತ್ರ ಪೌರಾಣಿಕ ನಾಟಕ, ಸ್ಥಳ: ಸಿ.ವಿ. ರಂಗಚಾರ್ಲು ಸ್ಮಾರಕ ಭವನ, ಮಧ್ಯಾಹ್ನ 2 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇದಾನಂದ ಅವರಿಂದ ಸತ್ಯ ಪರಿಪಾಲನೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚೀನಿ ರಂಗ ಬಳಗ :** ಚೀನಿಮಾಮನಿಗಾಗಿ ಒಂದು ಕ್ಷಣ ಕಾರ್ಯಕ್ರಮ, ಶ್ರೀನಿವಾಸ್ ಭಟ್ ಅವರಿಗೆ ಗೀತ ನುಡಿ ನಮನ, ಶ್ರೀಕಂಠಸ್ವಾಮಿ ಮತ್ತು ಸಂಗಡಿಗರಿಂದ ರಿದಂ ಅಡ್ಡ ರಂಗ ಗೀತೆಗಳ ಕಾರ್ಯಕ್ರಮ, ಸ್ಥಳ: ಕಿರು ರಂಗ ಮಂದಿರ, ಸಂಜೆ 6ಕ್ಕೆ.

■ **ನಟನ ರಂಗಶಾಲೆ :** ಬೆಂಗಳೂರಿನ ಸ್ಟೇಜ್ ಕಲಾವಿದರಿಂದ ಕೊನೆಯ ಉತ್ತರ ನಾಟಕ ಪ್ರದರ್ಶನ, ನಿರ್ದೇಶನ : ರಂಗನಾಥ್ ಶಿವಮೊಗ್ಗ, ಸ್ಥಳ: ನಟನ ರಂಗ ಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ:** ಮಹಾಶಿವರಾತ್ರಿ ಪ್ರಯುಕ್ತ ರಾಮಕೃಷ್ಣನಗರದಲ್ಲಿ ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯದರ್ಶನ, ಪ್ರತಿದಿನ ಸಂಜೆ 6.30 ರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಥಳ: ಖಾಲಿ ನಿವೇಶನ, ಸುಮಿತ್ರ ಸ್ಟೀಲ್ ಎದುರು, ಚದುರಂಗ ರಸ್ತೆ, ರಾಮಕೃಷ್ಣನಗರ, ಐ ಬ್ಲಾಕ್.


ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ –ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ– ಎ.ಪಿಚಂದ್ರಶೇಖರ್, 6.45 ಅರಿವಿನ ಶಿಖರ, ಗಾಯನ– ಸದಾಶಿವ ಪಾಟೀಲ್, ಕೆ.ಬಿ. ಸುನೀತ ಆಚಾರ್, ವ್ಯಾಖ್ಯಾನ– ಕೆ.ಎಲ್. ಪದ್ಮಿನಿ ಹೆಗಡೆ, 9.40 ನಮ್ಮ ಆರೋಗ್ಯ–ದಾಂಪತ್ಯ ಆಪ್ತ ಸಲಹೆ ಕುರಿತು ಡಾ. ರವೀಶ್ ಬಿ.ಎನ್. ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಕೇಳು ಪುಟ್ಟಾ–ಪಂಚತಂತ್ರದ ಕಥೆ ಹೇಳುತ್ತಾರೆ ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ–ಬಹುಮುಖ ಪ್ರತಿಭೆ ಪ್ರಜ್ಞಾಳ ಪರಿಚಯ, ಪ್ರಸ್ತುತಿ– ಎಂ.ಎಸ್. ಭಾರತಿ. **ಮಧ್ಯಾಹ್ನ:** 12.3 ದೇವರನಾಮ–ಕೆ.ಎಂ.ಕುಸುಮ, ಕೆ.ಎಸ್. ಸುರೇಖ, 12.45 ಜನಪದ ಸಂಗೀತ–ತಂಬೂರಿ ಜವರಯ್ಯ ಮತ್ತು ತಂಡ, 1.20 ಭಾವಗೀತೆಗಳು– ಕೆ.ಪಿ. ರೇವತಿ, ವೃಂದಗಾನ, 3.00 ಸ್ವರಾಜ್–ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಸಮುದ್ರ ಮಥನ, ಪ್ರಸ್ತುತಿ–ಚೊಕ್ಕಾಡಿಯ ದೇರಾಜೆ ಸೀತಾರಾಮಯ್ಯ ಸಂಸ್ಕೃತಿ ರಂಗದ ಕಲಾವಿದರು, 6.50 ಕೃಷಿರಂಗ– ಪಶುರಂಗ, ಪ್ರಸ್ತುತಿ– ಎಸ್.ಸಿ. ಹೇಮಕುಮಾರ್, ನಿರ್ಮಾಣ– ದಿವಾಕರ ಹೆಗಡೆ, 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ ಸರಣಿ–ಮಮತೆಯ ಮಡಿಲಿನ ಮಂಡ್ಯದ ಕೆ.ಪಿ. ಅರುಣಕುಮಾರಿ ಹಾಗೂ ಯೋಗೀಶ್ ಎಂ.ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ– ದಿವಾಕರ ಹೆಗಡೆ, 9.15 ರಂಗಗೀತೆಗಳು–ರಾಜಾ ವಿಕ್ರಮ ನಾಟಕದ ಹಾಡುಗಳು, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಆರ್.ಎನ್.ತ್ಯಾಗರಾಜನ್ ಮತ್ತು ಆರ್.ಎನ್.ತಾರಾನಾಥನ್–ಯುಗಳ ಗಾಯನ

ಜನವರಿಯಲ್ಲಿ 6085 ಕೋಟಿ ಜಿಎಸ್‌ಟಿ ಸಂಗ್ರಹಿಸಿ ರಾಜ್ಯ ದಾಖಲೆ

ಬೆಂಗಳೂರು, ಫೆ. 11(ಕೆಎಂಶಿ)–ಜನವರಿ ಮಾಹೆಯಲ್ಲಿ 6085 ಕೋಟಿ ರೂ. ಜಿಎಸ್‌ಟಿ



ಸಂಗ್ರಹ ಮಾಡಿ ರಾಜ್ಯ ದಾಖಲೆ ಬರೆದಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿದ್ದು, ಜಿಎಸ್‌ಟಿ ತೆರಿಗೆ ಸಂಗ್ರಹಣೆಯಲ್ಲಿ ಕರ್ನಾಟಕ ಶೇ.30ರಷ್ಟು ಅತ್ಯಧಿಕ ಬೆಳವಣಿಗೆ ಪ್ರಮಾಣವನ್ನು ಹೊಂದಿರುವ ರಾಜ್ಯವಾಗಿ ಮುಂದುವರೆದಿದೆ ಎಂದಿದ್ದಾರೆ. ತೆರಿಗೆ ಸಂಗ್ರಹಣೆಯಲ್ಲಿ ಸುಧಾರಣೆ, ಹೆಚ್ಚಿನ ಕಣ್ಗಾವಲು, ಆರ್ಥಿಕತೆಯಲ್ಲಿ ಚೇತರಿಕೆ ಹಾಗೂ ತೆರಿಗೆದಾರರಲ್ಲಿ ಹೆಚ್ಚಿರುವ ಅನುಸರಣೆಯಿಂದಾಗಿ ಈ ಗಮನಾರ್ಹ ಸಾಧನೆ ಮಾಡಲು ಸಾಧ್ಯವಾಗಿದೆ ಎಂದು ತಿಳಿಸಿದ್ದಾರೆ. ಈ ಆದಾಯದ ಬೆಳವಣಿಗೆಯಿಂದಾಗಿ ಸರ್ಕಾರವು ಈ ವರ್ಷ ಉತ್ತಮ ಆಯ–ವ್ಯಯ ಮಂಡಿಸಲು ಅನುವು ಮಾಡಿಕೊಡಲಿದೆ ಎಂದು ಮುಖ್ಯಮಂತ್ರಿಗಳು ಟ್ವೀಟ್ ಮೂಲಕ ತಿಳಿಸಿದ್ದಾರೆ.

ಐಎಸ್‌ಸಿಎಗೆ ಶೋಭಿತ್ ರಂಗಪ್ಪ ಆಯ್ಕೆ

ಮೈಸೂರು, ಫೆ. 11– ಇಂಡಿಯನ್ ಸೈನ್ಸ್ ಕಾಂಗ್ರೆಸ್ ಅಸೋಸಿಯೇಷನ್‌ನ ಕಾರ್ಯಕಾರಿ



ಸದಸ್ಯರಾಗಿ ಮೈಸೂರಿನ ಯುವ ವಿಜ್ಞಾನಿ ಡಾ.ಶೋಭಿತ್ ರಂಗಪ್ಪ ಆಯ್ಕೆಯಾಗಿದ್ದಾರೆ. ಆದಿಚುಂಚನಗಿರಿ ವಿ.ವಿ ಆದಿಚುಂಚನಗಿರಿ ಇನ್‌ಸ್ಟಿಟ್ಯೂಟ್ ಫಾರ್ ಮಾಲಿ ಕ್ಯೂಲರ್ ಮೆಡಿಸಿನ್‌ನ ನಿರ್ದೇಶಕರಾದ ಡಾ. ಶೋಭಿತ್ ರಂಗಪ್ಪ ಅವರನ್ನು 2023–24ನೇ ಸಾಲಿನ ಐಎಸ್‌ಸಿಎ ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ಆಯ್ಕೆಮಾಡಲಾಗಿದೆ. ಡಾ.ಶೋಭಿತ್ ರಂಗಪ್ಪ, ಸಕ್ರಿಯ ಸಂಶೋಧಕರಾಗಿದ್ದು, ಅಂತಾರಾಷ್ಟ್ರೀಯ ಪ್ರತಿಷ್ಠಿತ ಜರ್ನಲ್ ಗಳಲ್ಲಿ 80ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳು ಹಾಗೂ 5 ಪೇಟೆಂಟ್ ಗಳನ್ನು ಕ್ಯಾನ್ಸರ್ ಡ್ರಗ್ ಡಿಸ್ಕವರಿ ಕ್ಷೇತ್ರದಲ್ಲಿ ಹೊಂದಿದ್ದಾರೆ.

ಕಣ್ಣಿನ ಅಲರ್ಜಿ ಶಿಬಿರ

ಮೈಸೂರು, ಫೆ. 11–ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಫೆ. 13 ರಿಂದ 18 ರವರೆಗೆ ಬೆಳಗ್ಗೆ 9.30 ರಿಂದ ಸಂಜೆ 4.30 ರವರೆಗೆ ಕಣ್ಣಿನ ಅಲರ್ಜಿ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8892761694 ಸಂಪರ್ಕಿಸಬಹುದು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ, ಹೆಬ್ಬಾಳ್ 2ನೇ ಹಂತ, ಲಕ್ಷ್ಮೀಕಾಂತನಗರ, ವಾರ್ಡ್ ನಂ. 26, 4ನೇ ಕ್ರಾಸ್, ಮನೆ ನಂ. 2652ರಲ್ಲಿ ವಾಸವಾಗಿರುವ ಲೇಟ್ ಎಸ್.ಕೆ. ಮಲ್ಲೇಶಪ್ಪರವರ ಮಗನಾದ ಶ್ರೀ ಯತೀಶ್‌ಕುಮಾರ್ ರವರ ಇರಾದೆ ಮೇರೆಗೆ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ.

ನಮ್ಮ ಕಕ್ಷಿದಾರರು ಮೈಸೂರು ಸಿಟಿ, ಕುವೆಂಪು ನಗರ, ನ್ಯೂ ಕಾಂತರಾಜ ಅರಸ್ ರಸ್ತೆ, 2ನೇ ಮಹಡಿ, ನಂ. 826 ರಲ್ಲಿರುವ ಕಛೇರಿಯನ್ನು (Amacs India Company) ಯನ್ನು ಪ್ರತಿನಿಧಿಸುವ ಮಾಲೀಕರಾದ ಶ್ರೀ ನಾಗೇಶ್‌ರವರಿಂದ ಈ ಕೆಳಕಂಡ ಷೆಡ್ಯೂಲ್ ನಿವೇಶನವನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳಲು ಕ್ರಯದ ಕರಾರನ್ನು ಮಾಡಿಕೊಳ್ಳುವ ಸಂಬಂಧ ಮಾತುಕತೆ ನಡೆಯುತ್ತಿರುತ್ತದೆ. ಆದ ಕಾರಣ ಈ ಕೆಳಕಂಡ ಷೆಡ್ಯೂಲ್ ನಿವೇಶನದ ಸಂಬಂಧ ಯಾರಿಗಾದರೂ ಕಾನೂನು ಬದ್ಧ ಹಕ್ಕು ಮತ್ತು ಹಿತಾಸಕ್ತಿಗಳು ಇದ್ದದ್ದೇ ಆದರೆ ಈ ಸಾರ್ವಜನಿಕ ಪ್ರಕಟಣೆಯಾದ 7 (ಏಳು) ದಿನಗಳೊಳಗಾಗಿ ನಮಗಾಗಲೀ ಅಥವಾ ನಮ್ಮ ಕಕ್ಷಿದಾರರನ್ನಾಗಲೀ ಭೇಟಿ ಮಾಡಿ, ದಾಖಲೆಗಳ ಸಮೇತ ತಮ್ಮ ಲಿಖಿತ ತಕರಾರುಗಳನ್ನು ಸಲ್ಲಿಸತಕ್ಕದ್ದು. ಆನಂತರ ಬಂದ ತಕರಾರುಗಳನ್ನು ಪರಿಗಣಿಸುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

ಷೆಡ್ಯೂಲ್

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕರಕನಹಳ್ಳಿ ಗ್ರಾಮದಲ್ಲಿ ಬರುವ ಸರ್ವೆ ನಂ. 198/1, 198/2 ರಲ್ಲಿನ 2 ಎಕರೆಯಲ್ಲಿ ವಸತಿ ಬಡಾವಣೆಯಾಗಿ ಅಭಿವೃದ್ಧಿ ಪಡಿಸಿರುವ ಶ್ರೀ ಕಟೀಲು ನಗರ ಎಂದು ನಾಮಾಂಕಿತವಾಗಿರುವ ಬಡಾವಣೆಯಲ್ಲಿನ ನಿವೇಶನ ಸಂಖ್ಯೆ 32ರ ಒಟ್ಟು ವಿಸ್ತೀರ್ಣ 1,839 ಚದರ ಅಡಿಗೆ ಚೆಕ್ಕುಬಂದಿ: ಪೂರ್ವಕ್ಕೆ: ರಸ್ತೆ ; ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 40 & 41 ; ಉತ್ತರಕ್ಕೆ: ಖಾಸಗಿಯವರ ಜಮೀನು ; ದಕ್ಷಿಣಕ್ಕೆ: ನಿವೇಶನ ಸಂಖ್ಯೆ 33.

Sd/- B. Shivanna, B.A., LL.B.
Advocate, KAR 2505 / 2003
Adith Apartment, 1st Floor,
Flat No. 104, SJCE College Road,
Telecom Layout, Chamaraja
Mohalla, Mysuru-570 009.
Mob: 9880139649

ದಿನಾಂಕ: 11–02–2023

43 ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

3ನೇ ವರ್ಷದ ಸವಿನೆನಪು
ಸದಾ ನಿಮ್ಮ ನೆನಪಿನಲ್ಲಿರುವ ದಿ. ಜಾಪಾಳೆ ಮೂಗಣ್ಣನವರ ಕುಟುಂಬ ವರ್ಗದವರು ಕೆ.ಜಿ.ಕೊಪ್ಪಲು, ಮೈಸೂರು
ಡಿ.ದೇವರಾಜು

7ನೇ ವರ್ಷದ ಪುಣ್ಯಸ್ಮರಣೆ
ಮಡಿಮೆಯೇ ದೇವರೆಂದು ನಂಬಿ ಬದುಕನ್ನು ಕಟ್ಟಿ ನಮ್ಮ ಬದುಕಿಗೆ ನಂದಾದೀಪವಾಗಿ ಬೆಳಗಿ ಮಕ್ಕಳಿಗೆ ಪ್ರೀತಿಯ ತಂದೆಯಾಗಿ ಮೊಮ್ಮಕ್ಕಳಿಗೆ ಮುದ್ದಿನ ತಾತನಾಗಿ ಸದಾಕಾಲ ಅಳ್ಳಳಿಯದೇ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿಸಿಗಲಿ ಎಂದು ಬಯಸುವ ದುಃಖಿತಪ್ತರು : ರಾಧಾ ಬೋರಪ್ಪ.ಪಿ ಕುಟುಂಬ ವರ್ಗದವರು.
ಶ್ರೀ.ಪಿ.ಬೋರಪ್ಪರವರು
ದಿ॥ ಪುಟ್ಟಬಸಪ್ಪನ ಪುಟ್ಟಯ್ಯನವರ ಮಗ ಕೆ.ಜಿ.ಕೊಪ್ಪಲು, ಜಯನಗರ, ಮೈಸೂರು

ನಾಲ್ಕನೇ ವರ್ಷದ ಸವಿನೆನಪು
ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಶ್ರೀಮತಿ ತಿಮ್ಮಮ್ಮ
ಇಂತಿ ದುಃಖಿತಪ್ತರು ಲೇಟ್ ಕಲಾಚಿ ಮೊಳ್ಳಣ್ಣನವರ ಕುಟುಂಬ, ಲೇಟ್ ಬಳ್ಳಸ ಕರಿಯಪ್ಪನವರ ಕುಟುಂಬ, ಕೆ.ಜಿ.ಕೊಪ್ಪಲು, ಮೈಸೂರು

ಮೂರನೇ ವರ್ಷದ ಪುಣ್ಯಸ್ಮರಣೆ
ಶ್ರೀಮತಿ ಮಂಗಳ ರವಿ
ನಿಧನ: 12-2-2020
ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಸುಶೀಲಮ್ಮ, ಎನ್.ರವಿ RMC, ಎನ್.ವಿಜಯ, ಎನ್.ಸುಧಾಕರ್, ಎಂ.ಆರ್. ವರ್ಷಿತ, ಬಿ.ಹೆಚ್.ದಿನೇಶ್, ಮೊಮ್ಮಕ್ಕಳು : ಕಾರುಣ್ಯ ಪ್ರಿಯ, ರೋಹಿತ್ ಕೃಷ್ಣ.

ಎರಡನೇ ವರ್ಷದ ಸವಿನೆನಪು
ಶ್ರೀಯುತ ಹೆಚ್ ಲಿಂಗಯ್ಯರವರು
ನಿವೃತ್ತ ಚೀಫ್ ಮ್ಯಾನೇಜರ್ ಕಾವೇರಿ ಗ್ರಾಮೀಣ ಬ್ಯಾಂಕ್ ಹಾಗೂ ಸಂಸ್ಥಾಪಕ ಧರ್ಮದರ್ಶಿಗಳು ಪ್ರಗತಿ ವಿದ್ಯಾಸಂಸ್ಥೆ.
ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಇಂತಿ ದುಃಖತಪ್ತರು
ಪತ್ನಿ : ಬಿ. ರಾಜಮ್ಮರವರು, ಮಕ್ಕಳು, ಸೊಸೆಯಂದಿರು, ಕುಟುಂಬಸ್ಥರು ಹಾಗೂ ಪ್ರಗತಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಮತ್ತು ಶಿಕ್ಷಕ ವರ್ಗ.

4ನೇ ವರ್ಷದ ಪುಣ್ಯಸ್ಮರಣೆ
ಶ್ರೀಮಾನ್ ಎಂ.ಕೆ.ಕೆಂಪಣ್ಣ (ಕೆ.ಇ.ಬಿ)ರವರು
(ನಿವೃತ್ತ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಹಾಗೂ ಮಾಜಿ ಜಿಲ್ಲಾ ಪಂಚಾಯಿತ್ ಸದಸ್ಯರು (ಅತ್ತಹಳ್ಳಿ))
ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು : ಮೃತರ ಪತ್ನಿ, ಮಕ್ಕಳು, ಅಳಿಯಂದಿರು ಹಾಗೂ ಬಂಧುಮಿತ್ರರು

ಕರ್ನಾಟಕ ಸರ್ಕಾರ

ಸಾರ್ವಜನಿಕ ಗ್ರಂಥಾಲಯ ಇಲಾಖೆ

ಜಿಲ್ಲಾ ಕೇಂದ್ರ ಗ್ರಂಥಾಲಯ, ಮೈಸೂರು–570 009
ದೂ.ಸಂ: (0821) 2425875, 2425975 ಇ–ಮೇಲ್ : cldclmys@gmail.com

ಸಂಖ್ಯೆ: ಜಿ.ಕೇ.ಗ್ರಂ/ಮೈ/ತಾಂ.ವಿ/ಪೀ.ಖ/13/2022–23 ದಿನಾಂಕ: 10.02.2023

ತುರ್ತು ಅಲ್ಪಾವಧಿ ಟೆಂಡರ್ ಪ್ರಕಟಣೆ

2022–23 ನೇ ಸಾಲಿನಲ್ಲಿ ಮೈಸೂರು ಜಿಲ್ಲಾ ಕೇಂದ್ರ ಗ್ರಂಥಾಲಯ, ವ್ಯಾಪ್ತಿಯ ಗ್ರಂಥಾಲಯಗಳಿಗೆ ಪೀಠೋಪಕರಣಗಳನ್ನು ಖರೀದಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ, ತುರ್ತು ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಈ ಕೆಳಕಂಡ ವಿವರಗಳೊಂದಿಗೆ ಹೊರಡಿಸಲಾಗಿದೆ

ಕ್ರ.ಸಂ.	ಟೆಂಡರ್ ಪ್ರಕಟಣೆ ಹೆಸರು	ಲೆಕ್ಕ ಶೀರ್ಷಿಕೆ	ಅಂದಾಜು ವೆಚ್ಚ	ಇ.ಎಂ.ಡಿ. ಮೊತ್ತ
1	2022–23 ನೇ ಸಾಲಿನಲ್ಲಿ ಮೈಸೂರು ಜಿಲ್ಲಾ ಕೇಂದ್ರ ಗ್ರಂಥಾಲಯ, ವ್ಯಾಪ್ತಿಯ ಗ್ರಂಥಾಲಯಗಳಿಗೆ ಪೀಠೋಪಕರಣಗಳನ್ನು ಖರೀದಿಸಲು	ಜಿಲ್ಲಾ ಗ್ರಂಥಾಲಯ ಪ್ರಾಧಿಕಾರ ನಿಧಿ	ರೂ.3.75 ಲಕ್ಷಗಳು	ರೂ.9,375.00 (ರೂಒಂಬತ್ತು ಸಾವಿರದ ಮುನ್ನೂರ ಎಪ್ಪತ್ತೈದು ಮಾತ್ರ)

ಆನ್‌ಲೈನ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 20.02.2023 ಸಂಜೆ 4.00 ಗಂಟೆಯವರೆಗೆ. ಆನ್‌ಲೈನ್ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ : ತಾಂತ್ರಿಕ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 23.02.2023 ಬೆಳಿಗ್ಗೆ 11.00 ಗಂಟೆಗೆ

ನೋಂದಾಯಿತ ಸಂಸ್ಥೆಗಳು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ಕೊನೆಯ ದಿನಾಂಕ ಮತ್ತು ಸಮಯದೊಳಗೆ ವೆಬ್‌ಸೈಟ್ ವಿಳಾಸ https://eproc.karnataka.gov.in ರ ಮುಖಾಂತರ ಅಪ್‌ಲೋಡ್ ಮಾಡುವುದು.

ಸಹಿ/– ಉಪ ನಿರ್ದೇಶಕರು, ಜಿಲ್ಲಾ ಕೇಂದ್ರ ಗ್ರಂಥಾಲಯ, ಮೈಸೂರು

DIPR/DDMYS/KSMCA/1003/2022-23

ನಕ್ಕರೆ ಅದೇ ಸ್ವರ್ಗ

ಅಮ್ಮಾ : ಕೆಲಸದವಳ ಮಗಳು ಐಎಎಸ್ ಪಾಸ್, ಕೆಲಸದವಳ ಮಗಳು 99%, ಕೆಲಸದವಳ ಮಗಳು ಗೋಲ್ಡ್ ಮೆಡಲ್ ತಗೊಂಡಿದ್ದಾಳೆ...
ಮಗಳು : ಅಮ್ಮಾ ನೀನು ಒಂದೆರಡು ಮನೆಗೆ ಕೆಲಸಕ್ಕೆ ಹೋಗಮ್ಮ, ನಾನು ಆ ತರ ಗುರಿ ಮುಟ್ಟಬಹುದು...

ಮೈಸೂರು ಮಿತ್ರ

ಭಾನುವಾರ, 12 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಕಾರ್ಯರಹಿತ ಆಶ್ವಾಸನೆಗಳಿಗೆ ಅರ್ಥವೇ ಇಲ್ಲ.
ನಮ್ಮ ಕೆಲಸವೇ ನಮ್ಮ ಬಗ್ಗೆ ಮಾತನಾಡುವಂತಿರಲಿ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಡಲೆಗೆ ಮುಂದು / ಕಡಿವಾಣಕ್ಕೆ ಹಿಂದು

ನಿಮ್ಮ ಪತ್ರಗಳು

ಅಂದದ ನಗರದ ಸ್ಥಿತಿಯಿದು



ಮಾನ್ಯರೆ,

ಅರಮನೆಗಳ ನಗರ ಮೈಸೂರಿನ ಕುವೆಂಪುನಗರದ ಕಾವೇರಿ ಶಾಲೆಯ ಎದುರಿಗೆ ಮಹಾನಗರ ಪಾಲಿಕೆಯು ಕಟ್ಟಿಸಿರುವ ಸಿಟಿ ಬಸ್ ತಂಗುದಾಣವಿದು. ಇದು ಕುದುರೆ ಕಟ್ಟುವ ಲಾಯದಂತಿದೆ. ಕಿತ್ತು ಹೋಗಿರುವ ನೆಲ ರಾಶಿ ಬಿದ್ದಿರುವ ಕಸ ಮುಂತಾದವು ನಿಮ್ಮನ್ನು ಅಣಕಿಸಿ ಕೇಕೆ ಹಾಕಿ ನಗುತ್ತಿವೆ. ಈ ರಸ್ತೆಯಲ್ಲಿ ಬರುವ ಬಸ್ಸುಗಳೇ ಕಡಿಮೆ. ಲಕ್ಷಾಂತರ ರೂ. ಖರ್ಚು ಮಾಡಿ ಕಟ್ಟಿಸಿರುವ ಈ ಬಸ್ ತಂಗುದಾಣವನ್ನು ಕಸ ತೆಗೆಸಿ ಉಪಯೋಗಾರ್ಹವನ್ನಾಗಿ ಮಾಡಲು ಏನು ಕಷ್ಟ. ಶಾಸಕರು, ಕಾರ್ಪೋರೇಟರ್‌ಗಳು ಸರ್ಕಾರಿ ಕಾರಿನಲ್ಲಿ ಹೋದ್ರೆ ಏನು ಗೊತ್ತಾಗುತ್ತೆ. ಸಂಬಳ ತೆಗೆದುಕೊಳ್ಳುವ ನೌಕರರು ಕೆಲಸ ಮಾಡುವುದಿಲ್ಲ. ಜನ ಸಾಮಾನ್ಯರ ಮಾತಿಗೆ ಕಿಮ್ಮತ್ತಿಲ್ಲ. ಇದು ಒಂದು ಕಡೆಯದು. ಬಹುಶಃ ಉಳಿದ ಕಡೆಯೂ ಹೀಗೆ ಇರಬೇಕು. ಮಾನ್ಯ ಮೇಯರ್‌ರವರು ಇಂತಹ ಸಮಸ್ಯೆಗಳ ಕಡೆ ಗಮನ ಹರಿಸಬೇಕು.

–ಅಕ್ಕಿಹೆಬ್ಬಾಳು ವೆಂಕಟೇಶ್, ಕುವೆಂಪುನಗರ

ರಾಜಕೀಯ ಭಾಷಣಗಳು ಬೈಯ್ಯುವ ವೇದಿಕೆಯಾಗದಿರಲಿ!

ಮಾನ್ಯರೇ

ನಮ್ಮ ರಾಜ್ಯದಲ್ಲಿ ಚುನಾವಣೆಯ ಕಾವು ಏರುತ್ತಿದ್ದಂತೆ ಸಭೆ–ಸಮಾರಂಭಗಳಲ್ಲಿ ರಾಜಕಾರಣಿಗಳು ತಮ್ಮ ಭಾಷಣಗಳಲ್ಲಿ ಮಾತನಾಡುವ ಭಾಷೆ ಎಲ್ಲೆ ಮಿತಿ ಮೀರುತ್ತಿದೆ. ವೈಚಾರಿಕ ಟೀಕೆಗಳನ್ನು ಮೀರಿ ಕೆಲ ರಾಜಕಾರಣಿಗಳು ವೈಯಕ್ತಿಕ ಟೀಕೆಗಳನ್ನು ಮಾಡುವುದು, ಅನ್ಯ ಪಕ್ಷದ ಜನನಾಯಕರನ್ನು ಏಕವಚನ ಪದ ಪ್ರಯೋಗದಿಂದ ಸಂಬೋಧಿಸುವುದು, ಜಾತಿನಿಂದನೆ, ಅವರ ಸಾಂಸಾರಿಕ ಗುಟ್ಟು ಹಾಗೂ ಅನೈತಿಕ ಸಂಬಂಧಗಳ ಚರ್ಚೆಗೆ ರಾಜಕಾರಣಿಗಳ ಚುನಾವಣಾ ಭಾಷಣ ಸೀಮಿತವಾದಂತಿದೆ.

ರಾಜಕಾರಣಿಗಳು ಎಂದಿಗೂ ಜನನಾಯಕರೇ ಹೊರತು ಸಿನಿಮಾ ನಾಯಕರಲ್ಲ. ಕೇವಲ ಶಿಳ್ಳೆ ಚಪ್ಪಾಳೆಗಳ ವ್ಯಾಮೋಹಕ್ಕೆ ಮಾತನಾಡಿ ಜನರೆದುರು ಚಿಕ್ಕವರಾಗಬೇಡಿ. ನಿಮ್ಮ ಭಾಷಣದ ಭರಾಟೆಯಲ್ಲಿ ಇತರ ಪಕ್ಷದ ರಾಜಕೀಯ ನಾಯಕರನ್ನು ಟೀಕಿಸುವಾಗ ಅದರಲ್ಲೂ ಏಕವಚನದಲ್ಲಿ ಪ್ರಶ್ನಿಸಿದಾಗ ನಿಮ್ಮನ್ನು ಮತ್ತಷ್ಟು ಹುರಿದುಂಬಿಸುವ ಮಂದಿ ನಿಮ್ಮನ್ನು ಹಳ್ಳಕ್ಕೆ ತಳ್ಳುತ್ತಿರುವವರು ಎಂದು ನಿಮಗೆ ತಿಳಿದಿರಲಿ! ಟೀಕಿಸುವ ಸಾಮರ್ಥ್ಯ ನಿಮಗೆ ಮಾತ್ರ ಎಂಬ ಹಸಿ ಹಸಿ ಸುಳ್ಳನ್ನು ಹೇಳಿ ನಿಮ್ಮನ್ನು ಉಬ್ಬಿಸಿ ಭಾಷಣದಲ್ಲಿ ಬೈಯ್ಯಿಸುವ ಮಂದಿ ನಂತರದ ತಮಾಷೆಗಳನ್ನು ನೋಡಿ ವಿಕೃತ ಆನಂದ ಪಡೆಯುವ ಪ್ರೇಕ್ಷಕರು ನಿಮ್ಮ ಮಧ್ಯೆ ಸಾಕಷ್ಟಿದ್ದಾರೆ ಎಂಬ ಸತ್ಯ ನಿಮ್ಮ ನೆನಪಿನಲ್ಲಿರಲಿ.

ಒಬ್ಬ ಸಾಮಾನ್ಯ ಪ್ರಜೆಗೆ ಅಥವಾ ನಿಮ್ಮದೇ ಪಕ್ಷದ ಕಟ್ಟ ಕಡೆಯ ಕಾರ್ಯಕರ್ತನಿಗೆ ನೀವು ಚರ್ಚಿಸಿದ, ಹರಿಬಿಟ್ಟ ವಿಷಯಗಳು ಉಪಯೋಗವಿದೆಯೇ ಎಂಬುದನ್ನು ಒಮ್ಮೆ ವಿಮರ್ಶಿಸಿ. ಈ ಬೈಯ್ಯುವ ವಿಚಾರಗಳಿಂದ ಜನರಿಗೆ ಏನು ಉಪಯೋಗವಿಲ್ಲ. ಉತ್ತಮ ಸಿದ್ಧಾಂತ, ಒಳ್ಳೆಯ ಕೆಲಸ ಕಾರ್ಯಗಳು, ನಿಮ್ಮ ಯೋಜನೆಗಳು, ನಿಮ್ಮ ಭವಿಷ್ಯದ ಯೋಚನೆಗಳು ಜನರಿಗೆ ತಲುಪಬೇಕೇ ಹೊರತು, ವೇದಿಕೆಯ ಮೇಲೆ ವೈಯಕ್ತಿಕ ಟೀಕೆ, ಜಾತಿ ನಿಂದನೆ, ಏಕವಚನ ಪದ ಪ್ರಯೋಗಗಳಿಂದ ಹೊರಬಂದು ಜನರಿಗೆ ಉಪಯುಕ್ತವಾದ ಮಾಹಿತಿ ನೀಡಿ. ಜನನಾಯಕನ ಮಾತು, ಸಂಸ್ಕಾರ, ಸಂಸಾರ ಮತ್ತು ನಡವಳಿಕೆ ಉನ್ನತವಾಗಿರಬೇಕು ಎಂಬುದನ್ನು ನಾಡಿನ ಜನರೆದರು ಸಾಬೀತುಪಡಿಸಿ. ಇದೇ ಉತ್ತಮ ರಾಜಕಾರಣಿಯ ಶ್ರೇಷ್ಠ ಗುಣ. ಈ ಸತ್ಯ ಪ್ರತಿಯೊಬ್ಬ ರಾಜಕಾರಣಿಗೆ ತಿಳಿಯುವುದೊಳಿತು!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಜೆಡಿಎಸ್‌ಗೆ ಕಗ್ಗಂಟಾಗಿರುವ ಹಾಸನ ಕ್ಷೇತ್ರ

ಮಾನ್ಯರೆ,


ಹಾಸನ ವಿಧಾನ ಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯ ಆಯ್ಕೆಯ ವಿಚಾರದಲ್ಲಿ ದಿನೇ ದಿನೆ ಕುತೂಹಲ ಹೆಚ್ಚಾಗುತ್ತಿದೆ. ಒಂದು ಕಾಲದಲ್ಲಿ ಹಾಸನದ ಭದ್ರ ಕೋಟೆಯಾಗಿದ್ದ ಈ ಕ್ಷೇತ್ರದಲ್ಲಿ ಕಳೆದ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷದ ಪ್ರೀತಮ್ ಗೌಡ ಅವರು ಕಮಲವನ್ನು ಅರಳಿಸಿದ್ದಾರೆ. ಆದರೆ ಈ ಬಾರಿ ಶತಾಯ ಗತಾಯ ಈ ಕ್ಷೇತ್ರವನ್ನು ಮರಳಿ ಪಡೆಯಲು ಜೆಡಿಎಸ್ ವರಿಷ್ಠರು ಚುನಾವಣಾ ತಂತ್ರಗಾರಿಕೆಯಲ್ಲಿ ಮುಳುಗಿದ್ದಾರೆ. ಒಂದು ಕಡೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರ ಸ್ವಾಮಿಯವರು ಹಾಸನ ಕ್ಷೇತ್ರದಿಂದ ಜೆಡಿಎಸ್‌ನ ಸಮರ್ಥ ಅಭ್ಯರ್ಥಿಗಳು ಇದ್ದಾರೆ ಹಾಗಾಗಿ ಭವಾನಿ ರೇವಣ್ಣನವರ ಅಗತ್ಯವಿಲ್ಲ ಎಂದು ಹೇಳಿದ್ದರೆ. ಮತ್ತೊಂದು ಕಡೆ, ಶ್ರೀಮತಿ ಭವಾನಿ ರೇವಣ್ಣ ಹಾಸನ ಕ್ಷೇತ್ರದಿಂದ ತಾವೇ ಅಭ್ಯರ್ಥಿಯಾಗುವುದಾಗಿ ಹೇಳಿ ಚುನಾವಣಾ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಹೇಳಲಾಗುತ್ತಿದೆ. ಈ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೇ ದೇವೇಗೌಡರ ಕುಟುಂಬದಲ್ಲಿ ಬಿನ್ನಾಭಿಪ್ರಾಯ ತಲೆದೋರಿರುವುದು ಎದ್ದು ಕಾಣುತ್ತಿದೆ.

ಇತ್ತೀಚಿನ ವರದಿಗಳ ಪ್ರಕಾರ, ವರಿಷ್ಠರು ಒಪ್ಪಿದರೆ ಹಾಸನ ಕ್ಷೇತ್ರದಿಂದ ತಾವೇ ಕಣಕ್ಕಿಳಿಯುವುದಾಗಿ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಹೇಳಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಹಿಂದೆ ಅವರ ಎದುರಾಳಿ ಪ್ರಸ್ತುತ ಹಾಸನ ವಿಧಾನಸಭಾ ಕ್ಷೇತ್ರದ ಶಾಸಕ ಪ್ರೀತಮ್‌ಗೌಡ, ರೇವಣ್ಣನವರಿಗೆ ಸವಾಲೊಡ್ಡಿ, ತಮ್ಮ ವಿರುದ್ಧ ರೇವಣ್ಣನವರು ಸ್ಪರ್ಧಿಸಿ ಗೆಲ್ಲಲಿ, 50,000 ಮತಗಳ ಅಂತರದಿಂದ ಗೆಲ್ಲುತ್ತೇನೆ ಒಂದು ಮತ ಕಡಿಮೆಯಾದರೂ ಮತ್ತೇ ಚುನಾವಣೆಗೆ ಹೋಗುತ್ತೇನೆ ಎಂದು ಗುಡುಗಿದ್ದಾರೆ. ಹಾಸನ ಜಿಲ್ಲೆಯ ಹೊಳೆನರಸೀಪುರ ವಿಧಾನ ಸಭಾಕ್ಷೇತ್ರದಿಂದ ಸತತವಾಗಿ ಆಯ್ಕೆಯಾಗಿ ಬರುತ್ತಿರುವ ರೇವಣ್ಣ, ಹಾಸನ ಜಿಲ್ಲೆಯ ಎಲ್ಲಾ ರಾಜಕೀಯ ಒಳಸುಳಿಗಳನ್ನು ಬಲ್ಲವರಾಗಿದ್ದು, ಓರ್ವ ಚತುರ ಹಾಗೂ ಚಾಣಾಕ್ಷ ರಾಜಕಾರಣಿಯಾಗಿದ್ದಾರೆ. ಆದರೆ ಕುಮಾರ ಸ್ವಾಮಿಯವರು ಏತಕ್ಕಾಗಿ ಭವಾನಿಯವರ ಸ್ಪರ್ಧೆಗೆ ವಿರೋಧಿಸುತ್ತಿದ್ದಾರೆ ಎಂಬುದು ನಿಗೂಢವಾಗಿದೆ.

ಹಾಸನ ಜಿಲ್ಲೆಯ ಎಲ್ಲಾ ಏಳು ವಿಧಾನ ಸಭಾ ಸ್ಥಾನಗಳಲ್ಲೂ ಗೆಲ್ಲಬೇಕೆಂಬ ಗುರಿ ಹೊಂದಿರುವ ಜೆಡಿಎಸ್, ಕುಮಾರಸ್ವಾಮಿಯವರ ನೇತೃತ್ವದಲ್ಲಿ ಪಂಚರತ್ನ ಯಾತ್ರೆ ಕೈಗೊಂಡಿದೆ. ಈ ಸಂದರ್ಭದಲ್ಲಿ ಮಾತನಾಡಿರುವ ಕುಮಾರ ಸ್ವಾಮಿಯವರು ಜನತಾದಳ ನಾಯಕರನ್ನು ಸೃಷ್ಟಿ ಮಾಡುವ ಕಾರ್ಖಾನೆ. ಈ ಕಾರ್ಖಾನೆಯಲ್ಲಿ ಬಹಳಷ್ಟು ನಾಯಕರು ಬೆಳೆದು ಈಗ ನಮ್ಮನ್ನೇ ಟೀಕಿಸುತ್ತಿದ್ದಾರೆ ಎಂದು ಹೇಳಿ ಪರೋಕ್ಷವಾಗಿ ಸಿದ್ದರಾಮಯ್ಯನವರತ್ತ ಚಾಟಿ ಬೀಸಿದ್ದಾರೆ. ಆದರೆ ಅತ್ಯಂತ ಪ್ರಮುಖ ಹಾಗೂ ನಿರ್ಣಾಯಕ ಕ್ಷೇತ್ರವಾದ ಹಾಸನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೇ ಮಾತ್ರ ಗೊಂದಲಗಳು ಮುಂದುವರೆದಿದ್ದು, ಇದರ ಫೋಟೋ ಫಿನಿಶ್ ಹೇಗಿರಬಹುದೆಂಬುದು ಎಂಬುದು ಮತ್ತಷ್ಟು ಕುತೂಹಲಕಾರಿಯಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಮತ್ತೆ ಮತ್ತೆ ಓದಬೇಕೆನಿಸುವ 'ಮುದ್ದುರಾಮ'!



ಕೆ.ಸಿ.ಶಿವಪ್ಪ

> "ಸಾಮಾನ್ಯವಾಗಿ ಒಳ್ಳೆಯ ವಿಚಾರಗಳು, ಖುಷಿಯ ವಿಚಾರಗಳು ತಿಳಿದರೆ ಸಂತೋಷವಾಗುತ್ತದೆ. ಅದೇ ನೋವಿನ ವಿಚಾರಗಳು ತಿಳಿದರೆ ದುಃಖವಾಗುತ್ತದೆ. ಒಂದು ಕಡೆ ಜನನದ ವಿಚಾರ ತಿಳಿದು ಸಂತಸಪಟ್ಟರೆ, ಮತ್ತೊಂದು ಕಡೆ ಸಾವಿನ ಸುದ್ದಿ ಬರುತ್ತದೆ. ಸಂತೋಷದಲ್ಲಿಯೇ ದುಃಖವು ಅಡಗಿರುತ್ತದೆ. ಸುಖಕ್ಕೆ ಹಿಗ್ಗದೇ, ದುಃಖಕ್ಕೆ ಕುಗ್ಗದೇ ಸಮಚಿತ್ತದಲ್ಲಿರುವುದೇ ಜೀವನ. ಸಾವು, ನೋವು, ನಲಿವು ಬದುಕಿನ ಎರಡು ದಡಗಳು ಅದನ್ನು ಸೇರಲೇಬೇಕು. ಯಾವುದಕ್ಕೂ ಹೆಚ್ಚು ತಲೆಕೆಡಿಸಿಕೊಳ್ಳದೇ ಎಲ್ಲಾವನ್ನೂ ಸಮಚಿತ್ತದಿಂದ ತೆಗೆದುಕೊಂಡು ಬದುಕುವುದೇ ಜೀವನದ ತತ್ವ

ಕೆ.ಸಿ.ಶಿವಪ್ಪ ಅವರಿಗೆ ಈಗ 85 ವರ್ಷ. ಇವರು ಚಾಮರಾಜನಗರ ಜಿಲ್ಲೆಯವರು. ಅವರು 'ಮುದ್ದುರಾಮನ' ಹೆಸರಿನಲ್ಲಿ ಬರೆದಿರುವ ಚೌಪದಿಗಳ ಸಂಖ್ಯೆ ಸುಮಾರು ಮೂವತ್ತು ಸಾವಿರ. ಕನ್ನಡ ಸಾಹಿತ್ಯದ ಬಗೆಗೆ ಅವರಿಗಿರುವ ಕಾಳಜಿ, ಬದುಕಿನ ಬಗೆಗೆ ಅವರಿಗಿರುವ ಉತ್ಸಾಹ ನಿಜಕ್ಕೂ ಒಂದು ಕ್ಷಣ ಬೆರಗನ್ನುಂಟು ಮಾಡಿತು.

ಕನ್ನಡದ ಭಗವದ್ಗೀತೆ ಎಂದೇ ಪ್ರಸಿದ್ಧವಾಗಿರುವ ಡಿವಿಜಿ ಅವರ ಮಂಕುತಿಮ್ಮನ ಕಗ್ಗ ಸಾರ್ವಕಾಲಿಕವಾದ ಶ್ರೇಷ್ಠ ಕೃತಿ ಎನಿಸಿಕೊಂಡಿದೆ. ಮಂಕುತಿಮ್ಮನ ಕಗ್ಗದಲ್ಲಿ ಹೇಳದಿರುವ ವಿಚಾರಗಳೇ ಇಲ್ಲ. ಜೀವನದ ಬಗೆಗೆ ಬಹುತೇಕ ಎಲ್ಲಾ ವಿಚಾರಗಳನ್ನು ಸುಮಾರು 945 ಪದ್ಯಗಳಲ್ಲಿ ಹೇಳಲಾಗಿದೆ. ಡಿವಿಜಿ ಅವರಂತೆಯೇ ಕೆ.ಸಿ.ಶಿವಪ್ಪ ಅವರು ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ಸರಳಗನ್ನಡದಲ್ಲಿ ಮುದ್ದುರಾಮನ ಹೆಸರಿನಲ್ಲಿ ಚೌಪದಿಗಳ ರೂಪದಲ್ಲಿ ಕೃತಿಗಳನ್ನು ಬರೆದಿದ್ದಾರೆ. ಅವರು ಬರೆದಿರುವ ಚೌಪದಿಗಳ ಸಂಖ್ಯೆ ಮೂವತ್ತು ಸಾವಿರವಾದರೂ ಪ್ರಕಟವಾಗಿರುವುದು ಕೇವಲ ನಾಲ್ಕು ಸಂಪುಟಗಳಲ್ಲಿ (ಒಂದೊಂದು ಸಂಪುಟದಲ್ಲಿ 900 ಚೌಪದಿಗಳು) ನಾಲ್ಕು ಸಾವಿರ ಮಾತ್ರವೇ ಪ್ರಕಟವಾಗಿವೆ. ಉಳಿದ ಚೌಪದಿ ಪದ್ಯಗಳು ಪ್ರಕಟವಾಗಬೇಕಿದೆ.

ಬೇಕು ಬೇಕೆನುವಾತ ಲೋಕದಲ್ಲಿ ಬಲು ದುಃಖಿ;
ಸುಖಿ ಯಾರು? ಸಾಕೆನುತ ನಗುತಲಿರುವಾತ
ಸಂತಸಕೆ ಆಯ್ಕೆಯಿದೆ ಕಣ್ಮುಂದೆ ನೂರಾರು;
ಒಲಿ ಇಷ್ಟವಾದುದಕೆ –ಮುದ್ದುರಾಮ

ಸಾಮಾನ್ಯವಾಗಿ ಮನುಷ್ಯನ ಸ್ವಭಾವ ಏನು ನೋಡಿದರೂ ಬೇಕು ಬೇಕು. ತನಗೆ ಎಷ್ಟೇ ದೊರೆತ್ತಿದ್ದರೂ ಇನ್ನೂ ಬೇಕೆಂಬ ತುಡಿತ ಇದ್ದೇ ಇರುತ್ತದೆ. ಅದು ಹಣವಾಗಿರಬಹುದು, ಆಸ್ತಿಯಾಗಿರಬಹುದು, ಅಧಿಕಾರ, ಪದವಿ ಏನೇ ಆಗಿರಬಹುದು. ಇರುವುದರಲ್ಲಿ ಅಥವಾ ಇದ್ದಷ್ಟರಲ್ಲೇ ತೃಪ್ತಿ ಹೊಂದುವ ಮನೋಭಾವವೇ ನಮಗಿರುವುದಿಲ್ಲ. ಇಲ್ಲಿ ಅದನ್ನೇ ಹೇಳಿದ್ದಾರೆ. ತನಗೆ ಸಿಕ್ಕಿರುವುದರಲ್ಲಿ ಸಂತೋಷವನ್ನು ಕಾಣದೇ ಇನ್ನು ಬೇಕು, ಬೇಕು ಎಂದು ಅಪೇಕ್ಷೆ ಪಡುವವನೇ ಈ ಲೋಕದಲ್ಲಿ ಬಹಳ ದುಃಖಿ. ಹಾಗಾದರೆ ಸುಖಿವಾಗಿರುವವರು ಯಾರು ಎಂದು ಯಾರಾದರೂ ಪ್ರಶ್ನಿಸಿದರೆ ಅವರಿಗೂ ಇಲ್ಲಿ ಉತ್ತರವಿದೆ. ಇರುವುದರಲ್ಲೇ ಸಾಕು ಎಂದು ತನ್ನ ಬದುಕಿನಲ್ಲಿ ಏನೇ ಕಷ್ಟಗಳು ಎದುರಾದರೂ ನಗುತ್ತಾ ಎದುರಿಸುವವನೇ ನಿಜವಾದ ಸುಖಿ. ಇಡೀ ಬದುಕಿನುದ್ದಕ್ಕೂ ಸಂತೋಷ ಪಡಲು ನೂರಾರು ಆಯ್ಕೆಗಳಿವೆ. ನಿನಗೆ ಇಷ್ಟ ವಾದುದನ್ನು ಪ್ರೀತಿಸುವುದನ್ನು ಕಲಿತು ಅದರಲ್ಲಿ ಸಂತೋಷವನ್ನು ಪಡೆಯುವುದನ್ನು ಕಲಿ ಎಂದು ತಿಳಿಸಲಾಗಿದೆ.

ಬಿಡುವಿರದ ಕೆಲಸದಲಿ ಇಲ್ಲ ಚಿತ್ತಾನಂದ;
ಆಗೊಮ್ಮೆ ಈಗೊಮ್ಮೆ ನೋಡು ಆಗಸವ.
ಪಡೆ ಹುರುಪ ಮುಗಿಲಿಂದ, ತಾರೆ ಮಿನುಮಿನುಗಿಂದ; ವಿಶ್ರಾಂತಿ ಮನಕಾಂತಿ –ಮುದ್ದುರಾಮ

ಕೆ.ಸಿ.ಶಿವಪ್ಪ ಅವರು ಈ ಚೌಪದಿಯಲ್ಲಿ ಆಧುನಿಕ ಜೀವನದ ಜಂಜಾಟದಲ್ಲಿ ತೊಡಗಿಕೊಂಡು ತಮ್ಮ ಸುತ್ತಾ ಮುತ್ತಾ ನಡೆಯುವ ಸಂಗತಿಗಳನ್ನು ಮರೆಯುವ ಇಂದಿನ ಯುವ ಜನಾಂಗಕ್ಕೆ ಕಿವಿಮಾತು ಹೇಳಿದ್ದಾರೆ. ಬದುಕಲಿಕ್ಕೆ ಒಂದು ಉದ್ಯೋಗ ಬೇಕು, ಹಣವು ಬೇಕು. ಹಾಗೆ ಹೇಳಿದ ಮಾತ್ರಕ್ಕೆ ಹಣವೊಂದೇ ಜೀವನದ ಪರಮ ಗುರಿಯಾಗಬಾರದು. ಹಣದ ಬೆಂಬತ್ತಿ ಬಿಡುವೇ ಇಲ್ಲದಾಗೆ ಕೆಲಸದಲ್ಲಿ ನಮ್ಮನ್ನು ತೊಡಗಿಸಿಕೊಂಡರೆ ನಮಗೆ ಆನಂದವೇ ಇಲ್ಲವಾಗುತ್ತದೆ. ಆಗೊಮ್ಮೆ ಈಗೊಮ್ಮೆ ನೋಡು ಆಗಸವ ಅಂದರೆ ಪ್ರಸ್ತುತ ದಿನಗಳಲ್ಲಿ ಸಣ್ಣ ಪುಟ್ಟ ವಿಚಾರಗಳನ್ನು ಗಮನಿಸುವುದನ್ನೇ ಮರೆತ್ತಿದ್ದೇವೆ. ಮೊದಲೆಲ್ಲಾ ಮನೆಗಳಲ್ಲಿ, ಹಬ್ಬದ ದಿನಗಳಲ್ಲಿ ಸಂಬಂಧಿಕರ, ಸ್ನೇಹಿತರ ಕಷ್ಟ–ಸುಖಗಳನ್ನು ವಿಚಾರಿಸುತ್ತಿದ್ದರು. ಬಸ್‌ಗಳಲ್ಲಿ ಪ್ರಯಾಣ ಮಾಡುತ್ತಿದ್ದರೆ ಅಕ್ಕ–ಪಕ್ಕ ಕುಳಿತವರ ಪರಿಚಯ ಮಾಡಿಕೊಂಡು ಯೋಗಕ್ಷೇಮ ವಿಚಾರಿಸುತ್ತಿದ್ದರು. ಆದರೆ ಈಗ ಅವರವರ ಚಿಂತೆ, ಎಲ್ಲಾರ ನೆಮ್ಮದಿ ಕಸಿದುಕೊಂಡಿರುವ ಸಂಚಾರಿವಾಣಿ (ಮೊಬೈಲ್) ಇಂದ ಪರಸ್ಪರ ಮಾತನಾಡುವುದನ್ನು ಮರೆತು ತಮ್ಮದೇ ಲೋಕದಲ್ಲಿ ಬದುಕುತ್ತಿದ್ದಾರೆ. ಕೆಲಸದ ಮಧ್ಯೆ ವಿಶ್ರಾಂತಿಯನ್ನು ಪಡೆ, ಇದರಿಂದ ನಿಮ್ಮ ಮನದ ಕಾಂತಿಯೂ ಆ ತಾರೆಗಳಂತೆ ಮಿನುಗುತ್ತದೆ ಎಂಬ ಹಿತನುಡಿಗಳನ್ನು ಈ ಚೌಪದಿಯಲ್ಲಿ ತಿಳಿಸಿದ್ದಾರೆ. ಒತ್ತಡದ ಕೆಲಸದ ಮಧ್ಯೆ ವಿಶ್ರಾಂತಿಯ ಅಗತ್ಯವಿದೆ ಎಂಬ ಸಂದೇಶವನ್ನು ನೀಡಿದ್ದಾರೆ.

ಯಾರೊ ಬಯ್ದರು ಅಂದು, ಯಾರೊ ಜಿಗುಟಿದರೆಂದು
ಎನುತದನೆ ಉಚ್ಚರಿಸಿ ಅತ್ತರದು ಬದುಕೆ?
ಆದುದನು ಮರೆಯದಿರೆ ವರ್ತಮಾನವೆ ಮಸಣ;
ಗತ ಮರೆತು ನಗು ಈಗ –ಮುದ್ದುರಾಮ

ಬಹುತೇಕ ಮನುಷ್ಯರ ಸಹಜ ಗುಣ ಇದೇ ತರಹ ಇರುತ್ತದೆ.ಭೂತ ಕಾಲದಲ್ಲಿ ನಡೆದ ಘಟನೆಗಳನ್ನೇ ನೆನಪಿಸಿಕೊಂಡು ವರ್ತಮಾನದ ಸುಮಧುರ ಕ್ಷಣಗಳನ್ನು ಮರೆತು ಬಾಳುವವರಿಗೆ ಕಿವಿಮಾತನ್ನು ಹೇಳಿದಂತಿದೆ ಈ ಚೌಪದಿ. ಎಲ್ಲರೂ ಎಲ್ಲರನ್ನೂ ಹೊಗಳಲು, ಪ್ರೀತಿಸಲು ಸಾಧ್ಯವಿಲ್ಲ! ಹಾಗೆಯೇ ಎಲ್ಲರೂ ಎಲ್ಲರನ್ನೂ ತೆಗಳಲೂ, ದ್ವೇಷಿಸಲೂ ಸಾಧ್ಯವಿಲ್ಲ! ದುರಂತ ಬದುಕಿನ ಈ ಸತ್ಯ ನಮಗೆ ಅರ್ಥವೇ ಆಗುವುದಿಲ್ಲ. ಹಿಂದೆ ಎಂದೋ ನಡೆದ ಘಟನೆಗಳನ್ನು ಮೆಲುಕು ಹಾಕಿಕೊಂಡು ಅದನ್ನೇ ಮತ್ತೆ ಮತ್ತೆ ನೆನಪಿಸಿಕೊಂಡು ಅವುಗಳ ಬಗ್ಗೆಯೇ ಚಿಂತಿಸುತ್ತಾ ಕುಳಿತರೆ ಅದು ಒಂದು ಬದುಕೆ. ನಮ್ಮ ಜನ ಮಹಾನ್ ವ್ಯಕ್ತಿಗಳನ್ನೇ ಅಷ್ಟೇ ಯಾಕೆ ದೇವರನ್ನೇ ಬಿಟ್ಟಿಲ್ಲ, ಇನ್ನೂ ನಮ್ಮಂತಹ ಮನುಷ್ಯರನ್ನು ಬಿಡುತ್ತಾರೆಯೇ. ಖಂಡಿತವಾಗಿ ಇಲ್ಲ. ಉದ್ದೇಶಪೂರಕವಾಗಿ ಕೆಲವೊಮ್ಮೆ ಬೈಯ್ಯುವರು ಇನ್ನೂ ಕೆಲವೊಮ್ಮೆ ತಮ್ಮ ತಪ್ಪುಗಳನ್ನು ಮುಚ್ಚಿಟ್ಟುಕೊಳ್ಳಲು ಇರುವ ಏಕೈಕ ಮಾರ್ಗ ಎಂದರೆ ಅದನ್ನು ಮತ್ತೊಬ್ಬರ ಮೇಲೆ ಹೊರಿಸಿ ಅವರನ್ನು ನಿಂದಿಸಿ ತಾನು ಸುರಕ್ಷಿತವಾಗಿರುವುದು. ಆದರೆ ಅದರಿಂದ ನೋವನ್ನು ಅನುಭವಿಸಿದವರಿಗೆ ಆ ನಿಂದನೆ, ನೋವು ತುಂಬಾ ನೋವುಂಟು ಮಾಡುತ್ತದೆ, ನಿಜ ಆದರೆ ಅದನ್ನೇ ಮತ್ತೆ ಮತ್ತೆ ನೆನಪಿಸಿಕೊಂಡು, ಅದರ ಬಗ್ಗೆಯೇ ಯೋಚಿಸುವುದರಲ್ಲಿಯೂ ಯಾವ ಅರ್ಥವೂ ಇಲ್ಲ.

ನೂರೊಂದು ತಪ್ಪೆಸಗಿ, ಕಂಬನಿಗೆ ಮುಳುವಾಗಿ
ಕಾಶಿಯಲಿ ಮಿಂದರೇಂ ಪಾಪ ಕಳೆಯುವುದೇ
ನೊಂದ ಕಣ್ಣೀರೊರೆಸು; ದಾರಿ ಅದೆ ಪುಣ್ಯಕ್ಕೆ.
ಇದೆ ಸಗ್ಗ ಇಹದಲ್ಲೆ! –ಮುದ್ದುರಾಮ

ನಮ್ಮಲ್ಲಿ ಒಂದು ನಂಬಿಕೆ ಇದೆ. ಆ ನಂಬಿಕೆ ಬಹುಪಾಲು ಎಲ್ಲಾ ಜಾತಿ, ಧರ್ಮಗಳಲ್ಲೂ ಅಡಗಿದೆ.ಅದೇನೆಂದರೆ ನಾವೇನೇ ಪಾಪ, ಕರ್ಮಗಳನ್ನು ಮಾಡಿದ್ದರೂ ತೀರ್ಥಯಾತ್ರೆಗಳಿಗೆ ಹೋದರೆ, ಪವಿತ್ರವಾದ ಸ್ಥಳಗಳಲ್ಲಿ ಹೋಗಿ ಸ್ನಾನ ಮಾಡಿದರೆ ನಮ್ಮ ಪಾಪವೆಲ್ಲಾ ಕಳೆಯುತ್ತದೆ ಎಂಬ ನಂಬಿಕೆ ಎಲ್ಲರಲ್ಲಿಯೂ ಇದೆ. ಹಿಂದೂಗಳಲ್ಲಿ ಕಾಶಿ, ರಾಮೇಶ್ವರಕ್ಕೆ ಹೋಗಿ ತೀರ್ಥಸ್ನಾನ ಮಾಡಿದರೆ ಪಾಪ, ಕರ್ಮಗಳು ಪರಿಹಾರವಾಗುತ್ತದೆ ಎಂಬ ನಂಬಿಕೆ ಇದ್ದರೆ, ಇತರೆ ಜನಾಂಗದಲ್ಲೂ ಇದೇ ರೀತಿ ನಂಬಿಕೆ ಸಾಮಾನ್ಯವಾಗಿದೆ.

ಈ ಚೌಪದಿಯಲ್ಲಿ ಕೆ.ಸಿ.ಶಿವಪ್ಪ ಅವರು ಅದನ್ನೇ ಹೇಳಿದ್ದಾರೆ.ನೂರಾರು ತಪ್ಪುಗಳನ್ನು ಮಾಡಿ ಕಣ್ಣೀರುಗಳಿಗೆ ಕಾರಣವಾಗಿ ಕಾಶಿಗೆ ಹೋಗಿ ಸ್ನಾನ ಮಾಡಿದರೆ ನೀವು ಮಾಡಿದ ಪಾಪ ಕಳೆಯುವುದೇ. ನೋವನ್ನುಂಟು ಮಾಡಿದವರ ಕಣ್ಣೀರನ್ನು ಒರೆಸು, ಸಾಧ್ಯವಾದರೆ ಅವರ ನೋವನ್ನು ಹೋಗಲಾಡಿಸು ಇದೇ ನಿಜವಾದ ಪುಣ್ಯ. ಸ್ವರ್ಗ, ನರಕ ಎಂಬುದು ಬೇರೆ ಎಲ್ಲಿಯೂ ಇಲ್ಲ, ನೊಂದವರ ಕಷ್ಟಕ್ಕೆ ಸ್ಪಂದಿಸಿದರೆ ಇಲ್ಲೇ ಸ್ವರ್ಗ ಸಿಗುತ್ತದೆ ಎಂಬ ವಿಶಾಲ ಮನೋಧರ್ಮವನ್ನು ಬೆಳೆಸಿಕೊಂಡಾಗ , ಪರಸ್ಪರ ಗೌರವ, ಪ್ರೀತಿ, ಭಾವನೆಗಳನ್ನು ಬೆಳೆಸಿಕೊಂಡಾಗ ಬದುಕು ಹಸನಾಗುತ್ತದೆ ಎಂಬ ಬದುಕಿನ ಸಾರವನ್ನು ತಿಳಿಸಿದ್ದಾರೆ. ಇದನ್ನು ಅರ್ಥಮಾಡಿಕೊಂಡರೆ ಪ್ರತಿಯೊಬ್ಬರ ಬದುಕಿಗೊಂದು ಅರ್ಥ, ಜೀವನಕ್ಕೊಂದು ಮೌಲ್ಯ ಬರುತ್ತದೆ.

ಯಾರೊ ಕುಟುಕಿದರೆಂದು ಚೇಳಾಗುವೆಯ ನೀನು
ಯಾರೊ ಬುಸುಗುಟ್ಟಿದರೆ ಸರ್ಪವಾಗುವೆಯಾ
ಯಾರೊ ಬೊಗಳಿದರೆಂದು ನೀ ಕುನ್ನಿಯಾಗುವೆಯಾ
ಹಾರು ಗರುಡನ ತೆರದಿ –ಮುದ್ದುರಾಮ

ಯಾರೋ ನಿನಗೆ ನೋವುಂಟು ಮಾಡಿದರೆಂದು ಅವರಿಗೆ ನೀನು ನೋವು ಮಾಡುವುದು ಎಷ್ಟರ ಮಟ್ಟಿಗೆ ಸರಿ. ಅವರು ನಿನ್ನನ್ನು ಕುಟುಕಿದರು ಎಂದು ನೀನು ಅವರ ಪಾಲಿಗೆ ಚೇಳಾಗುವೆಯಾ. ಅವರಂತೆ ನೀನಾಗುವೆಯಾ. ಅವರು ಕುಟುಕಿದರು ಎಂದು ನೀನು ಚೇಳಾಗಬೇಡ, ಯಾರೋ ನಿನ್ನ ಮೇಲೆ ಬುಸುಗುಟ್ಟಿದರು. ಅಂದರೆ, ದ್ವೇಷ ಸಾಧಿಸಿದರು ಎಂದರೆ ನೀನು ಅವರ ಮೇಲೆ ಸರ್ಪದಂತೆ ದ್ವೇಷ ಸಾಧಿಸಲು ಹೋಗಬೇಡ. ಯಾರೋ ನಿನ್ನ ಬಗ್ಗೆ ಇಲ್ಲ ಸಲ್ಲದ್ದನ್ನು ಹೇಳಿದರೆಂದು ನೀನು ಅದರ ಬಗ್ಗೆ ಹೇಳಿಕೊಂಡು ನಾಯಿಯಾಗುವೆಯಾ ಎಂದು ಪ್ರಶ್ನಿಸಿ ನೀನು ಚೇಳು, ಸರ್ಪ, ಕುನ್ನಿ (ನಾಯಿ)ಯಾಗುವ ಬದಲು ಗರುಡನ ಹಾಗೆ ಎತ್ತರಕ್ಕೆ ಹಾರು ಎನ್ನುವ ಮೂಲಕ ನಮ್ಮ ಕೆಲಸವನ್ನು ನಾವು ಸರಿಯಾಗಿ ಮಾಡುತ್ತಾ , ಟೀಕೆಗಳಿಗೆಲ್ಲಾ ತಲೆಗೆಡಿಸಿಕೊಳ್ಳದೇ ಮುಂದೆ ಸಾಗಿದರೆ ಬಹಳ ಎತ್ತರದ ಸ್ಥಾನಕ್ಕೆ ತಲುಪಬಹುದೆಂಬ ಸಕರಾತ್ಮಕ ಆಲೋಚನೆಯನ್ನು ಬೆಳೆಸಿಕೊಳ್ಳಿ ಎಂಬ ಸಂದೇಶ ನೀಡಿದ್ದಾರೆ.

ಇಲ್ಲಿ ಕಂದನ ಜನನ , ಅಲ್ಲಿ ಮುದುಕನ ಮರಣ;
ಸಂಭ್ರಮದ ಒಡಲಲ್ಲೆ ನೋವಿನುದ್ಗಾರ.
ಚಿತ್ತದಲಿ ಸಮಭಾವ ಜೀವಿತದ ಚಿನ್ಮಯತೆ;
ನೋಡಿ ನಗು, ನಗುತ ನಡೆ –ಮುದ್ದುರಾಮ

ಸಾಮಾನ್ಯವಾಗಿ ಒಳ್ಳೆಯ ವಿಚಾರಗಳು, ಖುಷಿಯ ವಿಚಾರಗಳು ತಿಳಿದರೆ ಸಂತೋಷವಾಗುತ್ತದೆ. ಅದೇ ನೋವಿನ ವಿಚಾರಗಳು ತಿಳಿದರೆ ದುಃಖವಾಗುತ್ತದೆ. ಒಂದು ಕಡೆ ಜನನದ ವಿಚಾರ ತಿಳಿದು ಸಂತಸಪಟ್ಟರೆ, ಮತ್ತೊಂದು ಕಡೆ ಸಾವಿನ ಸುದ್ದಿ ಬರುತ್ತದೆ. ಸಂತೋಷದಲ್ಲಿಯೇ ದುಃಖವು ಅಡಗಿರುತ್ತದೆ. ಸುಖಕ್ಕೆ ಹಿಗ್ಗದೇ, ದುಃಖಕ್ಕೆ ಕುಗ್ಗದೇ ಸಮಚಿತ್ತದಲ್ಲಿರುವುದೇ ಜೀವನ. ಸಾವು, ನೋವು, ನಲಿವು ಬದುಕಿನ ಎರಡು ದಡಗಳು ಅದನ್ನು ಸೇರಲೇಬೇಕು. ಯಾವುದಕ್ಕೂ ಹೆಚ್ಚು ತಲೆಕೆಡಿಸಿಕೊಳ್ಳದೇ ಎಲ್ಲಾವನ್ನೂ ಸಮಚಿತ್ತದಿಂದ ತೆಗೆದುಕೊಂಡು ಬದುಕುವುದೇ ಜೀವನದ ತತ್ವ ಎಂದು ಹೇಳಲಾಗಿದೆ.

ಯಾರನೂ ದೂರದಿರು ಯಾವುದೇ ಕಾರಣಕೆ;
ಎಷ್ಟಿದೆಯೊ ತಲೆ ಮೇಲೆ ಅವರವರ ಭಾರ!
ದೂಷಣೆಗೆ ಬಲಿಯಾಗಿ ನಗೆ ಮರೆತರೇನಿದೆಯೊ?
ಬಾಳಪಯಣವೆ ಕಿರಿದು –ಮುದ್ದುರಾಮ

ಅವರು ಸರಿಯಿಲ್ಲ, ಇವರು ಸರಿಯಿಲ್ಲ ಎಂದು ಅವರಿವರ ಬಗ್ಗೆಯೇ ದೂರುವುದನ್ನು ಬಿಡು, ಪ್ರತಿಯೊಬ್ಬರಿಗೂ ಅವರದೇ ಆದ ಕಷ್ಟವಿರುತ್ತದೆ. ಅದನ್ನು ಅರಿಯದೇ ವೃಥಾ ದೂರನ್ನಾಡದಿರು ಎಂದು, ಕೆಲವೊಮ್ಮೆ ನಾವು ಆಡುವ ಸಣ್ಣ ಮಾತುಗಳಿಂದ ಆಗುವ ಪರಿಣಾಮ ಅಗಾಧವಾಗಿಯೇ ಪರಿಣಾಮ ಬೀರಿರುವುದರಿಂದ ಸಂತೋಷ, ನಗುವನ್ನೇ ಮರೆತಂತೆ ಬಾಳಬೇಕಾಗುತ್ತದೆ. ಜೀವನ ಕ್ಷಣಿಕವಾದುದು. ಪರಿಸ್ಥಿತಿ ಹೀಗಿರುವಾಗ ಸುಮ್ಮನೆ ಬೇರೆಯವರನ್ನು ನಿಂದಿಸಿ, ಅವರ ಮೇಲೆ ಹಗೆಯನ್ನು ಸಾಧಿಸಿ ನಿನ್ನ ಅಮೂಲ್ಯವಾದ ಕ್ಷಣಗಳನ್ನು ವ್ಯರ್ಥವಾಗಿ ಕಳೆಯದೇ ಸುಮ್ಮನೆ ನಿನ್ನ ಪಾಡಿಗೆ ನೀನಿರು, ಎಲ್ಲರಿಗೂ ಅವರದೇ ಆದ ಜವಾಬ್ದಾರಿ, ಕಷ್ಟಗಳು, ಭಾರಗಳು ಇರುತ್ತವೆ ಎಂದು ತಿಳಿಸಲಾಗಿದೆ.

ಮಾಡಿದುಪಕಾರವನು ಮರೆತುಬಿಡು ಅಂದಂದೆ;
ಊದದಿರು ತುತ್ತೂರಿ ನಾನೆಸಗಿದೆನುತ
ಅಣಿಯಾಗು ಮಾಡಲಿಕೆ ಮತ್ತೊಂದು ಉಪಕಾರ;
ಬಾಳು ಒಳಿತಿನ ಪಯಣ – ಮುದ್ದುರಾಮ

ನೀವು ಯಾರಿಗಾದರೂ ಉಪಕಾರವನ್ನು ಮಾಡಿದರೆ, ಮಾಡಿದ ಉಪಕಾರವನ್ನು ಅಲ್ಲಿಯೇ ಮರೆತು ಬಿಡು. ಅಂದಂದಿಗೆ ಅದನ್ನು ಮರೆತು ಬಿಡು, ನಾನು ಅವನಿಗೆ ಉಪಕಾರ ಮಾಡಿದೆ ಎಂದು ಮಾಡಿದ ಉಪಕಾರವನ್ನೇ ಎತ್ತೆತ್ತಿ ತೋರಿಸುವುದನ್ನು ಬಿಟ್ಟು ಬಿಡು. ಸಿದ್ಧನಾಗು ಮತ್ತೊಂದು ಉಪಕಾರವನ್ನು ಮಾಡಲು. ಈ ಜೀವನ ಒಳ್ಳೆಯದರ ಪಯಣವಿದ್ದ ಹಾಗೇ ಎಂದು ಸಣ್ಣ ಸಹಾಯ ಮಾಡಿದರೂ ಅದನ್ನು ದೊಡ್ಡ ಪ್ರಚಾರ ಮಾಡುವ ಪ್ರಚಾರ ಪ್ರಿಯರಿಗೆ, ತೋರ್ಪಡಿಕೆಯ ಗುಣವುಳ್ಳವರಿಗೆ ಸೂಕ್ಷ್ಮವಾಗಿ ಚಾಟಿ ಬೀಸಿದಂತೆ. ಅದೇ ಸಮಯದಲ್ಲಿ ಅವರಿಗೆ ಕಿವಿಹಿಂಡಿ ಹಿತವಚನವನ್ನು ನೀಡುವ ಹಿತಚಿಂತಕನಂತೆ ಸಾರ್ವಕಾಲಿಕ ಮಹತ್ವದ ಸಂದೇಶವನ್ನು ರವಾನಿಸಿದ್ದಾರೆ.

ಕಷ್ಟ ಎಷ್ಟೇ ಇರಲಿ ಕತ್ತಲಿನ ನೆರಳಂತೆ
ನಷ್ಟ ಎಷ್ಟೇ ಇರಲಿ ಸೋನೆ ಮಳೆಯಂತೆ
ಇಷ್ಟವಿರಲೀ ಬಿಡಲಿ ಅದನೆದುರಿಸಲೇಬೇಕು
ಇಷ್ಟೇ ನಮ್ಮೀ ಬದುಕು –ಮುದ್ದುರಾಮ

ಕತ್ತಲೆಯ ನಂತರ ಬೆಳಕು, ನೋವಿನ ನಂತರ ನಲಿವು ಬಂದೇ ಬರುತ್ತದೆ. ಹಾಗೆಯೇ ಬದುಕು ಎಂದ ಮೇಲೆ ಕಷ್ಟ, ಸುಖ, ಲಾಭ, ನಷ್ಟಗಳು ಕೂಡ ಬರುತ್ತದೆ. ಕಷ್ಟ ಎಷ್ಟೇ ಬಂದರೂ ಅದನ್ನು ಕತ್ತಲಿನ ನೆರಳಂತೆ ಅಂದರೆ ಅದು ಶಾಶ್ವತವಲ್ಲ ಎಂದು ಭಾವಿಸಿ ಅದನ್ನು ಎದುರಿಸು. ಏಕೆಂದರೆ ಕತ್ತಲೆ ಸರಿದ ಮೇಲೆ ಬೆಳಕು ಬರಲೇ ಬೇಕು. ವ್ಯಾಪಾರ, ವ್ಯವಹಾರಗಳಲ್ಲಿ ಲಾಭವೂ ಬರಬಹುದು, ನಷ್ಟವೂ ಆಗಬಹುದು. ನಷ್ಟ ಎಷ್ಟೇ ಬಂದರೂ ಇರಲಿ ಅದು ಸೋನೆ ಮಳೆಯಂತೆ. ಜೀವನವು ಹಾಗೆಯೇ ಅಯ್ಯೋ ನನಗೆ ಕಷ್ಟಗಳು ಬರುತ್ತವೆ, ಸಮಸ್ಯೆಗಳು ಬೆಂಬತ್ತಿ ಕಾಡುತ್ತವೆ ಎಂದು ನಕರಾತ್ಮಕ ಆಲೋಚನೆಗಳಿಗೆ ಒಳಗಾಗದೇ ಜೀವನದಲ್ಲಿ ಬಂದುದ್ದನ್ನು ಅದು ಇಷ್ಟವಿರಲೀ, ಇಷ್ಟವಿಲ್ಲದಿರಲೀ ಅದನ್ನು ಎದುರಿಸಲೇಬೇಕು ಇಷ್ಟೇ ನಮ್ಮ ಜೀವನ ಎನ್ನುವ ಮೂಲಕ ಏನೇ ಬಂದರೂ ಅದನ್ನು ಎದುರಿಸಿ ನಿಲ್ಲಿ ಎಂದು ಹೇಳಿದ್ದಾರೆ. ನನಗೆ ಈ ಚೌಪದಿಯನ್ನು ಓದುವಾಗ ಬಸವಣ್ಣನ ವಚನವೊಂದು ನೆನಪಾಗುತ್ತದೆ.

ನಾಳೆ ಬಪ್ಪುದು ನಮಗಿಂದೇ ಬರಲಿ
ಇಂದು ಬಪ್ಪುದು ನಮಗೀಗಲೇ ಬರಲಿ
ಇದಕ್ಕಾರು ಅಂಜುವರು ಕೂಡಲ ಸಂಗಮದೇವಾ?

ಜೀವನದಲ್ಲಿ ಏನೇ ಬಂದರೂ ಅದನ್ನು ಎದುರಿಸಿ ನಿಲ್ಲು, ಇಷ್ಟವಿರಲೀ, ಇಲ್ಲದಿರಲಿ ಅದನ್ನು ಎದುರಿಸಲು ಸಿದ್ಧನಾಗು.

ಇಡೀ ಚೌಪದಿಗಳಲ್ಲಿ ಕೇವಲ ಬೆರಳೆಣಿಕೆಯನ್ನಷ್ಟೇ ವಿವರಿಸಿರುವೆ.ಇದೇ ಬಗೆಯ ಇದಕ್ಕಿಂತಲೂ ಹೆಚ್ಚು ಹತ್ತಿರವಾಗುವ, ಜೀವನದ ವಿವಿಧ ಬಗೆಯ ವಿಚಾರಧಾರೆಗಳನ್ನು ಮುದ್ದುರಾಮ ಅಂಕಿತದೊಡನೆ ಬರೆಯಲಾಗಿದೆ. ಇಲ್ಲಿ ಹೇಳದಿರುವ ವಿಷಯಗಳು ಏನಾದರೂ ಉಂಟೇ ಎಂದು ನೋಡಿದರೆ ಅದಕ್ಕೆ ಉತ್ತರ ನೀಡುವುದು ಕಷ್ಟವಾದೀತು. ಈ ಚೌಪದಿಗಳನ್ನು ಒಂದೇ ಓದಿಗೆ ಕುತೂಹಲದಿಂದ ಓದಿ ಮುಗಿಸುವ ಗೋಜಿಗೆ ಹೋಗದೇ ದಿನಕ್ಕೆರಡು, ಮೂರರಂತೆ ಓದಿ ಅರ್ಥೈಯಿಸಿಕೊಂಡರೆ, ಅರ್ಥೈಯಿಸಿಕೊಂಡಿದ್ದನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಸತ್ಯವಾಗಲೂ ಮತ್ತೆ, ಮತ್ತೆ ಮುದ್ದರಾಮ ನಮಗೆ ಮತ್ತಷ್ಟು, ಮಗದಷ್ಟು ಆಪ್ತನಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

■ ಸಿ.ಎಸ್.ರಾಘವೇಂದ್ರ
ಮೊ: 9036389640

ಬಾರ್ಡರ್-ಗವಾಸ್ಕರ್ ಟ್ರೋಫಿ

ಮೊದಲ ಟೆಸ್ಟ್: ಆಸ್ಟ್ರೇಲಿಯಾ ವಿರುದ್ಧ ಭಾರತಕ್ಕೆ ಇನ್ನಿಂಗ್ಸ್, 132 ರನ್ ಗೆಲುವು



ನವದೆಹಲಿ, ಫೆ.11– ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಬಾರ್ಡರ್–ಗವಾಸ್ಕರ್ ಟ್ರೋಫಿ 2023ರ ಮೊದಲ ಟೆಸ್ಟ್ ಪಂದ್ಯ ನಾಗ್ಪುರದ ವಿದರ್ಭ ಕ್ರಿಕೆಟ್ ಅಸೋಸಿಯೇಷನ್ ಸ್ಟೇಡಿಯಂನಲ್ಲಿ ನಡೆಯಿತು. ಇದರಲ್ಲಿ ಭಾರತ ತಂಡ ಆಸ್ಟ್ರೇಲಿಯಾ ವಿರುದ್ಧ ಇನಿಂಗ್ಸ್ ಮತ್ತು 132 ರನ್‌ಗಳ ಭರ್ಜರಿ ಜಯ ದಾಖಲಿಸಿತು. ಈ ಗೆಲುವಿನೊಂದಿಗೆ ಟೀಂ ಇಂಡಿಯಾ 4 ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿದೆ.

ಈ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡ ಸಂಪೂರ್ಣ ಸೋತಿದೆ. ಬೌಲಿಂಗ್ ನಲ್ಲಾಗಲೀ ಅಥವಾ ಬ್ಯಾಟಿಂಗ್‌ನಲ್ಲಾಗಲೀ ಆಸ್ಟ್ರೇಲಿಯಾ ತನ್ನ ಶಕ್ತಿಯನ್ನು ತೋರಿಸಲು ಸಾಧ್ಯವಾಗಲಿಲ್ಲ. ಪಂದ್ಯ ಸಂಪೂರ್ಣವಾಗಿ ರೋಹಿತ್ ಶರ್ಮಾ ನೇತೃತ್ವದ ಭಾರತ ಕ್ರಿಕೆಟ್ ತಂಡದ ಕೈಯ್ಯಲ್ಲಿತ್ತು. ಅದೇ ಸಮಯದಲ್ಲಿ, ಈ ದೊಡ್ಡ ಗೆಲುವಿನ ನಂತರ, ಅಭಿಮಾನಿಗಳು ಟೀಮ್ ಇಂಡಿಯಾವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹೊಗಳುತ್ತಿದ್ದರೆ ಆಸ್ಟ್ರೇಲಿಯಾವನ್ನು ತೆಗಳುತ್ತಿದ್ದಾರೆ.

ಆಸ್ಟ್ರೇಲಿಯಾ ಕ್ರಿಕೆಟ್ ತಂಡ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಲು ನಿರ್ಧರಿಸಿತ್ತು. ಇನ್ನು ರವೀಂದ್ರ ಜಡೇಜಾ ಮತ್ತು ರವಿಚಂದ್ರನ್ ಅಶ್ವಿನ್ ಅವರ ಬೌಲಿಂಗ್ ನಿಂದಾಗಿ ಕಾಂಗರೂ ತಂಡ 177 ರನ್‌ಗಳಿಗೆ ಕುಸಿಯಿತು. ಮೊದಲ ಇನ್ನಿಂಗ್ಸ್‌ನಲ್ಲಿ ಜಡೇಜಾ 5 ವಿಕೆಟ್ ಪಡೆದರೆ, ಅಶ್ವಿನ್ 3 ವಿಕೆಟ್ ಪಡೆದರು. ಮೊಹಮ್ಮದ್ ಶಮಿ ಮತ್ತು ಮೊಹಮ್ಮದ್ ಸಿರಾಜ್ 1–1 ವಿಕೆಟ್ ಪಡೆದರು.

ಇದಕ್ಕೆ ಉತ್ತರವಾಗಿ ರೋಹಿತ್ ಶರ್ಮಾ ಅವರ ಶತಕ (120), ಜಡೇಜಾ ಮತ್ತು ಅಕ್ಷರ್ ಅವರ ಅರ್ಧಶತಕಗಳ ನೆರವಿನಿಂದ 400 ರನ್ ಗಳಿಸಿ, 223 ರನ್ ಮುನ್ನಡೆ ಸಾಧಿಸಿತು. ಹೀಗಿರುವಾಗ ಪಂದ್ಯದ ಮೂರನೇ ದಿನ ಎರಡನೇ ಇನ್ನಿಂಗ್ಸ್‌ನಲ್ಲಿ ಬ್ಯಾಟಿಂಗ್‌ಗೆ ಇಳಿದ ಆಸ್ಟ್ರೇಲಿಯಾ ತಂಡ ಮತ್ತೊಮ್ಮೆ ಸ್ಪಿನ್‌ನ ಮುಂದೆ ಮುಗ್ಗರಿಸಿತು. ಅಶ್ವಿನ್ 5 ವಿಕೆಟ್ ಪಡೆದು ತಲ್ಲಣ ಮೂಡಿಸಿದರು. ಆಸ್ಟ್ರೇಲಿಯ ತಂಡ ಎರಡನೇ ಇನ್ನಿಂಗ್ಸ್‌ನಲ್ಲಿ ಕೇವಲ 91 ರನ್ ಗಳಿಸಿ ಆಲೌಟ್ ಆಗಿತ್ತು. ಇದರಿಂದಾಗಿ ಭಾರತ ಇನ್ನಿಂಗ್ಸ್ ಮತ್ತು 132 ರನ್‌ಗಳ ಜಯ ಸಾಧಿಸಿತು.

ಕುಂಬ್ಳೆ ಸೇರಿ ಹಲವು ದಾಖಲೆ ಮುರಿದ ಆರ್.ಅಶ್ವಿನ್



ನಾಗ್ಪುರ, ಫೆ.11– ಆಸ್ಟ್ರೇಲಿಯಾ ವಿರುದ್ಧ ನಾಗ್ಪುರದಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದಲ್ಲಿ ರವಿಚಂದ್ರನ್ ಅಶ್ವಿನ್ ದೊಡ್ಡ ದಾಖಲೆಯೊಂದನ್ನು ಮುರಿದಿದ್ದಾರೆ. ಅಶ್ವಿನ್ ಭಾರತ ಪರ ಅತಿ ವೇಗದಲ್ಲಿ 450 ಟೆಸ್ಟ್ ವಿಕೆಟ್ ಪಡೆದ ಬೌಲರ್ ಎನಿಸಿಕೊಂಡಿದ್ದಾರೆ. ಅಲೆಕ್ಸ್ ಕ್ಯಾರಿ ಅವರನ್ನು ಔಟ್ ಮಾಡುವ ಮೂಲಕ ಅಶ್ವಿನ್ ತಮ್ಮ 450ನೇ ಟೆಸ್ಟ್ ವಿಕೆಟ್ ಪಡೆದರು. ಅಶ್ವಿನ್ ಇದೀಗ ಭಾರತದ ಅನಿಲ್ ಕುಂಬ್ಳೆ ಗ್ಲೆನ್ ಮೆಕ್‌ಗ್ರಾತ್, ಶೇನ್ ವಾರ್ನ್ ಮತ್ತು ನಾಥನ್ ಲಿಯಾನ್ ಅವರನ್ನು ಅತೀ ವೇಗದ ಟೆಸ್ಟ್ ವಿಕೆಟ್ ಪಡೆಯುವಲ್ಲಿ ಹಿಂದಿಕ್ಕಿದ್ದಾರೆ. ಮತ್ತೊಂದೆಡೆ, ಟೆಸ್ಟ್‌ನಲ್ಲಿ 450 ವಿಕೆಟ್‌ಗಳನ್ನು ಪಡೆದ ವಿಶ್ವದ ಒಂಬತ್ತನೇ ಬೌಲರ್ ಅಶ್ವಿನ್ ಆಗಿದ್ದಾರೆ.

ರವಿಚಂದ್ರನ್ ಅಶ್ವಿನ್ ತಮ್ಮ 89ನೇ ಪಂದ್ಯದಲ್ಲಿ ಈ ಸಾಧನೆ ಮಾಡಿದರು. ಅಷ್ಟೇ ಅಲ್ಲ, ಆಸ್ಟ್ರೇಲಿಯ ವಿರುದ್ಧ 18 ಪಂದ್ಯಗಳಲ್ಲಿ ಅಶ್ವಿನ್ 91 ವಿಕೆಟ್ ಪಡೆದಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕಾಂಗರೂ ತಂಡದ ವಿರುದ್ಧ ವಿಕೆಟ್‌ಗಳ ಶತಕ ಪೂರೈಸಲು ಕೇವಲ 7 ವಿಕೆಟ್‌ಗಳನ್ನು ಮಾತ್ರ ಪಡೆಯಬೇಕಿದೆ. ಭಾರತದ ಇನ್ನಿಂಗ್ಸ್‌ನಲ್ಲಿ ಅಶ್ವಿನ್ 15.5 ಓವರ್ ಬೌಲ್ ಮಾಡಿ ಮೂರು ವಿಕೆಟ್ ಪಡೆದರು. ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ ನಂತರ ಅಶ್ವಿನ್ ವೇಗವಾಗಿ ವಿಕೆಟ್ ಪಡೆದ ಸ್ಪಿನ್ ಬೌಲರ್ ಎನಿಸಿಕೊಂಡಿದ್ದಾರೆ. ಮುರಳೀಧರನ್ ತಮ್ಮ 80ನೇ ಟೆಸ್ಟ್ ಪಂದ್ಯದಲ್ಲಿ 450 ವಿಕೆಟ್ ಕಬಳಿಸಿದ್ದರೆ, ಭಾರತದ ಅನಿಲ್ ಕುಂಬ್ಳೆ ಇದೀಗ ಮೂರನೇ ಸ್ಥಾನಕ್ಕೆ ಕುಸಿದಿದ್ದಾರೆ. ಕುಂಬ್ಳೆ ತಮ್ಮ 93ನೇ ಟೆಸ್ಟ್‌ನಲ್ಲಿ ಈ ಸಾಧನೆ ಮಾಡಿದ್ದರು.

450 ವಿಕೆಟ್ ಪಡೆದ ಎರಡನೇ ಭಾರತೀಯ: ಅಶ್ವಿನ್ ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ಪರ 450 ವಿಕೆಟ್ ಪಡೆದ ಎರಡನೇ ಬೌಲರ್ ಎನಿಸಿಕೊಂಡಿದ್ದಾರೆ. ಅಶ್ವಿನ್‌ಗಿಂತ ಮೊದಲು ಭಾರತಕ್ಕಾಗಿ ಅನಿಲ್ ಕುಂಬ್ಳೆ ಈ ಸಾಧನೆ ಮಾಡಿದ್ದರು. ಮತ್ತೊಂದೆಡೆ, ನಾವು ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್‌ಗಳ ಬಗ್ಗೆ ಮಾತನಾಡಿದರೆ, ಅದು ಶ್ರೀಲಂಕಾದ ಶ್ರೇಷ್ಠ ಸ್ಪಿನ್ನರ್ ಮುತ್ತಯ್ಯ ಮುರಳೀಧರನ್ ಅವರ ಹೆಸರಿನಲ್ಲಿದೆ. 133 ಟೆಸ್ಟ್ ಪಂದ್ಯಗಳಲ್ಲಿ 800 ವಿಕೆಟ್ ಪಡೆದಿದ್ದಾರೆ. ಇದಲ್ಲದೇ 145 ಟೆಸ್ಟ್ ಪಂದ್ಯಗಳಲ್ಲಿ 708 ವಿಕೆಟ್ ಪಡೆದಿರುವ ಆಸ್ಟ್ರೇಲಿಯಾದ ಶೇನ್ ವಾರ್ನ್ ಎರಡನೇ ಸ್ಥಾನದಲ್ಲಿದ್ದಾರೆ. ಮೂರನೇ ಸ್ಥಾನದಲ್ಲಿ ಭಾರತದ ಅನಿಲ್ ಕುಂಬ್ಳೆ ಇದ್ದಾರೆ. ಕುಂಬ್ಳೆ 132 ಟೆಸ್ಟ್ ಪಂದ್ಯಗಳಲ್ಲಿ 619 ವಿಕೆಟ್ ಪಡೆದಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

“ ಬದುಕಿನಲ್ಲಿ ನೆಲೆ ನಿಂತವರಿಗೆ ಪ್ರೀತಿ ಎನ್ನುವುದು ಒಂದೊಳ್ಳೆಯ ಬದುಕು ಕಟ್ಟಿಕೊಳ್ಳಲು ನಿರ್ಮಿಸಿಕೊಂಡ ಸೇತುವೆ. ಅಂಥವರು ಮುಂದೆ ಸುಖ ದಾಂಪತ್ಯದ ಕನಸು–ನನಸು ಮಾಡಿಕೊಳ್ಳುವ, ಆ ಮೂಲ ಬದುಕನ್ನು ಕಂಡುಕೊಳ್ಳುತ್ತಾರೆ. ಆದರೆ ಆಕರ್ಷಣೆಯನ್ನೇ ಪ್ರೀತಿ ಎಂದು ಪರಿಭಾವಿಸಿದವರು ಭವಿಷ್ಯದ ಬದುಕನ್ನು ಮರೆತು ಕಷ್ಟಗಳನ್ನು ತಂದೊಡ್ಡಿಕೊಳ್ಳುತ್ತಾರೆ. ಬಹುತೇಕ ಪ್ರೀತಿ, ಪ್ರೇಮದ ಪ್ರಸಂಗಗಳು ಸಿನಿಮಾದಲ್ಲಿ ನೋಡೋದಕ್ಕೆ ಚೆಂದವಾಗಿ ಕಾಣುತ್ತವೆ. ಮತ್ತು ಅದರಿಂದ ಪ್ರೇರೇಪಣೆಗೊಂಡು ತಾವು ಕೂಡ ಅದೇ ಹಾದಿಯನ್ನು ಅನುಕರಣೆ ಮಾಡುವವರು ಇದ್ದಾರೆ. ಇಲ್ಲಿ ಒಂದು ವಿಚಾರ ಅರ್ಥ ಮಾಡಿಕೊಳ್ಳಬೇಕು. ಸಿನಿಮಾ ಮತ್ತು ಬದುಕು ಬೇರೆ, ಬೇರೆಯೇ..

ಪ್ರೇಮ ಬೆಳಗಲಿ; ಬಾಡದಿರಲಿ



■ ಮಣಿಕಂಠ ತ್ರಿಶಂಕರ್, ಮೈಸೂರು




ವಾಲೆಂಟೈನ್ ಡೇ (ಪ್ರೇಮಿಗಳ ದಿನ) ಮತ್ತೆ ಬಂದಿದೆ. ಹದಿಹರೆಯದ ಹೃದಯಗಳಲ್ಲಿ ಪ್ರೇಮದ ಕಾರಂಜಿ ಚಿಮ್ಮತೊಡಗಿದೆ. ತಮ್ಮದೇ ಪರಿಧಿಯಲ್ಲಿ ಪ್ರೇಮ ಪೂಜೆಗೆ ಬಹುತೇಕರು ಅಣಿಯಾಗುತ್ತಿದ್ದರೆ, ಮತ್ತೆ ಕೆಲವರು ತಾವು ಇಷ್ಟಪಟ್ಟವರನ್ನು ಹೇಗೆ ಒಲಿಸಿಕೊಳ್ಳೋದು ಎಂಬ ಲೆಕ್ಕಾಚಾರದಲ್ಲಿದ್ದಾರೆ. ಹಾಗೆ ನೋಡಿದರೆ ಇತ್ತೀಚೆಗಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳು ಹೆಚ್ಚು ಜನಪ್ರಿಯವಾಗಿರುವ ಕಾರಣ ಪ್ರಪೋಸ್ ಮಾಡೋದಕ್ಕೆ ವ್ಯಾಲೆಂಟೈನ್ ಡೇಯನ್ನೇ ಕಾಯಬೇಕಾಗಿಲ್ಲ. ಪ್ರತಿ ದಿನವೂ ಅವರ ಪಾಲಿಗೆ ಪ್ರೇಮಿಗಳ ದಿನವಾಗಿ ಪರಿವರ್ತಿತಗೊಂಡಿದೆ. ಪ್ರವಾಸಿ ತಾಣಗಳು, ಪಾರ್ಕ್‌ಗಳಲ್ಲಿ ಎಲ್ಲ ದಿನಗಳಲ್ಲಿಯೂ ಜೋಡಿ ಜೋಡಿಯಾಗಿ ವಿಹರಿಸುವುದು ಸಾಮಾನ್ಯವಾಗಿಬಿಟ್ಟಿದೆ. ಯಾರು ನೋಡಲಿ, ಬಿಡಲಿ ತಮ್ಮದೇ ಲೋಕದಲ್ಲಿ ಅವರು ವಿಹರಿಸುತ್ತಿರುತ್ತಾರೆ. ದಶಕಗಳ ಹಿಂದೆಗೆ ಹೋಲಿಸಿದರೆ ಈಗ ಎಲ್ಲವೂ ಬದಲಾಗಿದೆ. ಮೊದಲಿನಂತೆ ಗ್ರೀಟಿಂಗ್ಸ್ ಕಾರ್ಡ್, ಗುಲಾಬಿ ಹೂ ನೀಡಿ ಪ್ರೇಮ ನಿವೇದನೆ ಮಾಡುವುದು ಮರೆತು ಹೋಗಿದೆ. ಈಗ ಏನಿದ್ದರೂ ವಾಟ್ಸಪ್, ಫೇಸ್ ಬುಕ್ ಮೂಲಕವೇ ಪ್ರೇಮ ಮೂಡುತ್ತದೆ. ಉಡುಗೊರೆಯಂತೂ ಸಾಲ ಮಾಡಿಯಾದರೂ ದುಬಾರಿಯದ್ದು ನೀಡಿ ಓಲೈಸಿಕೊಳ್ಳಬೇಕು ಎಂಬ ತುಂಟ ಛಲವಿದೆ. ಜತೆಗೆ ಬಹಳ ಬೇಗನೇ ಪ್ರೇಮಿಗಳಾಗುತ್ತಾರೆ. ಕದ್ದು ಮುಚ್ಚಿ ಒಬ್ಬರ ನೊಬ್ಬರು ಸೇರು ತ್ತಿದ್ದವರು ಇದೀಗ ನಿರ್ಭಯವಾಗಿ ಜತೆಯಲ್ಲೇ ಓಡಾಡುವಂತಾಗಿದೆ. ನಮ್ಮನ್ನು ಯಾರಾದರೂ ನೋಡಿ ಬಿಟ್ಟಾರು ಎಂಬ ಭಯವೆಲ್ಲವೂ ಈಗ ದೂರವಾಗಿದೆ. ಸಾರ್ವಜನಿಕ ಸ್ಥಳದಲ್ಲಿಯೇ ಜತೆ ಜತೆಯಾಗಿ ಕಾಣಿಸಿಕೊಳ್ಳುವ ಡೋಂಟ್ ಕೇರ್ ಮನೋಧರ್ಮ ಪ್ರೇಮಿಗಳದ್ದಾಗಿದೆ.

ಇಷ್ಟಕ್ಕೂ ಪಾಶ್ಚಿಮಾತ್ಯ ಸಂಸ್ಕೃತಿಯ ಅನುಕರಣೆಯ ಭರದಲ್ಲಿ ನಮ್ಮ ಯುವ ಜನಾಂಗ ಎಲ್ಲೋ ಒಂದು ಕಡೆ ದಾರಿ ತಪ್ಪುತ್ತಿದೆಯಾ ಎಂಬ ಆತಂಕವೂ ಕಾಡದಿರದು. ಏಕೆಂದರೆ ಓದುವ ವಯಸ್ಸಲ್ಲಿ ಅಪ್ರಾಪ್ತರೇ ಪ್ರೀತಿ ಪ್ರೇಮ ಅಂಥ ತಲೆಕೆಡಿಸಿಕೊಂಡು ಪಾರ್ಕ್ ಸಿನಿಮಾ ಅಂಥ ಸುತ್ತಾಡುತ್ತಿರುವುದು ಹೆತ್ತವರಲ್ಲಿ ಭಯವನ್ನು ಹುಟ್ಟು ಹಾಕುವಂತೆ ಮಾಡಿದೆ. ಅಷ್ಟೇ ಅಲ್ಲ ವಿದ್ಯಾರ್ಥಿ ಜೀವನವನ್ನೇ ಬಲಿ ತೆಗೆದುಕೊಳ್ಳತೊಡಗಿದೆ. ಸಾಮಾಜಿಕ ಜಾಲತಾಣಗಳು ಅಭಿವೃದ್ಧಿಯಾದ ಬಳಿಕ ಪ್ರೀತಿ, ಪ್ರೇಮಕ್ಕಿಂತ ಆಕರ್ಷಣೆ ಹೆಚ್ಚುತ್ತಿದೆ. ಹೊಸ ಪರಿಚಯ ತನ್ನತ್ತ ಆಕರ್ಷಿಸತೊಡಗಿದೆ. ಎಲ್ಲೋ ಒಂದು ಕಡೆ ಆರಂಭವಾಗುವ ಪರಿಚಯ ಕ್ರಮೇಣ ಪ್ರೀತಿ, ಪ್ರೇಮದ ಕಡೆಗೆ ತಿರುಗುತ್ತಿದೆ.

ಪೂರ್ವಾಪರ ಅರಿಯದ ಜೀವಗಳಲ್ಲಿ ಒಂದಾಗುವ ತವಕವನ್ನು ಹುಟ್ಟು ಹಾಕಿ, ಅದು ದಿಕ್ಕು–ದಿಸೆಯಿಲ್ಲದೆ ಸಾಗಿ ಹಲವು ಅನಾಹುತಗಳಿಗೆ ಎಡೆ ಮಾಡಿಕೊಡುತ್ತಿದೆ. ಶಾಲಾ, ಕಾಲೇಜಿಗೆ ತೆರಳುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪ್ರೀತಿ ಪ್ರೇಮಗಳ ಬಲೆಯಲ್ಲಿ ಬಿದ್ದು, ಓದಿನತ್ತ ಆಸಕ್ತಿ ಕಳೆದು ಕೊಂಡು ತಮ್ಮ ಭವಿಷ್ಯವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಮತ್ತೊಂದೆಡೆ ಪ್ರೀತಿ, ಪ್ರೇಮದ ಹೆಸರಿನಲ್ಲಿ ಮೋಸ ಮಾಡುವವರ ಸಂಖ್ಯೆಯೂ ಹೆಚ್ಚುತ್ತಿದೆ. ಜತೆಗೆ ಯುವ ಜನಾಂಗ ದುಂದುವೆಚ್ಚ ಮಾಡಲು ಹಣಕ್ಕಾಗಿ ಅಡ್ಡ ದಾರಿ ಹಿಡಿಯುತ್ತಿರುವ ಪ್ರಕರಣಗಳು ಹೆಚ್ಚು ಹೆಚ್ಚು ಬೆಳಕಿಗೆ ಬರತೊಡಗಿದೆ. ಇಷ್ಟಕ್ಕೂ ಇವತ್ತು ಹೆಚ್ಚಿನವರು ಆಕರ್ಷಣೆಯನ್ನೇ ಪ್ರೀತಿ ಎಂದು ನಂಬಿ ಬದುಕನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ.

ಬದುಕಿನಲ್ಲಿ ನೆಲೆ ನಿಂತವರಿಗೆ ಪ್ರೀತಿ ಎನ್ನುವುದು ಒಂದೊಳ್ಳೆಯ ಬದುಕು ಕಟ್ಟಿಕೊಳ್ಳಲು ನಿರ್ಮಿಸಿಕೊಂಡ ಸೇತುವೆ. ಅಂಥವರು ಮುಂದೆ ಸುಖ ದಾಂಪತ್ಯದ ಕನಸು–ನನಸು ಮಾಡಿಕೊಳ್ಳುವ, ಆ ಮೂಲ ಬದುಕನ್ನು ಕಂಡುಕೊಳ್ಳುತ್ತಾರೆ. ಆದರೆ ಆಕರ್ಷಣೆಯನ್ನೇ ಪ್ರೀತಿ ಎಂದು ಪರಿಭಾವಿಸಿದವರು ಭವಿಷ್ಯದ ಬದುಕನ್ನು ಮರೆತು ಕಷ್ಟಗಳನ್ನು ತಂದೊಡ್ಡಿಕೊಳ್ಳುತ್ತಾರೆ. ಬಹುತೇಕ ಪ್ರೀತಿ, ಪ್ರೇಮದ ಪ್ರಸಂಗಗಳು ಸಿನಿಮಾದಲ್ಲಿ ನೋಡೋದಕ್ಕೆ ಚೆಂದವಾಗಿ ಕಾಣುತ್ತವೆ. ಮತ್ತು ಅದರಿಂದ ಪ್ರೇರೇಪಣೆಗೊಂಡು ತಾವು ಕೂಡ ಅದೇ ಹಾದಿಯನ್ನು ಅನುಕರಣೆ ಮಾಡುವವರು ಇದ್ದಾರೆ. ಇಲ್ಲಿ ಒಂದು ವಿಚಾರ ಅರ್ಥ ಮಾಡಿಕೊಳ್ಳಬೇಕು. ಸಿನಿಮಾ ಮತ್ತು ಬದುಕು ಬೇರೆ, ಬೇರೆಯೇ.. ಬದುಕೋದಕ್ಕೊಂದು ದಾರಿ ಕಂಡುಕೊಂಡ ಬಳಿಕ ಪ್ರೀತಿ ಪ್ರೇಮದ ದಾರಿ ತುಳಿದರೆ ತಪ್ಪಾಗದು. ಅಲ್ಲಿಯೂ ಕೆಲಸ ಸಾಮಾಜಿಕ ಸಮಸ್ಯೆಗಳು ಎದುರಾಗಬಹುದು. ವಯಸ್ಸಲ್ಲದ ವಯಸ್ಸಿನಲ್ಲಿ, ವಿವೇಕವಿಲ್ಲದ ನಡೆಯಲ್ಲಿ ಪ್ರೇಮದ ಹೊಳೆಯಲ್ಲಿ ಈಜಾಡಲು ಹೋದರೆ ಅಪಾಯ ತಪ್ಪಿದಲ್ಲ. ಇತ್ತೀಚೆಗಿನ ದಿನಗಳಲ್ಲಿ ಪ್ರೀತಿಸಿ ವಂಚಿಸುವ ಪ್ರಕರಣಗಳು ಹೆಚ್ಚುತ್ತಿವೆ. ಧೈರ್ಯ ಕಳೆದುಕೊಂಡ ಹಲವರು ಆತ್ಮಹತ್ಯೆಗೂ ಶರಣಾಗುತ್ತಿರುವ ಪ್ರಕರಣಗಳು ನಿತ್ಯವೂ ಸಂಭವಿಸುತ್ತಿರುವುದು ನಮ್ಮ ಕಣ್ಣ ಮುಂದಿದೆ. ಮೊದಲು ಮದುವೆಯಾಗಲು ಪ್ರೀತಿಸುತ್ತಿದ್ದರು. ಈಗ ಮದುವೆಯ ಬಯಕೆಯಿಲ್ಲದೆ ಪ್ರೀತಿಸುತ್ತಾರೆ. ಬಳಿಕ ಮದುವೆಯಾಗುತ್ತೇನೆ ಎಂಬ ಆಮಿಷವೊಡ್ಡಿ ದೈಹಿಕವಾಗಿ ಸಂಬಂಧ ಹೊಂದಿ ಕೊನೆಗೆ ವಂಚಿಸುತ್ತಾರೆ. ಇಲ್ಲಿ ಯಾರು ಯಾರಿಗೆ ವಂಚಿಸುತ್ತಾರೆ ಎಂಬುದು ಮುಖ್ಯವಲ್ಲ. ಆದರೂ ವಂಚನೆಗೊಳಗಾಗುತ್ತಿರುವವರು ಹೆಣ್ಣುಮಕ್ಕಳೇ ಅಧಿಕ ಎಂಬುದನ್ನು ತಳ್ಳಿಹಾಕುವಂತಿಲ್ಲ. ನಮ್ಮ ದೇಶದಲ್ಲಿ ಪ್ರೀತಿ, ಪ್ರೇಮಕ್ಕೆ ಪವಿತ್ರ ಸ್ಥಾನ ನೀಡಲಾಗಿದೆ. ಇಂತಹ ಪ್ರೇಮವನ್ನು ಅಪವಿತ್ರಗೊಳಿಸುವ ಮುನ್ನ ಒಂದು ಕ್ಷಣ ಯೋಚಿಸಿ ಪ್ರೀತಿ ಹೆಸರಿನಲ್ಲಿ ವಂಚಿಸುವ ಇರಾದೆ ನಿಮ್ಮಲ್ಲಿದ್ದರೆ ದಯವಿಟ್ಟು ಬಿಟ್ಟು ಬಿಡಿ. ಎಂದಿಗೂ ವಂಚಕ ಪ್ರೇಮಿ ಯಾಗದಿರಿ. ನಿಮ್ಮ ಪವಿತ್ರವಾದ ಪ್ರೇಮ ದಾಂಪತ್ಯ ಸಾಗರದತ್ತ ಸಾಗುವ ಹಡಗಾಗಲಿ.



ವಾರಭವಿಷ್ಯ



12.02.2023 ರಿಂದ 18.02.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಮಕರ, ಕುಂಭ, ಚಂದ್ರ–ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಜ–ವೃಷಭ, ಬುಧ–ಮಕರ, ಗುರು–ಮೀನ, ಶುಕ್ರ–ಕುಂಭ, ಮೀನ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಆದಿಗೆ ಹೆಚ್ಚು ಹಣ ಕೈ ಸೇರಿದರೂ, ಅದಕ್ಕೂ ಮೀರಿದ ಖರ್ಚುಗಳು ಒದಗಿ ಬರುವುದು. ಕುಟುಂಬ ಸದಸ್ಯರಲ್ಲಿ ಸಾಮರಸ್ಯದ ಕೊರತೆಯಿಂದಾಗಿ ಮನಃಶಾಂತಿಗಾಗಿ ಪರದಾಡುವಿರಿ. ಹಿರಿಯರ ಮಧ್ಯಸ್ಥಿಕೆಯ ಅಗತ್ಯವಿದೆ. ಲಾಭ ಭಾವಕ್ಕೆ ಪಲ್ಲಟವಾಗಿರುವ ಶನಿದೇವನಿಂದ ಕೋರ್ಟು ವ್ಯಾಜ್ಯಗಳು ನಿಮ್ಮ ಪರ ಬರುವ ಸಾಧ್ಯತೆ ಇದೆ. ದುಷ್ಟ ಜನರ ಸಹವಾಸ ಸಂಪರ್ಕಗಳು ನಿಮಗೆ ಮುಳುವಾಗಲಿದೆ. ಆರೋಗ್ಯ ಕಾಪಾಡಿಕೊಳ್ಳಿ. ಶ್ರೀ ಗಣಪತಿ ಉಪಾಸನೆ. ಶುಭ ಸಂಖ್ಯೆ–1.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಸರ್ಕಾರಿ ನೌಕರರಿಗೆ ವರ್ಗಾವಣೆ ಸಹಿತ ಹೆಚ್ಚಿನ ಜವಾಬ್ದಾರಿಯುತ ಸ್ಥಾನ ದೊರೆಯುವುದು. ಮಹಿಳಾ ಮಣಿಯರು ಪ್ರಸಾಧನ ವಸ್ತು ಖರೀದಿಗೆ ಹೆಚ್ಚಿನ ಹಣ ವ್ಯಯಿಸುವರು. ರಾಜಕೀಯದವರು ವಿರೋಧಿಗಳ ಒಳಸಂಚಿಗೆ ಗುರಿಯಾಗುವರು. ಆರೋಗ್ಯದಲ್ಲಿ ಏರು–ಪೇರು ಉಂಟಾಗುವುದರಿಂದ ವೈದ್ಯರ ಭೇಟಿ ಅನಿವಾರ್ಯವಾಗುವುದು. ಕೇತು–ರಾಹು ಅಶುಭರಿದ್ದು ನೀಚ ಜನರ ಸಂಪರ್ಕಕ್ಕೆ ದುಬಾರಿ ಬೆಲೆಯನ್ನು ತೆರಬೇಕಾದಿತು. ಶ್ರೀ ಸಪ್ತಮಾತೃಕಾ ದರ್ಶನ. ಶುಭ ಸಂಖ್ಯೆ–7.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದಾರಂಭಕ್ಕೆ ನಿರೀಕ್ಷಿತ ಹಣ ಕೈಗೆ ಬರುವುದು. ಆಪ್ತ ವಲಯದ ಮಿತ್ರರ ಮಿಲನದಿಂದ ಮನಃ ಸಂತೋಷ. ಗುರು ಕೃಪೆಯಿಂದ ಕೈಗೊಂಡಿದ್ದ ಮಹತ್ವದ ಕೆಲಸ ಕಾರ್ಯಗಳು ಮರು ಚಾಲನೆ ಪಡೆಯಲಿದೆ. ಸತಿ–ಪತಿಯರಲ್ಲಿ ಉಂಟಾಗಿದ್ದ ವಿರಸಗಳು ನಿವಾರಣೆಯಾಗುವುದು. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸಗಳು ಉಂಟಾಗುವುದು. ಆಸ್ತಿ ವಿಭಾಗ ವಿಷಯದಲ್ಲಿ ಸಹೋದರರಲ್ಲಿ ಭಿನ್ನಾಭಿಪ್ರಾಯಗಳಿಂದ ಸಮಸ್ಯೆ ಜಟಿಲವಾಗುವುದು. ಶ್ರೀದೇವೀ ಖಡ್ಗಮಾಲಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–2.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ)

ಮನಸ್ಸು ಬಯಕೆಗಳ ಆಗರ, ಬಯಸಿದ್ದು ದೊರೆಯಲು ಸ್ವಪ್ರಯತ್ನವಲ್ಲದೆ, ದೈವ ಸಹಾಯವೂ ಬೇಕು. 'ಸಮಯಕ್ಕೆ ಆದವನೇ ನೆಂಟ' ಎಂಬಂತೆ ಅಪರಿಚಿತರಿಂದ ಸಹಾಯ ಒದಗಿಬರುವುದು. ಕೆಲವು ಗ್ರಹ ಸಂಜೋಗಗಳು ಶುಭಪ್ರದವಿದ್ದು ಉತ್ತಮ ಫಲವನ್ನೇ ನೀಡಲಿದೆ. ಸುಖ ಭೋಜನ, ದೇಹ ಸೌಖ್ಯ, ಶಯನಾದಿ ಸುಖಗಳನ್ನು ಅನುಭವಿಸುವಿರಿ. ವಾರಾಂತ್ಯಕ್ಕೆ ಧರ್ಮಗುರುಗಳ ಆಶೀರ್ವಾದ ದೊರೆಯುವುದು. ಶ್ರೀ ಗಣೇಶ ಪ್ರಾರ್ಥನೆ. ಶುಭ ಸಂಖ್ಯೆ–6.



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದ ಆರಂಭಕ್ಕೆ ಸಜ್ಜನರ ಅನಾದರಕ್ಕೆ ಗುರಿಯಾಗುವಿರಿ. ಗುರುವಿಲ್ಲದ ಕಾರಣ ವ್ಯಾಪಾರ, ವ್ಯವಹಾರಗಳು ಕುಂಟುತ್ತಾ ಸಾಗುತ್ತದೆ. ಮನೆಯಲ್ಲಿಯೂ, ನೆರೆಹೊರೆಯಲ್ಲಿಯೂ ಸಾಮರಸ್ಯದ ಕೊರತೆ ಕಾಣ ಬರುತ್ತದೆ. ಯಾವುದೇ ಹೊಸ ಒಡಂಬಡಿಕೆಗಳಿಗೆ ಸಹಿ ಹಾಕುವ ಮುನ್ನ ವಕೀಲರ ಸಲಹೆ ಪಡೆಯುವುದು ಅವಶ್ಯಕ. ವಾರಾಂತ್ಯಕ್ಕೆ ಹೋಟೆಲ್, ಕೇಟರಿಂಗ್ ಉದ್ಯಮದವರಿಗೆ ಹೇರಳ ಧನಲಾಭ. ಸಮೂಹ ಮಾಧ್ಯಮದವರಿಗೆ ಪ್ರಶಂಸೆ. ಶ್ರೀರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–8.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಭಾಗ್ಯವಿದ್ದಂತೆ ಫಲ, ವಿದ್ಯೆ, ಪೌರುಷ ಯಾವುದೂ ಪ್ರಯೋಜನಕ್ಕೆ ಬರದು. ವಾರದ ಆದಿಗೆ ಶುಭ ಚಂದ್ರನಿಂದ ನಿಮ್ಮ ಜೀವನದಲ್ಲಿ ಹರುಷದ ನಕ್ಷತ್ರ ಮಿನುಗಲಿದೆ. ಪ್ರೀತಿ–ಪ್ರಣಯ ವಿಷಯಗಳು ಮಧುರ ಅನುಭವವನ್ನು ನೀಡಲಿದೆ. ನಿಮಗಾಗದವರು ಮಿತ್ರತ್ವ ಬಯಸಿ ಬಂದರೆ ನಿರಾಕರಿಸದಿರಿ. ಸರ್ಕಾರಿ ಕೆಲಸಗಳು ನಿರೀಕ್ಷೆಯಂತೆ ಸಾಗದೆ ಮನಸ್ಸಿಗೆ ಬೇಸರವೆನಿಸುವುದು. ದಿನ ಚರ್ಯೆಯಲ್ಲಿ 'ಮೆಡಿಟೇಷನ್' ಅಳವಡಿಸಿಕೊಳ್ಳಿ. ಶ್ರೀದಕ್ಷಿಣಾಮೂರ್ತಿ ಸ್ತೋತ್ರ ಜಪಿಸಿ. ಶುಭ ಸಂಖ್ಯೆ–3.



ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)

ಭಾಗ್ಯಸ್ಥಾನದಲ್ಲಿ ಗುರು ಸಂಚಾರವಿದೆ. ಗುರುಜನರ ಮಾರ್ಗದರ್ಶನದಿಂದ ಯತ್ನ ಕಾರ್ಯಗಳಲ್ಲಿ ಜಯವನ್ನು ಸಾಧಿಸುವಿರಿ. ನಿಮ್ಮ ಕಾರ್ಯ ಕ್ಷೇತ್ರದಲ್ಲಿ ಯಶಸ್ಸನ್ನೂ, ಲಾಭವನ್ನೂ ಹೊಂದುವಿರಿ. ಉನ್ನತ ಶಿಕ್ಷಣಾರ್ಥಿಗಳಿಗೆ ಪ್ರಶಸ್ತಿಗಳು ಲಭಿಸುವುದು. ಗಣ್ಯ ವ್ಯಕ್ತಿಗಳ ಭೇಟಿ ಮುಂದಿನ ಭವಿಷ್ಯ ಉಜ್ವಲವಾಗಲು ಹೇತುವಾಗುವುದು. ವಿವಾಹಾಕಾಂಕ್ಷಿಗಳಿಗೆ ಶುಭ ಸಮಾಚಾರ ಬರುವ ಸಾಧ್ಯತೆ ಇದೆ. ವಾರಾಂತ್ಯಕ್ಕೆ ಪುಣ್ಯ ಕ್ಷೇತ್ರಕ್ಕೆ ಟೂರ್ ಪ್ರೋಗ್ರಾಂ. ಶ್ರೀ ತ್ರಿಪುರ ಸುಂದರೀ ದರ್ಶನ. ಶುಭ ಸಂಖ್ಯೆ–5.



ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)

'ಕರ್ಮಕ್ಕೆ ತಕ್ಕಂತೆ ಕರ್ಮ ಫಲ', ವಾರದಾರಂಭಕ್ಕೆ ಹಲವು ಮೂಲಗಳಿಂದ ಧನ ಸಂಚಯವಾಗುವುದು. ಪಶು–ಗೋವು ಕ್ರಯ–ವಿಕ್ರಯದಿಂದ ಧನಲಾಭವೂ ಉಂಟು. ರಾಜಕಾರಣಿಗಳಿಗೆ ಜನ ವಿರೋಧ ಹಾಗೂ ಕಾನೂನು ತೊಡಕುಗಳು ಉಂಟಾಗುವುದು. ನ್ಯಾಯಾಲಯ ವಿಚಾರಗಳು ನಿಮ್ಮ ಪರವಿರದು. ಡ್ರೈವಿಂಗ್‌ನಲ್ಲಿ ಅತಿ–ಆತುರ ಮುಳುವಾಗುವುದು. ತಪ್ಪು ಅರಿವಾಗುವುದರಲ್ಲಿ ಕಾಲ ಮಿಂಚಿರುತ್ತದೆ. ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–4.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಯಾವುದೇ ನಿರ್ಧಾರಕ್ಕೂ ಮುನ್ನ ನಿಧಾನಿಸಿ. ಮಿತ್ರ ಜನರ ಸಂಪರ್ಕದಿಂದ ಹರ್ಷ. ಕ್ಷೀರೋತ್ಪನ್ನ ವಸ್ತು ವ್ಯಾಪಾರಿಗಳಿಗೆ ಹೇರಳ ಧನಲಾಭ. ನಿಮ್ಮ ಸುತ್ತಲೂ ಅಸೂಯಾಪರರು ಇದ್ದಾರೆ. ನಿಮ್ಮ ಪ್ರಯತ್ನಗಳು ಆರಂಭದಲ್ಲಿ ಕಷ್ಟವೆನಿಸಿದರೂ ಗುರಿಯನ್ನು ಮುಟ್ಟುವಿರಿ. ಗಣ್ಯ ವ್ಯಕ್ತಿಗಳ ಭೇಟಿಯಿಂದ ಕಾರ್ಯ ಹಗುರವಾಗುವುದು. ವಾಹನ ಕ್ರಯ–ವಿಕ್ರಯದಲ್ಲಿ ನಷ್ಟವನ್ನು ಅನುಭವಿಸಬೇಕಾದೀತು. ಶ್ರೀ ಸೂರ್ಯ –ಗಾಯತ್ರಿ ಜಪಿಸಿ. ಶುಭ ಸಂಖ್ಯೆ–9.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದಾರಂಭಕ್ಕೆ ಹಲವು ಮೂಲಗಳಿಂದ ಧನ ಸಂಚಯವಾಗುವುದು. ಸಾಡೇಸಾತಿ ಪ್ರಭಾವವಿದ್ದಾಗ್ಯೂ ಸ್ನೇಹಕೂಟ, ಸಂತೋಷ ಸಮಯ ಘಟಿಸುವುದು. ರಾಜಕಾರಣಿಗಳ ಸಣ್ಣ ಪುಟ್ಟ ಚುನಾವಣೆಯಲ್ಲಿ ಜಯವನ್ನು ಸಾಧಿಸುವರು. ಗುರುಬಲವಿದೆ. ವಿವಾಹ ಬಂಧನವನ್ನು ತಳ್ಳಿ ಹಾಕಲಾಗದು. ವಾರಾಂತ್ಯಕ್ಕೆ ಸತ್ಕರ್ಮಾಚರಣೆಯಿಂದ ಧನ್ಯತಾಭಾವ. ಅತೀ ವೇಗದ ವಾಹನ ಚಾಲನೆ ಅಪಾಯಕ್ಕೆ ಆಹ್ವಾನ. ಶ್ರೀ ಗುರುನಮನ. ಶುಭ ಸಂಖ್ಯೆ–6.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಸಪ್ತಾಹದ ಆದಿಗೆ ಗುರು–ಹಿರಿಯರ ಸಹಾಯ ದೊರೆತು ಅಭಿವೃದ್ಧಿಯ ಪಥದಲ್ಲಿ ಸಾಗುವಿರಿ. ವಿದ್ಯಾರ್ಥಿಗಳು ಶಿಕ್ಷಣ ಕ್ಷೇತ್ರದಲ್ಲಿ ಸಫಲತೆಯನ್ನು ಸಾಧಿಸುವರು. ಈ ನಡುವೆ ದುಂದು ವೆಚ್ಚಗಳಿಂದ ಪರ್ಸ್ ಖಾಲಿ. ಮಾನಸಿಕ ಅಸ್ಥಿರತೆ ನಿವಾರಣೆ ಆಗುವುದು. ನ್ಯಾಯಾಲಯ ವಿಚಾರಗಳು ನಿಮಗೆ ಅನುಕೂಲವೆನಿಸಲಿದೆ. ಕೃಷಿಕರಿಗೆ, ಕೃಷಿ ಉಪಕರಣ ಮಾರಾಟಗಾರರಿಗೆ ಉತ್ತಮ ಧನಲಾಭವಾಗುವುದು. ಶ್ರೀ ಶ್ರೀನಿವಾಸ ದರ್ಶನ. ಶುಭ ಸಂಖ್ಯೆ–1.



ಮೀನ (ದಿ.ದು.ಖ.ಝ.ಥ.ದೆ.ದೊ.ಚ.ಚಿ)

ಶನಿದೇವನ ಸ್ಥಾನ ಪಲ್ಲಟವಾದ ಮೇಲೆ ನಿಮ್ಮ ತೊಳಲಾಟಗಳು ಹೆಚ್ಚಾಗಿದೆ. ಕೈಗೆ ಬಂದ ಹಣ ಹೆಚ್ಚು ಕಾಲ ನಿಲ್ಲದು. ನಿಮ್ಮ ಕೆಟ್ಟ ಅಭ್ಯಾಸಗಳು ಜೀವನ ಸುಖ–ಶಾಂತಿಗಳಿಗೆ ಮುಳುವಾಗುವುದು. ವಾರ ಮಧ್ಯಾನಂತರ ಆಪ್ತೇಷ್ಟರ ಮಿಲನ, ಶ್ರೀಮತಿಯೊಂದಿಗೆ ಒಮ್ಮತ ಮೂಡಿ ಮಾನಸಿಕ ಕಿರಿಕಿರಿ ನಿವಾರಣೆ. ನೆರೆಹೊರೆಯಲ್ಲಿ ಸೌಹಾರ್ದಯುತವಾಗಿ ಇರಲು ಪ್ರಯತ್ನಿಸಿ. ಗುರು ಬಲದ ಕೊರತೆ ಇರುವ ಕಾರಣ ಎಲ್ಲವನ್ನೂ ಸಾತ್ವಿಕವಾಗಿ ಸ್ವೀಕರಿಸಿ. ಶ್ರೀ ಪಂಚಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–3.

ಮಕ್ಕಳ ಚಿತ್ರಕಥೆ

'ದುಷ್ಟ ಬೇಡಿದ ವರ...!'

–ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ನೀತಿ: 'ದುಷ್ಟರು ಯಾವಾಗಲೂ ದುಷ್ಟರೇ....ಅವರ ಸ್ನೇಹವೂ ಅಪಾಯವೇ....!'

ಕೊಡವ ಕೌಟುಂಬಿಕ ಹಾಕಿ ಉತ್ಸವಕ್ಕೆ ಕೋಟಿ ರೂ. ಬಿಡುಗಡೆ

ಅಪ್ಪ ಚೆಟ್ಟೋಳಂಡ ಕೌಟುಂಬಿಕ ಹಾಕಿ ಉತ್ಸವದ ಕೈಪಿಡಿ ಬಿಡುಗಡೆ



ನಾಪೋಕ್ಲು, ಫೆ.11– ಕೌಟುಂಬಿಕ ಹಾಕಿ ಉತ್ಸವಕ್ಕೆ ಸರ್ಕಾರ ಒಂದು ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದು, ಅದನ್ನು ಸದುಪಯೋಗಪಡಿಸಿಕೊಳ್ಳಿ ಎಂದು ಶಾಸಕ ಕೆ.ಜಿ. ಬೋಪಯ್ಯ ತಿಳಿಸಿದ್ದಾರೆ.

ನಾಪೋಕ್ಲುವಿನ ಕೊಡವ ಸಮಾಜದ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಅಪ್ಪ ಚೆಟ್ಟೋಳಂಡ ಕೌಟುಂಬಿಕ ಹಾಕಿ ಉತ್ಸವದ ಮಾಹಿತಿ ಕೈಪಿಡಿ (ಬ್ರೋಷರ್) ಬಿಡುಗಡೆ ಸಮಾರಂಭವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

1997ರಲ್ಲಿ ಕೊಡಗಿನಲ್ಲಿ ಹಾಕಿ ಉತ್ಸವ ಆರಂಭವಾಗಿದ್ದು, ವಿವಿಧ ಕುಟುಂಬಗಳು ಹಾಕಿ ಉತ್ಸವವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿವೆ. ಈ ಹಿಂದಿನ ಕೊಡವ ಹಾಕಿ ಉತ್ಸವಕ್ಕಾಗಿ ಸರ್ಕಾರ 50 ಲಕ್ಷ ರೂ. ಬಿಡುಗಡೆ ಮಾಡಿತ್ತು. ಇದೀಗ ಸರ್ಕಾರವು ಒಂದು ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ. ಗ್ರಾಮೀಣ ಪ್ರದೇಶಗಳಲ್ಲಿ ವಿವಿಧ ಜನಾಂಗದವರು ಕ್ರೀಡಾಕೂಟಗಳನ್ನು ನಡೆಸುತ್ತಿದ್ದು ಪ್ರತಿಭೆಗಳಿಂದ ಸಮಾಜದ ಒಗ್ಗೂಡುವಿಕೆ ಸಾಧ್ಯವಾಗಿದೆ. ಹಾಕಿ ಉತ್ಸವಕ್ಕೆ ಶಾಶ್ವತ ಅನುದಾನ ಸಿಗುವಂತಾಗಬೇಕು ಎಂದರು.

ಹಾಕಿ ಕರ್ನಾಟಕದ ಕಾರ್ಯದರ್ಶಿ, ಮಾಜಿ ಒಲಂಪಿಯನ್ ಡಾ.ಎ.ಬಿ. ಸುಬ್ಬಯ್ಯ ಮಾತನಾಡಿ ವಿವಿಧರೀತಿಯ ಟೂರ್ನಿಗಳನ್ನು ನಡೆಸುವುದರಿಂದ ಜಿಲ್ಲೆಯ ಮಕ್ಕಳಿಗೆ ಹಾಗೂ ಯುವ ಜನರಿಗೆ ಉತ್ತಮ ಪ್ರೋತ್ಸಾಹ ಸಿಗುವಂತಾಗಿದೆ. ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳುವುದರಿಂದ ಕ್ರೀಡಾಪಟುಗಳು ಸಮಾಜದ ಉತ್ತಮ ಪ್ರಜೆಯಾಗಲು ಸಾಧ್ಯ. ಕೌಟುಂಬಿಕ ಹಾಕಿ ಉತ್ಸವಗಳಿಂದ ಸ್ಥಳೀಯ ಮಕ್ಕಳಿಗೆ ಅವಕಾಶ ದೊರೆತಂತಾಗುತ್ತದೆ. ನುರಿತ ರಾಷ್ಟ್ರೀಯ ಮಟ್ಟದ ಆಟಗಾರರು ಕೊಡಗಿನಲ್ಲಿ ಹಾಕಿ ಆಡುವುದರಿಂದ ಯುವ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದರು.

ಹಾಕಿ ಉತ್ಸವ ಆಯೋಜನ ಸಮಿತಿ ಅಧ್ಯಕ್ಷ ಅಪ್ಪ ಚೆಟ್ಟೋಳಂಡ ಮನು ಮುತ್ತಪ್ಪ ಮಾತನಾಡಿ, ಕೊಡವ ಕೌಟುಂಬಿಕ ಹಾಕಿ ಉತ್ಸವ ಈಗಾಗಲೇ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಸ್ಥಾನ ಪಡೆದಿದ್ದು, ಗಿನ್ನೆಸ್ ದಾಖಲೆಗಾಗಿ ವಿಶೇಷ ಪ್ರಯತ್ನ ಮಾಡಲಾಗುತ್ತಿದೆ ಹಾಕಿ ಉತ್ಸವದಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ ಕೊಡಗಿನ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಆಟಗಾರರನ್ನು ಹಾಕಿ ಹಾಗೂ ಇತರ ಕ್ರೀಡೆಗಳಲ್ಲಿ ಸಾಧನೆ ಮಾಡಿದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಆಟಗಾರರನ್ನು ಗೌರವಿಸಲಾಗುವುದು ಎಂದರು

ಹಾಕಿ ಉತ್ಸವವು ಮಾರ್ಚ್ 17 ರಿಂದ ಆರಂಭಗೊಂಡು ಏಪ್ರಿಲ್ 10 ರವರೆಗೆ 23 ದಿನಗಳ ಕಾಲ ನಡೆಯಲಿದೆ. ಪ್ರತಿದಿನ 24 ಪಂದ್ಯಗಳು ಮೂರು ಮೈದಾನಗಳಲ್ಲಿ ನಡೆಯಲಿದೆ 2018 ರಲ್ಲಿ 230 ತಂಡಗಳು ಪಾಲ್ಗೊಂಡಿದ್ದು ಈ ಬಾರಿ 350 ತಂಡಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದರು

ಕಾರ್ಯಕ್ರಮದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ರಾಣಿ ಮಾಚಯ್ಯ ಹಾಗೂ ಲಾಂಛನವನ್ನು ರಚಿಸಿದ ಸುಳ್ಳಿಮಾಡ ದರ್ಶನ್ ಪೂವಪ್ಪ ಅವರನ್ನು ಸನ್ಮಾನಿಸಲಾಯಿತು. ಒಲಂಪಿಯನ್ ಡಾ. ಎ.ಬಿ. ಸುಬ್ಬಯ್ಯ ಹಾಗೂ ಒಲಂಪಿಯನ್ ಬಾಳೆಯಡ ಕೆ. ಸುಬ್ಬಯ್ಯ ಮಾಹಿತಿ ಕೈಪಿಡಿ (ಬ್ರೋಷರ್) ಬಿಡುಗಡೆ ಮಾಡಿ ಶುಭ ಹಾರೈಸಿದರು.

ಅಪ್ಪ ಚೆಟ್ಟೋಳಂಡ ಕುಟುಂಬದ ಪಟ್ಟೆದಾರ ಮಿಟ್ಟು ಈರಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಕೊಡವ ಹಾಕಿ ಕೂರ್ಗ್ ಅಸೋಸಿಯೇಷನ್ ಅಧ್ಯಕ್ಷ ಮೇಕೇರಿರ ರವಿ ಪೆಮ್ಮಯ್ಯ,ಉಪಾಧ್ಯಕ್ಷ ಬಡಕಡ ಧೀನ ಪೂವಯ್ಯ, ನಿರ್ದೇಶಕ ಮಾಳೇಟಿರ ಶ್ರೀನಿವಾಸ್, ಕೊಡವಹಾಕಿ ಅಸೋಸಿಯೇಷನ್‌ನ ಪಳಂಗಂಡ ಲವ, ರಾಜಾ ಭೀಮಯ್ಯ, 2024 ಮುಂದಿನ ಹಾಕಿ ಉತ್ಸವದ ಆಯೋಜನ ಸಮಿತಿ ಅಧ್ಯಕ್ಷ ಕುಂಡ್ಯೋಳಂಡ ರಮೇಶ್ ಮುದ್ದಯ್ಯ, ಉಪಸ್ಥಿತರಿದ್ದರು. ಕಲಿಯಂಡ ಬೀನಾ ನವೀನ್ ಪ್ರಾರ್ಥಿಸಿದರು. ಬಾಳೆಯಡ ದಿವ್ಯ ಮಂದಪ್ಪ ನಿರೂಪಿಸಿ ಕ್ರೀಡಾಕೂಟ ಕಾರ್ಯದರ್ಶಿ ಅಪ್ಪಚೆಟ್ಟೋಳಂಡ ಮಿಥುನ್ ಮಾಚಯ್ಯ ವಂದಿಸಿದರು.

ಕೊಡವರ ಮಾತೃಭಾಷೆ ಕೊಡವ ತಕ್‌ಗೆ ಸಂವಿಧಾನದ ಭದ್ರತೆ ಬೇಕು

ಫೆ.21, ಕೊಡವ ನ್ಯಾಷನಲ್ ಕೌನ್ಸಿಲ್‌ನಿಂದ ಸತ್ಯಾಗ್ರಹ



ಮಡಿಕೇರಿ,ಫೆ.11– ಸಂವಿಧಾನದ 8ನೇ ಶೆಡ್ಯೂಲ್‌ಗೆ ಕೊಡವ ತಕ್ (ಕೊಡವ ಭಾಷೆ) ಅನ್ನು ಸೇರಿಸಬೇಕೆಂದು ಒತ್ತಾಯಿಸಿ ಅಂತಾರಾಷ್ಟ್ರೀಯ ಮಾತೃಭಾಷಾ ದಿನವಾದ ಫೆ.21ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ಸತ್ಯಾಗ್ರಹ ನಡೆಯಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಅಂದು ಬೆಳಗ್ಗೆ 10.30 ಗಂಟೆಯಿಂದ 11.30ರವರೆಗೆ ಸತ್ಯಾಗ್ರಹ ನಡೆಯಲಿದ್ದು, ಅತ್ಯಂತ ಸೂಕ್ಷ್ಮ ಜನಾಂಗವಾಗಿರುವ ಕೊಡವರ ಮಾತೃಭಾಷೆ ಕೊಡವ ತಕ್‌ಗೆ ಸಂವಿಧಾನದ ಭದ್ರತೆ ನೀಡಬೇಕೆಂದು ಒತ್ತಾಯಿಸಿ ಸರ್ಕಾರದ ಗಮನ ಸೆಳೆಯಲಾಗುವುದೆಂದು ತಿಳಿಸಿದ್ದಾರೆ. ಕೊಡವ ಭಾಷೆಯನ್ನು ಅಧಿಕೃತವೆಂದು ಘೋಷಿಸಿ ಕೊಂಕಣಿ ಭಾಷೆಯ ಮಾದರಿಯಲ್ಲಿ ರಾಜ್ಯದ 3ನೇ ಆಡಳಿತ ಭಾಷೆಯನ್ನಾಗಿ ಮಾಡಬೇಕು. ಸಂವಿಧಾನದ 345, 350, 350 ಎ, 350 ಬಿ ವಿಧಿಯಡಿ 1ನೇ ತರಗತಿಯಿಂದಲೇ ಪಠ್ಯಕ್ರಮದಲ್ಲಿ ಕೊಡವ ತಕ್ ಅನ್ನು ಕಡ್ಡಾಯಗೊಳಿಸಬೇಕು.

ವಿಶ್ವಸಂಸ್ಥೆಯ ಅಧಿಕೃತ ಭಾಷೆ ಎಂದು ಘೋಷಿಸಬೇಕು, ಪ್ರಾಚೀನ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಕೊಡವ ತಕ್ ಅಧ್ಯಯನ ಪೀಠ ಸ್ಥಾಪಿಸಬೇಕು. ರಾಜ್‌ಗೀರ್‌ನ ನಳಂದಾ, ಟೋಕಿಯೊದ ಯುಎನ್ ವಿಶ್ವವಿದ್ಯಾಲಯ, ಅಮರಕಂಟಕ್‌ನ ಇಂದಿರಾ ಗಾಂಧಿ ಬುಡಕಟ್ಟು ವಿಶ್ವವಿದ್ಯಾಲಯ, ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯ ಮತ್ತು ತಿರುವನಂತಪುರಂ ದ್ರಾವಿಡ ಭಾಷಾ ಸಂಶೋಧನಾ ಸಂಸ್ಥೆಯಲ್ಲಿ ಕೊಡವ ಭಾಷಾ ಅಧ್ಯಯನ ಕೇಂದ್ರ ಹಾಗೂ ಮಡಿಕೇರಿಯಲ್ಲಿ ವಿಶ್ವ ಕೊಡವಾಲಜಿ ಅಧ್ಯಯನ ಕೇಂದ್ರ ಸ್ಥಾಪಿಸಬೇಕು.

ಕೊಡವ ತಕ್ ಅನ್ನು ಯುಎನ್‌ಒ ಅಧಿಕೃತ ಭಾಷೆಗಳಲ್ಲಿ ಒಂದನ್ನಾಗಿ ಮಾಡಬೇಕು. ಭವ್ಯ ಸಂಸ್ಕೃತಿಯ ಕೊಡವ ಜಾನಪದ ಪರಂಪರೆಯನ್ನು ವಿಶ್ವಸಂಸ್ಥೆಯ ಯುನೆಸ್ಕೊ ಅಮೂರ್ತ ಸಾಂಸ್ಕೃತಿಕ ಪಟ್ಟಿಯಲ್ಲಿ ಸೇರಿಸಬೇಕು, ಕೊಡವ ಭಾಷಾ ಬುಡಕಟ್ಟು ಜನಾಂಗದ ಗನ್ ಸಂಸ್ಕೃತಿ ಅಂದರೆ ಕೊಡವ ಜನಾಂಗೀಯ ಸಂಸ್ಕಾರವನ್ನು ಸಿಖ್ಖರ ಕಿರ್ಪಾನ್‌ಗೆ ಸಮಾನವಾಗಿ ನಮ್ಮ ಸಂವಿಧಾನದ 25 ಮತ್ತು 26ನೇ ವಿಧಿಯಡಿ ರಕ್ಷಿಸಬೇಕು.

ಕೊಡವ ಭಾಷಾ ಜನಾಂಗದ ಸಮಗ್ರ ಸಬಲೀಕರಣಕ್ಕಾಗಿ ಜಲ, ನೆಲ, ಭಾಷೆ, ಸಾಂಸ್ಕೃತಿಕ ಪರಂಪರೆ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯ ನೀಡುವ ಕೊಡವ ಸಾಂಪ್ರದಾಯಿಕ ಮತ್ತು ಅವಿಭಾಜ್ಯ ತಾಯಿನಾಡು ಕೊಡವಲ್ಯಾಂಡ್ ನ್ನು ಖಾತರಿಪಡಿಸಬೇಕು. ಸಂವಿಧಾನದ ಆರ್ಟಿಕಲ್ 244 ರ/ವಿತ್ 6ನೇ ಮತ್ತು 8ನೇ ಶೆಡ್ಯೂಲ್ ಅಡಿಯಲ್ಲಿ ಭೂ–ರಾಜಕೀಯ ಸ್ವಾಯತ್ತತೆ ಮತ್ತು ಎಸ್‌ಟಿ ಟ್ಯಾಗ್‌ನೊಂದಿಗೆ ಆಂತರಿಕ ರಾಜಕೀಯ ಸ್ವ–ನಿರ್ಣಯದ ಹಕ್ಕುಗಳನ್ನು ನೀಡಬೇಕೆಂದು ಸತ್ಯಾಗ್ರಹದಲ್ಲಿ ಒತ್ತಾಯಿಸುವುದಾಗಿ ನಾಚಪ್ಪ ತಿಳಿಸಿದ್ದಾರೆ.

ಸತ್ಯನಾರಾಯಣ ಗುಪ್ತ ನಿಧನ



ಕುಶಾಲನಗರ, ಫೆ.11– ಪಟ್ಟಣದ ರಥ ಬೀದಿ ನಿವಾಸಿ ಸತ್ಯನಾರಾಯಣ ಗುಪ್ತ(77) ಅವರು ಶನಿವಾರ ನಿಧನರಾದರು.

ಮೃತರು ಪತ್ನಿ ನಿರ್ಮಲ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಅವರ ಮತ್ತೊಬ್ಬ ಮಗ ರಮೇಶ್ ಈ ಹಿಂದೆ ನಿಧನ ಹೊಂದಿದ್ದರು. ಮೃತರ ಅಂತ್ಯಕ್ರಿಯೆ ಮಾರುಕಟ್ಟೆ ರಸ್ತೆಯ ಹಿಂದೂ ರುದ್ರಭೂಮಿಯಲ್ಲಿ ಶನಿವಾರ ಸಂಜೆ ನಡೆಯಿತು.

ಮಾದಾಪುರ ಗ್ರಾಪಂಗೆ ಮಾನಸ ಅಧ್ಯಕ್ಷೆ

ಸುಂಟಿಕೊಪ್ಪ, ಫೆ.11– ಮಾದಾಪುರ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಬಿ.ಆರ್.ಮಾನಸ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮಾದಾಪುರ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಬಿ.ನಿರೂಪ ಅವರು ಜ.5ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಬಿ.ಆರ್. ಮಾನಸ ಅವರು ಮಾತ್ರ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಸೋಮವಾರಪೇಟೆ ತಾಲೂಕು ಪಂಚಾಯಿತಿ ಇ.ಓ. ಜಯಣ್ಣ ಅವರು ಮಾನಸ ಅವರನ್ನು ಅಧ್ಯಕ್ಷರೆಂದು ಘೋಷಿಸಿದರು. ಈ ಸಂದರ್ಭದಲ್ಲಿ ಗ್ರಾ.ಪಂ. ಉಪಾಧ್ಯಕ್ಷೆ ಜ್ಯೋತಿ ಸದಸ್ಯರುಗಳಾದ ಪಿ.ಡಿ.ಅಂತೋಣಿ, ಬಿದ್ದಪ್ಪ, ಗಿರೀಶ್, ಸೋಮಣ್ಣ, ನಿರೂಪ, ಗೋಪಿ ಭೀಮಯ್ಯ, ಸುರೇಶ ಬಾವೆ, ಜೆರ್ಮಿ, ದಮ್ಮಯಂತಿ, ಕೆ.ಎ.ಲತೀಫ್, ಶೀಲಾ, ಗ್ರಾ.ಪಂ. ಲೆಕ್ಕಾಧಿಕಾರಿ, ಪ್ರಭಾರ ಅಭಿವೃದ್ಧಿ ಅಧಿಕಾರಿ ಪೂರ್ಣಿಮ, ಅನಿತ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಗೋ ಪ್ರೇಮ ದಿನಾಚರಣೆ

ಮಡಿಕೇರಿ,ಫೆ.11– ಜೇಡ್ಲ ಗೋಪಾಲ ಕೃಷ್ಣ ದೇವಕಿ ಪಶುಸಂಗೋಪನಾ ಕೇಂದ್ರ ಹಾಗೂ ಸಂಪಾಜೆ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಫೆ.14ರಂದು ಸಂಪಾಜೆಯ ಜೇಡ್ಲದಲ್ಲಿ ಗೋ ಪ್ರೇಮ ದಿನಾಚರಣೆ ನಡೆಯಲಿದೆ.

ಸಂಪಾಜೆಯ ಜೇಡ್ಲ ಗೋಪಾಲಕೃಷ್ಣ ದೇವಕಿ ಪಶುಸಂಗೋಪನಾ ಕೇಂದ್ರದಲ್ಲಿ ಬೆಳಗ್ಗೆ 10 ಗಂಟೆಗೆ ಕಾರ್ಯಕ್ರಮಕ್ಕೆ ಚಾಲನೆ ದೊರೆಯಲಿದ್ದು, ಸಾರ್ವಜನಿಕರಿಗೆ ಬೆಳಗ್ಗಿನಿಂದಲೇ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಫೆ.18ರಿಂದ ಬೇಬಿಬೆಟ್ಟದಲ್ಲಿ ದನಗಳ ಜಾತ್ರಾ ಮಹೋತ್ಸವ

ಚರ್ಮಗಂಟು ರೋಗ ಹಿನ್ನೆಲೆ: ದನಗಳ ಕರೆತರದಂತೆ ಮನವಿ



ಚಿನಕುರಳಿ, ಫೆ11– ಪುರಾಣ ಪ್ರಸಿದ್ಧ ಬೇಬಿ ಬೆಟ್ಟದಲ್ಲಿ ಫೆ18ರಿಂದ ದನಗಳ ಜಾತ್ರೆ ನಡೆಯಲಿದ್ದು, ಚರ್ಮ ಗಂಟುರೋಗ ಹಿನ್ನೆಲೆಯಲ್ಲಿ ಈ ಬಾರಿ ರಾಸುಗಳು ಜಾತ್ರೆಯಲ್ಲಿ ಭಾಗವಹಿಸಲು ಅವಕಾಶವಿಲ್ಲ. ಹೀಗಾಗಿ ಪ್ರತಿವರ್ಷದಂತೆ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ ಎಂದು ಶ್ರೀರಾಮಯೋಗೇಶ್ವರ ಮಠದ ಪೀಠಾಧ್ಯಕ್ಷ ಶ್ರೀಶಿವಬಸವಸ್ವಾಮೀಜಿ ತಿಳಿಸಿದರು.

ಇಲ್ಲಿನ ಬೇಬಿಬೆಟ್ಟದ ಶ್ರೀರಾಮಯೋಗೇಶ್ವರ ಮಠದ ಆವರಣದಲ್ಲಿ ಬೇಬಿಜಾತ್ರಾ ಸಮಿತಿ ಸದಸ್ಯರೊಂದಿಗೆ ಜಂಟಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಜಾತ್ರೆಗೆ ರಾಸುಗಳನ್ನು ಕರೆತರದಂತೆ ರೈತರಿಗೆ ಮನವಿ ಮಾಡಿದರು.

ಪ್ರಸ್ತುತ ರಾಸುಗಳಿಗೆ ಚರ್ಮಗಂಟು ರೋಗ ಹರಡುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ದನಗಳ ಜಾತ್ರೆ ನಡೆಸದಂತೆ ಆದೇಶ ನೀಡಿದೆ ಹೀಗಾಗಿ ಜಾತ್ರೆಯಲ್ಲಿ ರೈತರು ಮಾತ್ರ ಭಾಗವಹಿಸುವಂತೆ ಮನವಿ ಮಾಡಿದರು.

ಜಾತ್ರೆಯಲ್ಲಿ ವಸ್ತು ಪ್ರದರ್ಶನ, ಮಹಿಳಾ ಉತ್ಸವ, ಕ್ರೀಡಾಕೂಟ, ಸಿದ್ದೇಶ್ವರ–ಮಹದೇಶ್ವರಸ್ವಾಮಿ ರಥೋತ್ಸವ, ತೆಪ್ಪೋತ್ಸವ ಹಾಗೂ ಉಚಿತ ಸರಳ ಸಾಮೂಹಿಕ ವಿವಾಹ ಜರುಗಲಿವೆ ಎಂದರು.

ಜಾತ್ರೆಯಲ್ಲಿ ದನಗಳು ಭಾಗವಹಿಸುವುದನ್ನು ರದ್ದುಪಡಿಸಿದ್ದರೂ, ಕೆಲವು ಜಾತ್ರೆಗಳಲ್ಲಿ ರಾಸುಗಳು ಭಾಗವಹಿಸುತ್ತಿರುವುದು ಕಂಡು ಬಂದಿದೆ. ಆದೇಶ ಮೀರಿ ರೈತರು ಜಾತ್ರೆಗೆ ರಾಸುಗಳನ್ನು ಕರೆತಂದರೆ ಅದಕ್ಕೆ ಜಾತ್ರಾ ಸಮಿತಿ ಜವಾಬ್ದಾರಿಯಲ್ಲ ಎಂದರು. ಬೇಬಿಬೆಟ್ಟದ ಶ್ರೀರಾಮಯೋಗೇಶ್ವರ ಮಠದಿಂದ ಜಾತ್ರೆ ಮುಗಿಯುವರೆಗೂ ಆಗಮಿಸುವ ರೈತರು, ಸಾರ್ವಜನಿಕರಿಗೆ ಬೆಳಗ್ಗೆ ತಿಂಡಿ, ಊಟದ ವ್ಯವಸ್ಥೆ ಮಾಡಲಾಗಿದೆ. ಉಚಿತ ಸರಳ ಸಾಮೂಹಿಕ ವಿವಾಹ ನಡೆಯುವ ದಿನ ಶಾಸಕ ಸಿ.ಎಸ್. ಪುಟ್ಟರಾಜು ಊಟದ ವ್ಯವಸ್ಥೆ ಮಾಡಲಿದ್ದಾರೆ ಎಂದರು.

ಜಾತ್ರಾ ಸಮಿತಿ ಮುಖ್ಯಸ್ಥ ನಾಗಣ್ಣ ಮಾತನಾಡಿ, ಜಾತ್ರೆಗೆ ಸುತ್ತಮುತ್ತಲಿನ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಚಿನಕುರಳಿ ಗ್ರಾಪಂ ಅಧ್ಯಕ್ಷ ಪಾಪಣ್ಣ, ಹೊನಗಾನಹಳ್ಳಿ ಗ್ರಾಪಂ ಅಧ್ಯಕ್ಷ ಚಂದ್ರಶೇಖರಯ್ಯ, ಗುಮ್ಮನಹಳ್ಳಿ ಗ್ರಾಪಂ ಅಧ್ಯಕ್ಷೆ ಭವಾನಿ, ಗ್ರಾಪಂ ಸದಸ್ಯ ನಾಗೇಗೌಡ, ಸಿ.ಎ.ಲೋಕೇಶ್, ಮಾಜಿ ಸದಸ್ಯ ಸಿ.ಡಿ.ಮಹದೇವು, ಕಲಿಗಣೇಶ್, ಸುನೀಲ್ ಸೇರಿದಂತೆ ಹಲವರಿದ್ದರು.

ವಿವಿಧೆಡೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ



ಶ್ರೀರಂಗಪಟ್ಟಣ, ಫೆ.11– ಚುನಾವಣೆ ವೇಳೆ ನಾಟಕ ಮಾಡುತ್ತಾ ಮತಯಾಚಿಸುತ್ತಿದ್ದವರು ಇದೀಗ ಕ್ಷೇತ್ರದಲ್ಲಾಗುತ್ತಿರುವ ಅಭಿವೃದ್ಧಿ ಕೆಲಸ ನೋಡಿ ದಿಗ್ಭ್ರಾಂತರಾಗಿದ್ದಾರೆ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಮಾಜಿ ಶಾಸಕ ರಮೇಶ ಬಂಡಿಸಿದ್ದೇಗೌಡರ ವಿರುದ್ಧ ಹರಿಹಾಯ್ದರು.

ತಾಲೂಕಿನ ಚಿಕ್ಕಂಕನಹಳ್ಳಿ, ಹುರಳಿ ಕ್ಯಾತನಹಳ್ಳಿ, ಬೊಂತಗಳ್ಳಿ, ಕೊಕ್ಕರೆಹುಂಡಿ ಹಾಗೂ ಸುಗ್ಗನಹಳ್ಳಿ ಗ್ರಾಮಗಳಲ್ಲಿ 2.5 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಮಾಜಿ ಶಾಸಕರು ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡದೆ ಕೇವಲ ನಾಟಕ ಮಾಡಿಕೊಂಡೇ ಕ್ಷೇತ್ರದ ಜನರನ್ನು ನಂಬಿಸಿ ಚುನಾವಣೆಯಲ್ಲಿ ಗೆಲ್ಲುತ್ತಿದ್ದರು. ಕ್ಷೇತ್ರದ ಜನತೆ ಪ್ರಜ್ಞಾವಂತರಾಗಿದ್ದು, ಯಾರು ಕೆಲಸ ಮಾಡುವವರು, ನಾಟಕವಾಡುವವರು ಯಾರು ಎಂಬುದನ್ನು ತಿಳಿಯುವ ಪ್ರಜ್ಞೆಯನ್ನು ಪ್ರತಿಯೊಬ್ಬರೂ ಬೆಳೆಸಿಕೊಂಡಿದ್ದಾರೆ. ಹಾಗಾಗಿ ನಾಟಕ ಈಗ ನಡೆಯುವುದಿಲ್ಲ. ಪ್ರತಿ ಮನೆಯಲ್ಲಿಯೂ ವಿದ್ಯಾವಂತ ಮಕ್ಕಳಿದ್ದು, ಪೋಷಕರಿಗೆ ವಾಸ್ತವ ತಿಳಿಸಲಿದ್ದಾರೆ. ರವೀಂದ್ರ ಶ್ರೀಕಂಠಯ್ಯ ಕ್ಷೇತ್ರದಲ್ಲಿ ಎಷ್ಟು ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಮಾಡುತ್ತಿದ್ದಾರೆ ಎಂಬುದು ಕ್ಷೇತ್ರದ ಪ್ರತಿಯೊಬ್ಬ ಗ್ರಾಮಸ್ಥರಿಗೂ ಗೊತ್ತು. ಮತದಾರರ ಮೇಲೆ ನನಗೆ ವಿಶ್ವಾಸವಿದೆ. ಯಾರು ಪ್ರಾಮಾಣಿಕವಾಗಿ ಅಭಿವೃದ್ಧಿ ಕೆಲಸ ಮಾಡುತ್ತಿದ್ದಾರೆ, ಯಾರು ನಾಟಕ ಆಡಿಕೊಂಡೇ ಜನರನ್ನು ದಿಕ್ಕು ತಪ್ಪಿಸುತ್ತಾ ಬಂದಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಾಗಿದೆ ಎಂದು ಶಾಸಕರು ಮಾಜಿ ಶಾಸಕರ ವಿರುದ್ಧ ವಾಗ್ದಾಳಿ ನಡೆಸಿದರು.

ಈ ವೇಳೆ ಶಾಸಕ ರವೀಂದ್ರ ಶ್ರೀಕಂಠಯ್ಯ ಚಿಕ್ಕಅಂಕನಹಳ್ಳಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಅಂಬೇಡ್ಕರ್ ಪ್ರತಿಮೆ ಉದ್ಘಾಟಿಸಿದರು.

ಪಟ್ಟಣದಲ್ಲಿ ಅಂಬೇಡ್ಕರ್ ಪ್ರತಿಮೆ: ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಪ್ರತಿಮೆ ನಿರ್ಮಿಸಲು ಎಲ್ಲಾ ಸಿದ್ಧತೆ ಕೈಗೊಂಡಿದ್ದು, ಮುಂದಿನ ದಿನಗಳಲ್ಲಿ ಪ್ರತಿಮೆ ಪ್ರತಿಸ್ಥಾಪಿಸಲಾಗುವುದು ಎಂದರು. ಕೊಕ್ಕರೆಹುಂಡಿ ಗ್ರಾಮದಲ್ಲಿ ಶಿಥಿಲಗೊಂಡಿರುವ ಶಾಲಾ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲಾಗಿದ್ದು, ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ತುಂಬಾ ಕಡಿಮೆ ಇದೆ. ಸರ್ಕಾರಿ ಶಾಲೆಗೆ ಹೆಚ್ಚಿನ ವಿದ್ಯಾರ್ಥಿಗಳನ್ನು ಸೇರಿಸುವಂತೆ ಪೋಷಕರಲ್ಲಿ ಅರಿವು ಮೂಡಿಸುವ ಕೆಲಸವಾಗಬೇಕು ಎಂದರು.

ಈ ವೇಳೆ ಚಿಕ್ಕಅಂಕನಹಳ್ಳಿ ಗ್ರಾಪಂ ಅಧ್ಯಕ್ಷ ಪ್ರಭಾಕರ್ ಸೇರಿದಂತೆ ಚುನಾಯಿತ ಪ್ರತಿನಿಧಿಗಳು, ತಾಪಂ ಮಾಜಿ ಸದಸ್ಯರು, ಅಧಿಕಾರಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಅಚ್ಚುಕಟ್ಟು ಪ್ರದೇಶಗಳಿಗೆ ನೀರೊದಗಿಸುವ ಕಾರ್ಯಕ್ಕೆ ಚಾಲನೆ



ಭಾರತೀನಗರ, ಫೆ11– ಇಲ್ಲಿಗೆ ಸಮೀಪದ ಮುಟ್ಟನಹಳ್ಳಿ ಬಳಿಯ ಸೂಳೆಕೆರೆ ದಕ್ಷಿಣ ನಾಲೆ ಅಕ್ವಡಕ್ಟ್ ನಿರ್ಮಾಣ ಕಾಮಗಾರಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಅಚ್ಚುಕಟ್ಟು ಪ್ರದೇಶಗಳಿಗೆ ನೀರೊದಗಿಸುವ ಕಾರ್ಯಕ್ಕೆ ಶಾಸಕ ಡಿ.ಸಿ.ತಮ್ಮಣ್ಣ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಕಳೆದ ನಾಲ್ಕೈದು ತಿಂಗಳ ಹಿಂದೆ ಸುರಿದ ಭಾರೀ ಮಳೆಯಿಂದ ಸೂಳೆಕೆರೆ ಕೋಡಿ ಮತ್ತು ದಕ್ಷಿಣ ನಾಲೆ ಕೊಚ್ಚಿ ಹೋಗಿತ್ತು ತಕ್ಷಣ ಸರ್ಕಾರ ಮಟ್ಟದಲ್ಲಿ ಹೋರಾಟ ನಡೆಸಿ ಸೂಳೆಕೆರೆ ಅಭಿವೃದ್ಧಿಗೆ 98 ಲಕ್ಷ ಹಣ ಮಂಜೂರು ಮಾಡಿಸಿ, ದಕ್ಷಿಣ ನಾಲೆ ಅಕ್ವಡಕ್ಟ್ ಕಾಮಗಾರಿಗೆ 48 ಲಕ್ಷ, ಸೂಳೆಕೆರೆ ಕೋಡಿ ಅಭಿವೃದ್ಧಿಗೆ 50 ಲಕ್ಷ ಅನುದಾನ ನೀಡಲಾಗಿತ್ತು ಎಂದರು.

ಈ ದಕ್ಷಿಣ ನಾಲೆ ಅಭಿವೃದ್ಧಿಯಿಂದ 3725 ಎಕರೆ ಅಚ್ಚುಕಟ್ಟು ಪ್ರದೇಶದ ಮುಟ್ಟನಹಳ್ಳಿ, ದೊಡ್ಡರಸಿನಕೆರೆ, ಕಾರ್ಕಹಳ್ಳಿ, ದೇವರಹಳ್ಳಿ, ಆಲಭುಜನಹಳ್ಳಿ, ಅಣ್ಣೂರು, ಕುರಿಕೆಂಪನದೊಡ್ಡಿ ಗ್ರಾಮಗಳಿಗೆ ನೀರೊದಗಿಸಿ ರೈತರ ಬೆಳೆಗಳಿಗೆ ಅನುಕೂಲ ಕಲ್ಪಿಸಲಾಗಿದೆ ಎಂದರು.

ಸರ್ಕಾರದಿಂದ ಮಲತಾಯಿ ಧೋರಣೆ: ಸರ್ಕಾರ ಉತ್ತರ ಕರ್ನಾಟಕಕ್ಕೆ ಹೆಚ್ಚು ಒತ್ತು ನೀಡಿ, ಹಳೆ ಮೈಸೂರು ಭಾಗಕ್ಕೆ ಯಾವುದೇ ಅನುದಾನ ನೀಡದೆ ಮಲತಾಯಿ ಧೋರಣೆ ಅನುಸರಿಸುತ್ತಿದೆ. ಸರ್ಕಾರ ಉತ್ತರ ಕರ್ನಾಟಕದ ನೀರಾವರಿಗೆ 6 ಸಾವಿರ ಕೋಟಿ ಮಂಜೂರು ಮಾಡಿದೆ. ಮದ್ದೂರು ಕೆರೆ ಮತ್ತು ಸೂಳೆಕೆರೆ ಅಭಿವೃದ್ಧಿಗೆ 550 ಕೋಟಿ ಹಣ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸಿದ್ದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಣ ಬಿಡುಗಡೆ ಮಾಡುತ್ತಾರೆಂಬ ನಂಬಿಕೆ ಇತ್ತು. ಆದರೆ ಆರ್ಥಿಕ ಸಲಹಾ ಸಮಿತಿ ಆಕ್ಷೇಪ ವ್ಯಕ್ತಪಡಿಸಿದ ಕಾರಣ ಹಣ ಬಿಡುಗಡೆಗೊಳಿಸಿಲ್ಲ. ಹಳೆ ಮೈಸೂರು ಭಾಗವನ್ನು ಸಂಪೂರ್ಣವಾಗಿ ಕಡೆಗಣಿಸುತ್ತಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಭಿವೃದ್ಧಿಗಾಗಿ ಹೋರಾಟ: ಸರ್ಕಾರ ರೈತರನ್ನು ಉಳಿಸಬೇಕಾದರೆ ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಮದ್ದೂರು ಕೆಮ್ಮಣ್ಣು ಕೆರೆ ಮತ್ತು ಸೂಳೆಕೆರೆ ಈ 2 ಕೆರೆಗಳು ಈ ಭಾಗದ ರೈತರಿಗೆ ಮಿನಿ ಅಣೆಕಟ್ಟೆ ಇದ್ದಂತೆ. ಕೆಆರ್‌ಎಸ್ ಅಣೆಕಟ್ಟೆ ಬಿಟ್ಟರೆ ಇದು ರೈತರಿಗೆ 2ನೇ ಅಣೆಕಟ್ಟೆ ಇದಾಗಿದೆ. ಹಾಗಾಗಿ ಈಗಲಾದರೂ ಈ 2 ಕೆರೆ ಮತ್ತು ನಾಲೆ ಅಭಿವೃದ್ಧಿಗೆ ಮುಂದಾಗಬೇಕು. ಇಲ್ಲದಿದ್ದರೆ ಹೋರಾಟದ ಹಾದಿ ಹಿಡಿಯಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ವೇಳೆ ಜೆಡಿಎಸ್ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಅರವಿಂದ್, ಎಇಇ ಪ್ರಶಾಂತ್, ಎಇ ಅವಿನಾಶ್, ಶೀಲ, ಗ್ರಾಮದ ಮುಖಂಡರಾದ ಎಂ.ಕೆ.ವೀರಯ್ಯ, ಎಂ.ಕೆ.ಚಂದ್ರಶೇಖರ್, ಎಂ.ಸಿ.ವೀರಯ್ಯ, ಎಂ.ಸಿ.ಚಂದ್ರಶೇಖರ್, ಯತೀಶ, ಎಂ.ಡಿ.ನಾಗರಾಜು, ಪ್ರಶಾಂತ್, ಯಜಮಾನ್ ಪುಟ್ಟಸ್ವಾಮಿ, ಶಿವಲಿಂಗ, ರವಿ, ಶಿವಕುಮಾರ್, ಕಿಶೋರ್, ಪುಟ್ಟಸ್ವಾಮಿ, ಸಣ್ಣೇಗೌಡ ಸೇರಿದಂತೆ ಹಲವರಿದ್ದರು.

ಜನರು, ಅಭಿಮಾನಿಗಳ ತೀರ್ಮಾನಕ್ಕೆ ಬದ್ಧ

ನಿವೃತ್ತ ಪೊಲೀಸ್ ಅಧಿಕಾರಿ ಬಿ.ಪುಟ್ಟಸ್ವಾಮಿ



ಚಾಮರಾಜನಗರ, ಫೆ.11– ಜನತೆ, ಅಭಿಮಾನಿಗಳು, ಬೆಂಬಲಿಗರು ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧನಾಗಿದ್ದು, ಶೀಘ್ರದಲ್ಲೇ ಪಕ್ಷ ಆಯ್ಕೆ ಮಾಡಿಕೊಂಡು ಜನರ ಬಳಿಗೆ ಬರುತ್ತೇನೆ ಎಂದು ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಆಕಾಂಕ್ಷಿ ಹಾಗೂ ನಿವೃತ್ತ ಪೊಲೀಸ್ ಅಧಿಕಾರಿ ಬಿ. ಪುಟ್ಟಸ್ವಾಮಿ ಹೇಳಿದರು.

ತಾಲೂಕಿನ ಸಂತೇಮರಹಳ್ಳಿಯ ಶ್ರೀಮಹದೇಶ್ವರ ದೇವಸ್ಥಾನದ ಆವರಣದಲ್ಲಿ ಬಿ. ಪುಟ್ಟಸ್ವಾಮಿ ಅಭಿಮಾನಿ ಬಳಗದಿಂದ ಆಯೋಜಿಸಿದ್ದ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ 2023ಕ್ಕೆ ಕೊಳ್ಳೇಗಾಲದ ಭರವಸೆ ಬೆಳಕು ಬಿ.ಪುಟ್ಟಸ್ವಾಮಿರವರ ಜನಾಭಿಪ್ರಾಯ ಬೃಹತ್ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

ಜನಾಭಿಪ್ರಾಯ ಬೃಹತ್ ಸಭೆಯಲ್ಲಿ ನಿರೀಕ್ಷೆಗೂ ಮೀರಿ ಬೆಂಬಲ ವ್ಯಕ್ತಪಡಿಸುವ ಮೂಲಕ ನೀವು ಯಾವ ಪಕ್ಷಕ್ಕೂ ಹೋದರೂ ನಾವು ಕೈ ಜೋಡಿಸುತ್ತೇವೆ. ನಿಮ್ಮ ಜೊತೆಗಿರುತ್ತೇವೆಂದು ಒಮ್ಮತದಿಂದ ಅಭಿಪ್ರಾಯ ತಿಳಿಸಿದ್ದೀರಾ. ಇಷ್ಟೊಂದು ಜನರ ಸೇರುತ್ತಾರೆ ಎಂದು ನಿರೀಕ್ಷೆ ಮಾಡಿರಲಿಲ್ಲ. ನಿಜಕ್ಕೂ ತುಂಬಾ ಸಂತಸ ತಂದಿದೆ. ಸಮಾವೇಶದಲ್ಲಿ ಭಾಗವಹಿಸಿದ ಜನತೆಗೆ ಧನ್ಯವಾದ ಎಂದು ತಿಳಿಸಿದರು.

ಎಲ್ಲ ಪಕ್ಷದವರು ಆಹ್ವಾನ ನೀಡುತ್ತಿದ್ದಾರೆ. ಆದರೆ ನಾವು ಜನಾಭಿಪ್ರಾಯ ಸಂಗ್ರಹಿಸದೆ ಯಾವುದೇ ಪಕ್ಷಕ್ಕೆ ಸೇರ್ಪಡೆಯಾಗಬಾರದು ಜನರ ಅಭಿಪ್ರಾಯವೇ ಅಂತಿಮವಾಗಿದೆ. ಮುಂದಿನ ದಿನಗಳಲ್ಲಿ ನನ್ನ ನಿರ್ಧಾರ ತಿಳಿಸುತ್ತೇನೆ ಎಂದು ತಿಳಿಸಿದರು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಸಂತೇಮರಹಳ್ಳಿ ಎಪಿಎಂಸಿ ಆವರಣದಿಂದ ತೆರೆದ ವಾಹನದಲ್ಲಿ ಬಿ. ಪುಟ್ಟಸ್ವಾಮಿ ಅವರನ್ನು ಮೆರವಣಿಗೆಯಲ್ಲಿ ವೇದಿಕೆಗೆ ಕರೆ ತರಲಾಯಿತು. ಈ ವೇಳೆ ಗ್ರಾಪಂ ಅಧ್ಯಕ್ಷ ಶಂಕರಪ್ಪ, ನಗರಸಭಾ ಸದಸ್ಯ ಜಯಮೇರಿ, ಕೊಳ್ಳೇಗಾಲ ತಾಲೂಕು ವೀರಶೈವ ಸಮಾಜದ ತಾಲೂಕು ಅಧ್ಯಕ್ಷ ಬಸವರಾಜು, ಗಂಗವಾಡಿ ಶಿವರುದ್ರ ಸ್ವಾಮಿ, ಫಾಯಜ್, ಕಾಂತರಾಜು, ಮಹೇಶ್‌ಗೌಡ, ಗೋಪಾಲನಾಯಕ, ಜನ್ನೂರು ಪುಟ್ಟಸ್ವಾಮಿ, ರೇಚಂಬಳ್ಳಿ ಕುಮಾರ್, ಪ್ರಕಾಶ್ ಇದ್ದರು.

ಸಂತೇಮರಹಳ್ಳಿ ಐಬಿಯಲ್ಲಿ ಶಾಸಕ ಮಹೇಶ್ ವಿರುದ್ಧ ನಿವೃತ್ತ ಪೊಲೀಸ್ ಅಧಿಕಾರಿ ಪುಟ್ಟಸ್ವಾಮಿ ಬೆಂಬಲಿಗರ ಪ್ರತಿಭಟನೆ

ಸಮಾವೇಶದ ನಂತರ ವಿಚ್ಛೇದಿತ ಪತ್ನಿ ಶಾಸಕರನ್ನು ಭೇಟಿ ಮಾಡಿದ್ದರಿಂದ ಆಕ್ರೋಶ



> ನನಗೂ ನನ್ನ ಪತ್ನಿಗೂ ನ್ಯಾಯಾಲಯದಲ್ಲಿ ವಿಚ್ಛೇದನವಾಗಿದೆ. ನನಗೆ ಅವಮಾನ ಮಾಡುವ ಉದ್ದೇಶದಿಂದ ಅವರನ್ನು ವೇದಿಕೆ ಬಳಿ ಕಳುಹಿಸಲಾಗಿತ್ತು ನನಗೆ ಮೂರು ವರ್ಷದಿಂದ ಇದೇ ರೀತಿ ಅವಮಾನ ಮಾಡುತ್ತಿದ್ದಾರೆ. ಇಂದು ಆಕೆ ಶಾಸಕರ ಜೊತೆ ಚರ್ಚೆ ಮಾಡುವ ಅವಶ್ಯಕತೆ ಏನಿತ್ತು ಗೊತ್ತಿಲ್ಲ. ಅವರು ಬುದ್ಧಿ ಹೇಳಿ ಕಳುಹಿಸಬಹುದಿತ್ತು. ಆದರೆ, ಅವರು ಈ ರೀತಿ ಮಾಡಬಾರದಿತ್ತು.
> **– ಪುಟ್ಟಸ್ವಾಮಿ, ನಿವೃತ್ತ ಪೊಲೀಸ್ ಅಧಿಕಾರಿ.**

> ಇದು ಹಸಿ ಸುಳ್ಳು. ಇಂದು ಬಿಜೆಪಿ ಶಕ್ತಿ ಮಂಡಲದ ಸಭೆ ಇತ್ತು. ಅದಕ್ಕಾಗಿ ಸಂತೇಮರಹಳ್ಳಿಗೆ ಬಂದಿದ್ದೆ. ಇಲ್ಲಿ ಏನು ನಡೆಯುತ್ತಿದೆ ಅದಕ್ಕೂ ನನಗೂ ಸಂಬಂಧವಿಲ್ಲ. ಸುಮ್ಮನೆ ಅನಗತ್ಯವಾಗಿ ಕನೆಕ್ಟ್ ಮಾಡುತ್ತಿದ್ದಾರೆ. ಇದು ರಾಜಕೀಯ ಷಡ್ಯಂತ್ರ. ನಾನು ಆ ಮಹಿಳೆಯನ್ನು ಭೇಟಿ ಮಾಡಿಲ್ಲ. ಈ ಷಡ್ಯಂತ್ರದ ಭಾಗ ನಾವಲ್ಲ. ಈ ಬಗ್ಗೆ ಆ ಮಹಿಳೆಯನ್ನೇ ವಿಚಾರಿಸಿ. ನಾನು ಯಾರನ್ನು ಮುಂದೆ ಇಟ್ಟುಕೊಂಡು ಈವರೆಗೂ ರಾಜಕಾರಣ ಮಾಡಿಲ್ಲ, ಮುಂದೆಯೂ ಮಾಡಲ್ಲ.
> **– ಎನ್. ಮಹೇಶ್, ಶಾಸಕರು.**

ಚಾಮರಾಜನಗರ, ಫೆ.11– ನಿವೃತ್ತ ಪೊಲೀಸ್ ಅಧಿಕಾರಿ ಪುಟ್ಟಸ್ವಾಮಿ ಅವರು ರಾಜಕೀಯರಂಗ ಪ್ರವೇಶಿಸಲು ಬಯಸಿ ಸಮಾವೇಶ ನಡೆಸಿದ ಬೆನ್ನ ಹಿಂದೆಯೇ ಪುಟ್ಟಸ್ವಾಮಿ ಮತ್ತು ಶಾಸಕ ಎನ್. ಮಹೇಶ್ ಮತ್ತು ಅವರ ಬೆಂಬಲಿಗರ ನಡುವೆ ವಾಗ್ಯುದ್ಧಕ್ಕೆ ಕಾರಣವಾಗಿದ್ದು, ಶಾಸಕರ ವಿರುದ್ಧ ಪುಟ್ಟಸ್ವಾಮಿ ಬೆಂಬಲಿಗರು ಪ್ರತಿಭಟನೆ ನಡೆಸಿದ್ದಾರೆ.

ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಆಕಾಂಕ್ಷಿಯಾಗಿರುವ ನಿವೃತ್ತ ಪೊಲೀಸ್ ಅಧಿಕಾರಿ ಪುಟ್ಟಸ್ವಾಮಿ ಅವರು ಸಂತೇಮರಳ್ಳಿಯ ಶ್ರೀ ಮಹದೇಶ್ವರ ದೇವಸ್ಥಾನದ ಆವರಣದಲ್ಲಿ ಶನಿವಾರ ಜನಾಭಿಪ್ರಾಯ ಸಮಾವೇಶವನ್ನು ಏರ್ಪಡಿಸಿದ್ದರು. ಸಮಾವೇಶದಲ್ಲಿ ಭಾರೀ ಜನ ಸೇರಿದ್ದು, ಅಪಾರ ಬೆಂಬಲ ವ್ಯಕ್ತವಾಗಿತ್ತು ಎನ್ನಲಾಗಿದೆ.

ಈ ಮಧ್ಯೆ ಸಮಾವೇಶ ಮುಗಿಯುತ್ತಿದ್ದಂತೆ ಬಿ. ಪುಟ್ಟಸ್ವಾಮಿ ಅವರ ವಿಚ್ಛೇದಿತ ಪತ್ನಿ ಸಂತೇಮರಹಳ್ಳಿಯ ಪ್ರವಾಸಿ ಮಂದಿರದಲ್ಲಿ ಶಾಸಕ ಎನ್. ಮಹೇಶ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು ಎನ್ನಲಾಗಿದೆ. ಈ ವಿಷಯ ಪುಟ್ಟಸ್ವಾಮಿ ಮತ್ತು ಅವರ ಬೆಂಬಲಿಗರಿಗೆ ತಿಳಿದು, ಪ್ರವಾಸಿ ಮಂದಿರದ ಬಳಿ ಜಮಾಯಿಸಿ ಶಾಸಕರು ರಾಜಕೀಯ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಲಾರಂಭಿಸಿದರು.

ತಾವು ರಾಜಕೀಯ ಪ್ರವೇಶ ಮಾಡುವುದನ್ನು ಸಹಿಸಲಾರದೆ ಶಾಸಕರು ತಮ್ಮ ವಿಚ್ಛೇದಿತ ಪತ್ನಿಯ ಜೊತೆ ಚರ್ಚೆ ನಡೆಸಿದ್ದು, ಇದು ಸರಿಯಲ್ಲ ಎಂದು ಬೇಸರ ವ್ಯಕ್ತ ಪಡಿಸಿದ ಪುಟ್ಟಸ್ವಾಮಿ ಅವರು ಮಹೇಶ್ ತಮಗೆ ತಂದೆಯ ಸಮಾನ, ಅವರ ಬಗ್ಗೆ ಗೌರವವಿದೆ. ಆದರೆ ಅವರು ಈ ರೀತಿ ಮಾಡಿದ್ದು, ಸರಿಯಲ್ಲ ಎಂದು ಬೇಸರದಿಂದ ನುಡಿದರು.

ಈ ವೇಳೆ ಶಾಸಕ ಮಹೇಶ್ ಬೆಂಬಲಿಗರು ಕೂಡ ಪ್ರವಾಸಿ ಮಂದಿರದ ಮುಂದೆ ಜಮಾಯಿಸಿ, ಪುಟ್ಟಸ್ವಾಮಿ ಬೆಂಬಲಿಗರ ಪ್ರತಿಭಟನೆ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು ಎನ್ನಲಾಗಿದೆ. ಇದರಿಂದ ಪ್ರವಾಸಿ ಮಂದಿರದ ಸುತ್ತ–ಮುತ್ತ ಕೆಲ ಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಕೊನೆಗೆ ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ನಿಯಂತ್ರಿಸಿದರು ಎಂದು ತಿಳಿದು ಬಂದಿದೆ.

ಚಾಮರಾಜನಗರದಲ್ಲಿ ಅದ್ಧೂರಿ ಮಡಿವಾಳ ಮಾಚಿದೇವ ಜಯಂತಿ



ಚಾಮರಾಜನಗರ, ಫೆ.11– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮಡಿವಾಳ ಮಾಚಿದೇವ ಜಯಂತಿಯನ್ನು ನಗರದಲ್ಲಿಂದು ಅದ್ಧೂರಿಯಾಗಿ ಆಚರಿಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ, ಮಡಿವಾಳ ಮಾಚಿದೇವರು ನೇರ ಹಾಗೂ ನಿಷ್ಠುರ ಶರಣರಾಗಿದ್ದರು. ಅವರ ವಚನಗಳ ಸಾರವನ್ನು ಅರ್ಥ ಮಾಡಿಕೊಂಡು ನಾವೆಲ್ಲರೂ ಮುನ್ನಡೆಯಬೇಕು ಎಂದರು.

ಮಡಿವಾಳ ಸಮುದಾಯ ಶಿಕ್ಷಣ ಸೌಲಭ್ಯಗಳನ್ನು ಪಡೆಯಬೇಕು. ಸಮುದಾಯವು ಒಗ್ಗಟ್ಟಾಗಿ ಹೋರಾಟ ಮಾಡಿದಾಗ ಎಲ್ಲಾ ಫಲ ಸಿಗಲಿದೆ. ನಿಮ್ಮೊಂದಿಗೆ ನಾವು ಸಹ ಇದ್ದೇವೆ. ನಿಮ್ಮ ಸವಲತ್ತುಗಳಿಗೆ ಎಲ್ಲಾ ನೆರವು ನೀಡುತ್ತೇವೆ ನಗರದಲ್ಲಿ ದೋಬಿಘಾಟ್ ನಿರ್ಮಾಣಕ್ಕೆ ಅಗತ್ಯ ಸಹಾಯ ಮಾಡಲಾಗುವುದು. ಜಿಲ್ಲಾ ಸಮುದಾಯ ಭವನಕ್ಕೂ ನೆರವು ಒದಗಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮವನ್ನು ನಗರಸಭೆ ಅಧ್ಯಕ್ಷೆ ಸಿ.ಎಂ. ಆಶಾ ಉದ್ಘಾಟಿಸಿದರು. ಬೆಂಗಳೂರು ಕ್ರೈಸ್ಟ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ಹ.ರಾ.ಮಹೇಶ್ ಮುಖ್ಯಭಾಷಣ ಮಾಡಿದರು. ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಾ. ರಾಜು ಎಂ. ತಲ್ಲೂರು ಮಾತನಾಡಿದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಚಿತ್ರದುರ್ಗದ ಶ್ರೀ ಮಾಚಿದೇವ ಮಹಾ ಸಂಸ್ಥಾನ ಮಠದ ಡಾ.ಬಸವ ಮಾಚಿದೇವ ಮಹಾ ಸ್ವಾಮೀಜಿಯವರ ಸಂದೇಶವನ್ನು ಕಾರ್ಯಕ್ರಮದಲ್ಲಿ ವಾಚಿಸಿದರು. ಜಿಪಂ ಸಿಇಓ ಅಧಿಕಾರಿ ಎಸ್.ಪೂವಿತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಎನ್. ಗುರುಲಿಂಗಯ್ಯ, ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಶ್ರೀ ಚಾಮರಾಜೇಶ್ವರ ದೇವಾಲಯದಲ್ಲಿ ಮಡಿವಾಳ ಮಾಚಿದೇವರ ಭಾವಚಿತ್ರದ ಅದ್ಧೂರಿ ಮೆರವಣಿಗೆಗೆ ಗಣ್ಯರು ಚಾಲನೆ ನೀಡಿದರು.

ಬಾಲಿವುಡ್ ನಟಿ ರಾಖಿ ಸಾವಂತ್ ಪತಿ ವಿರುದ್ಧ ಮೈಸೂರಲ್ಲಿ ಅತ್ಯಾಚಾರ, ವಂಚನೆ ಕೇಸ್

ಇರಾನಿ ವಿದ್ಯಾರ್ಥಿನಿಯಿಂದ ಮೈಸೂರು ವಿವಿ ಪುರಂ ಠಾಣೆಯಲ್ಲಿ ಪ್ರಕರಣ ದಾಖಲು



ಮೈಸೂರು, ಫೆ 11– ತನ್ನ ಪತಿ ವಂಚನೆ ಎಸಗಿದ್ದಾನೆ ಎಂದು ವಿವಾದಿತ ಬಾಲಿವುಡ್ ನಟಿ ರಾಖಿ ಸಾವಂತ್ ನೀಡಿದ ದೂರಿನನ್ವಯ ಮುಂಬೈ ಜೈಲು ಪಾಲಾಗಿರುವ ಆಕೆಯ ಪತಿಯೂ ಆದ, ಮೈಸೂರು ನಿವಾಸಿ ಆದಿಲ್ ಖಾನ್ ದುರಾನಿ ವಿರುದ್ಧ ಮೈಸೂರಿನ ವಿವಿ ಪುರಂ ಠಾಣೆಯಲ್ಲಿ ಇರಾನ್ ಮೂಲದ ವಿದ್ಯಾರ್ಥಿನಿ ಅತ್ಯಾಚಾರ ಹಾಗೂ ವಂಚನೆ ಪ್ರಕರಣ ದಾಖಲಿಸಿದ್ದಾಳೆ.

ಫೆಬ್ರವರಿ 10ರಂದು ರಾತ್ರಿ 9.30ರಲ್ಲಿ ಇರಾನ್ ಮೂಲದ ವಿದ್ಯಾರ್ಥಿನಿ ನೀಡಿದ ದೂರಿನನ್ವಯ ಪೊಲೀಸರು ಆದಿಲ್ ಖಾನ್ ವಿರುದ್ಧ ಭಾರತೀಯ ದಂಡ ಸಂಹಿತೆ 376, 417, 420, 504, 506 ರಡಿ ಎಫ್‌ಐಆರ್ ದಾಖಲಿಸಿದ್ದಾರೆ.

ವಿವರ: ಇರಾನ್ ಮೂಲದ 30 ವರ್ಷ ವಯಸ್ಸಿನ ವಿದ್ಯಾರ್ಥಿನಿ ಡಿ.ಫಾರ್ಮ ವ್ಯಾಸಂಗ ಮಾಡಲು ಕಳೆದ 5 ವರ್ಷದ ಹಿಂದೆ ಮೈಸೂರಿಗೆ ಆಗಮಿಸಿ, ಇಲ್ಲಿನ ಕಾಲೇಜೊಂದರಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಳೆ. ಈಕೆಗೆ 2018ರಲ್ಲಿ ಕಾಳಿದಾಸ ರಸ್ತೆಯಲ್ಲಿರುವ ಫುಡ್ ಅಡ್ಡಾವೊಂದರಲ್ಲಿ ಪರಿಚಯವಾದ ಆದಿಲ್ ಖಾನ್ ದುರಾನಿ, ಆಕೆಯನ್ನು ಪ್ರೀತಿಸಲಾರಂಭಿಸಿದ್ದಾನೆ. ಯಾದವಗಿರಿಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ಇಬ್ಬರೂ ಒಟ್ಟಿಗೆ ವಾಸಿಸುತ್ತಿದ್ದು, ಈ ವೇಳೆ ಮದುವೆಯಾಗುವುದಾಗಿ ನಂಬಿಸಿ, ತನ್ನ ಮೇಲೆ ಆತ ಅತ್ಯಾಚಾರವೆಸಗಿದ್ದಾನೆ ಎಂದು ಇರಾನ್ ವಿದ್ಯಾರ್ಥಿನಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾಳೆ.

ತನ್ನನ್ನು ದೈಹಿಕವಾಗಿ ಬಳಸಿಕೊಳ್ಳುತ್ತಿದ್ದ ಆತ, ಮದುವೆಯಾಗಲು ಮೀನಾಮೇಷ ಎಣಿಸುತ್ತಿದ್ದ. ಕಳೆದ 5 ತಿಂಗಳ ಹಿಂದೆ ಮದುವೆ ಮಾಡಿಕೊಳ್ಳುವಂತೆ ಆತನನ್ನು ಕೇಳಿದಾಗ ಮದುವೆಗೆ ನಿರಾಕರಿಸಿದ್ದಲ್ಲದೇ, ನಿನ್ನಂತಹ ಎಷ್ಟೋ ಹುಡುಗಿಯರಿಗೆ ಮೋಸ ಮಾಡಿದ್ದೇನೆ, ನೀನು ಯಾವ ಲೆಕ್ಕ? ಎಂದು ಪ್ರಶ್ನಿಸಿದ್ದ. ಮಾತ್ರವಲ್ಲದೇ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ನಡೆಸಿದ್ದ ಎಂದು ಆರೋಪಿಸಿರುವ ಇರಾನ್ ವಿದ್ಯಾರ್ಥಿನಿ, ತಾನು ಪೊಲೀಸರಿಗೆ ದೂರು ನೀಡುತ್ತೇನೆ ಎಂದು ಹೇಳಿದಾಗ ಆತನ ಮೊಬೈಲ್‌ನಲ್ಲಿದ್ದ ನನ್ನ ಖಾಸಗಿ ಫೋಟೋಗಳನ್ನು ನನ್ನ ತಂದೆ–ತಾಯಿಗೆ ರವಾನಿಸುವುದರ ಜೊತೆಗೆ ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುವುದಾಗಿ ಬೆದರಿಕೆ ಹಾಕಿದ್ದ. ಕೊನೆಗೆ 2022ರ ಡಿಸೆಂಬರ್ 31ರಂದು ಮಧ್ಯಾಹ್ನ 2ರಿಂದ 3 ಗಂಟೆ ವೇಳೆಯಲ್ಲಿ ಆತನ ಮೊಬೈಲ್‌ನಲ್ಲಿದ್ದ ನನ್ನ ಫೋಟೋಗಳನ್ನು ಡಿಲೀಟ್ ಮಾಡಿದ ಎಂದು ಆಕೆ ದೂರಿನಲ್ಲಿ ತಿಳಿಸಿದ್ದಾಳೆ. ತನ್ನನ್ನು ಅವಾಚ್ಯ ಶಬ್ಧಗಳಿಂದ ನಿಂದಿಸಿ, ಹಲ್ಲೆಯನ್ನೂ ಮಾಡಿದ ಆತ, ಈ ಬಗ್ಗೆ ಯಾರಿಗಾದರೂ ಹೇಳಿದರೆ ಅಥವಾ ಪೊಲೀಸರಿಗೆ ದೂರು ನೀಡಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ ಎಂದು ಇರಾನ್ ವಿದ್ಯಾರ್ಥಿನಿ ತನ್ನ ದೂರಿನಲ್ಲಿ ತಿಳಿಸಿದ್ದಾಳೆ.

ಅನಸ್ತೇಷಿಯಾ ಇಂಜೆಕ್ಷನ್ ತೆಗೆದುಕೊಂಡು ನರ್ಸ್ ಆತ್ಮಹತ್ಯೆ



ಮೈಸೂರು, ಫೆ.11– ಅನಸ್ತೇಷಿಯಾ ಇಂಜೆಕ್ಷನ್ ತೆಗೆದುಕೊಂಡು ಸ್ಟಾಫ್ ನರ್ಸ್ ಆತ್ಮಹತ್ಯೆಗೆ ಶರಣಾದ ಘಟನೆ ಮೈಸೂರಿನ ಲಷ್ಕರ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಗುಂಡ್ಲುಪೇಟೆ ತಾಲೂಕು ಬೆಟ್ಟದಪುರ ಗ್ರಾಮದ ಶೈಲಜಾ(23) ಆತ್ಮಹತ್ಯೆಗೆ ಶರಣಾದ ನರ್ಸ್ ಆಗಿದ್ದು, ಈಕೆ ಮೈಸೂರಿನ ಮಹಮದ್ ಸೇಠ್ ಬ್ಲಾಕ್‌ನಲ್ಲಿರುವ ಖಾಸಗಿ ಆಸ್ಪತ್ರೆಯಲ್ಲಿ ಕಳೆದ 5 ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಆಸ್ಪತ್ರೆ ಬಳಿ ಇರುವ ವುಮೆನ್ಸ್ ಹಾಸ್ಟೆಲ್‌ನಲ್ಲಿ ವಾಸವಿದ್ದ ಈಕೆ ಯಾವುದೋ ಕಾರಣದಿಂದ ಮಾನಸಿಕ ಖಿನ್ನತೆಗೆ ಒಳಗಾಗಿದ್ದಳು ಎನ್ನಲಾಗಿದ್ದು, ಅನಸ್ತೇಷಿಯಾ ಇಂಜೆಕ್ಷನ್ ತೆಗೆದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.ಈ ಸಂಬಂಧ ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂತರು, ವಿಜ್ಞಾನಿಗಳ ಸಮ್ಮಿಳಿತದಿಂದ ಭಾರತ ಸಂಪದ್ಭರಿತವಾಗಿದೆ

● ಎಸ್‌ಜೆಸಿಇ ವಜ್ರ ಮಹೋತ್ಸವ ಉದ್ಘಾಟಿಸಿ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗೌರ್ನರ್ ಅಭಿಮತ ● ನಮ್ಮದು ರಚನಾತ್ಮಕ ಸಂಸ್ಕೃತಿ; ವಿನಾಶಕಾರಿಯಲ್ಲ

ಮೈಸೂರು, ಫೆ.11(ಎಂಕೆ)– ಸಂತರು, ವಿಜ್ಞಾನಿಗಳ ಸಮ್ಮಿಳಿತದಿಂದ ಭಾರತ ಸಂಪದ್ಭರಿತವಾಗಿದ್ದು, ಆಧ್ಯಾತ್ಮ ಮತ್ತು ವಿಜ್ಞಾನ ಎರಡನ್ನೂ ಮೇಳೈಸಿಕೊಂಡ ವಿಶ್ವದ ಏಕೈಕ ರಾಷ್ಟ್ರ ಎಂದು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗೌರ್ನರ್ ಮನೋಜ್ ಸಿನ್ಹಾ ಹೇಳಿದರು.

ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾಲಯದ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ವಜ್ರ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂತರು ಮತ್ತು ವಿಜ್ಞಾನಿಗಳ ಮೌಲ್ಯಯುತ ಸಲಹೆಗಳಿಂದ ದೇಶ ಸಂಪದ್ಭರಿತವಾಗಿದೆ. ವಿಶ್ವದ ಇತಿಹಾಸದಲ್ಲಿಯೇ ಶಾಂತಿಯುತ ರಾಷ್ಟ್ರವಾಗಿರುವ ಭಾರತವು 'ಒಂದು ದೇಶ', ಒಂದು ಕುಟುಂಬ' ಸಂದೇಶದೊಂದಿಗೆ 'ವಸುದೈವ ಕುಟುಂಬಕ್ಕಂ' ಪರಿಕಲ್ಪನೆಯನ್ನು ವಿದೇಶಿಗರಿಗೆ ತಿಳಿಸುವ ಕೆಲಸ ಮಾಡುತ್ತಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿಯವರು ಜಿ20 ನಾಯಕತ್ವ ಪಡೆದಾಗಿನಿಂದ ದೇಶದ ಸಾಂಸ್ಕೃತಿಕ ಪರಂಪರೆಯನ್ನು ಪಸರಿಸುವ ಕೆಲಸ ಮಾಡುತ್ತಿದ್ದಾರೆ. ನಮ್ಮದು ಪುರಾತನ ಕಾಲದಿಂದಲೂ ರಚನಾತ್ಮಕ (ಒಗ್ಗೂಡಿಸುವ) ಸಂಸ್ಕೃತಿಯೇ ಹೊರತು ವಿನಾಶಕಾರಿಯಲ್ಲ ಎಂದು ಪ್ರತಿಪಾದಿಸಿದರಲ್ಲದೆ ವಸಾಹತುಶಾಹಿ ಭ್ರಮೆಯಿಂದ ಹೊರಬಂದು ಪರಂಪರೆಯನ್ನು ಉಳಿಸಬೇಕಿದೆ. ಹೀಗಾಗಿ ಭಾರತೀಯ ಸಂಸ್ಕೃತಿ ಮತ್ತು ತಂತ್ರಜ್ಞಾನವನ್ನು ಸಮದೂಗಿಸಿಕೊಂಡು ಮುಂದುವರೆಯಬೇಕು ಎಂದು ಸಲಹೆ ನೀಡಿದರು.

ಡಿಗ್ರಿ ಗಳಿಕೆಯಿಂದ ಸಾಧನೆ ಅಸಾಧ್ಯ: ಡಿಗ್ರಿ ಗಳಿಕೆಯಿಂದ ಸಾಧನೆ ಅಸಾಧ್ಯ, ಮನಸ್ಸು ಇಚ್ಛಿಸುವ ಕೆಲಸವನ್ನು ನಿಷ್ಠೆಯಿಂದ ಮಾಡಬೇಕು. ಅಂತರ್ಮುಖಿ ಚಿಂತನೆಗಳಿಗೆ ತೆರೆದುಕೊಳ್ಳುವುದೇ ಶಿಕ್ಷಣದ ಧ್ಯೇಯವಾಗಿದ್ದು, ನಿರಂತರ ಓದು, ಜ್ಞಾನಾರ್ಜನೆ ಮುಖ್ಯವಾಗುತ್ತದೆ. ಮಹಾತ್ಮ ಗಾಂಧೀಜಿಯವರು ಲಾ ಪದವಿಗೆ ಹೆಚ್ಚಿನ ಆದ್ಯತೆ ನೀಡದೆ ಸತ್ಯ ಪ್ರತಿಪಾದಿಸಿದರಿಂದ ರಾಷ್ಟ್ರಪಿತರಾದರು. ಡಿಗ್ರಿ ಪಡೆಯದೆ ಕ್ರಿಕೆಟ್ ನೆಚ್ಚಿಕೊಂಡ ಸಚಿನ್ ತೆಂಡೂಲ್ಕರ್ ಕ್ರಿಕೆಟ್ ದೇವರು ಎಂಬ ಹೆಸರು ಗಳಿಸಿದರು. ಅವರು ಶಿಕ್ಷಣ ಕಡಿಮೆ ಪಡೆದಿದ್ದರೂ, ಶ್ರದ್ಧೆ ಮತ್ತು ಬದ್ಧತೆಯಿಂದ ಜಗತ್ತು ಗೆದ್ದಿದ್ದಾರೆ ಎನ್ನುತ್ತಲೇ ಹಲವಾರು ಸಾಧಕ ಮಹನೀಯರ ಬಗ್ಗೆ ತಿಳಿಸುವ ಮೂಲಕ ಶಿಕ್ಷಣದ ಮಹತ್ವವನ್ನು ಮನದಟ್ಟು ಮಾಡಿಕೊಟ್ಟರು.

ಕೌಶಲ್ಯಾಧಾರಿತ ಶಿಕ್ಷಣಕ್ಕೆ ಆದ್ಯತೆ: ಪ್ರಾಚೀನ ಕಾಲದಿಂದಲೂ ನಾವು ಗಣಿತದಲ್ಲಿ ಮುಂದಿದ್ದು, ಸಂಶೋಧನೆಯಲ್ಲಿ ಹಿಂದಿದ್ದೇವೆ. ಆದ್ದರಿಂದ ಐಟಿ ಕ್ಷೇತ್ರಗಳಲ್ಲಿಯೂ ಗಣಿತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು. ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ಅಳವಡಿಸಿಕೊಳ್ಳುವ ಮೂಲಕ ಕೌಶಲ್ಯಾಧಾರಿತ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಡಿಗ್ರಿ ಕೇಂದ್ರಿಕೃತವಾಗುವ ಬದಲು ಕೌಶಲ್ಯತೆಗಳ ಕಡೆಗೆ ಹೆಚ್ಚಿನ ಗಮನ ಹರಿಸಬೇಕು. ಹಾಗೆಯೇ ಪ್ರತಿಯೊಬ್ಬರು ನಮ್ಮ ದೇಶ ಎಂಬ ಅಭಿಮಾನದಿಂದ ಕೆಲಸ ಮಾಡಬೇಕು. ಹೃದಯವಂತಿಕೆಯನ್ನು ಬೆಳೆಸಿಕೊಳ್ಳಬೇಕಾಗಿರುವುದು ಮುಖ್ಯವಾಗಬೇಕು. ಸಾಧನೆ ಕಠಿಣ ಪರಿಶ್ರಮದಿಂದ ಮಾತ್ರ ಸಾಕಾರಗೊಳ್ಳುತ್ತದೆ ಎಂಬುದನ್ನು ಮರೆಯಬಾರದು ಎಂದು ತಿಳಿಸಿದರು.

ಸೂಪರ್ ಪವರ್ ರಾಷ್ಟ್ರ: ಕಳೆದ 8 ವರ್ಷಗಳಲ್ಲಿ ಭಾರತ ಸೂಪರ್ ಪವರ್ ದೇಶವಾಗಿ ಬೆಳೆಯುತ್ತಿದೆ. ಆರ್ಥಿಕತೆಯ ಬೆಳವಣಿಗೆಯ ಜೊತೆಗೆ ಶೈಕ್ಷಣಿಕವಾಗಿಯೂ ದಾಪುಗಾಲಿಟ್ಟಿದ್ದೇವೆ. ವಿದೇಶಿಗರೂ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಅಪ್ಪಿಕೊಳ್ಳುವ ಸನ್ನಿವೇಶ ನಿರ್ಮಾಣವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸ್ಮರಣೆ: ವಜ್ರ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಮಠದೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲ ಮನೋಜ್ ಸಿನ್ಹಾ ಅವರು, ಜಗದ್ಗುರು ಶಿವಾರಾತ್ರೀಶ್ವರರ ಹಾಗೂ ಶ್ರೀ ರಾಜೇಂದ್ರ ಸ್ವಾಮೀಜಿಯವರ ಸ್ಟ್ಯಾಂಪ್ ಬರುವುದರಲ್ಲಿ ನೀಡಿದ ಸಹಕಾರ ಮಹತ್ವದ್ದಾಗಿದೆ ಎಂದು ಸ್ಮರಿಸಿದರು.

ಶಾಸಕ ಎಲ್.ನಾಗೇಂದ್ರ ಸಂಸ್ಥೆಯ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ್ ಮಠ್, ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ವಿಭಾಗದ ಸಲಹೆಗಾರ ಎಂ.ಎಚ್. ಧನಂಜಯ, ನಿರ್ದೇಶಕ ಡಾ.ಬಿ.ಸುರೇಶ್, ಉಪ ಕುಲಪತಿ ಡಾ.ಎ.ಎನ್.ಸಂತೋಷ್ ಕುಮಾರ್, ಪ್ರಾಂಶುಪಾಲ ಕಿವಾಡೆ, ಪ್ರದೀಪ್ ಮತ್ತಿತರರಿದ್ದರು.



ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾಲಯದ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ವಜ್ರ ಮಹೋತ್ಸವ ಕಾರ್ಯಕ್ರಮವನ್ನು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗೌರ್ನರ್ ಮನೋಜ್ ಸಿನ್ಹಾ ಉದ್ಘಾಟಿಸಿದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕ ಎಲ್.ನಾಗೇಂದ್ರ, ಸಂಸ್ಥೆಯ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟ್‌ಸೂರ್ ಮಠ್, ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ವಿಭಾಗದ ಸಲಹೆಗಾರ ಎಂ.ಹೆಚ್.ಧನಂಜಯ, ನಿರ್ದೇಶಕ ಡಾ.ಬಿ.ಸುರೇಶ್, ಉಪ ಕುಲಪತಿ ಡಾ.ಎ.ಎನ್.ಸಂತೋಷ್ ಕುಮಾರ್ ಮತ್ತಿತರರಿದ್ದರು.

> ಜೆಎಸ್‌ಎಸ್ ಮಹಾವಿದ್ಯಾಪೀಠವು ಶಿಕ್ಷಣದ ಮಹತ್ವ ಅರಿತು 6 ದಶಕಗಳ ಹಿಂದೆಯೇ ಮೈಸೂರಿನಲ್ಲಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಿರುವುದು ಶ್ಲಾಘನೀಯ. 300 ಶಿಕ್ಷಣ ಸಂಸ್ಥೆಗಳೊಂದಿಗೆ ವಿಶ್ವ ಮಟ್ಟದಲ್ಲಿ ಸುದ್ದಿಯಲ್ಲಿರುವ ವಿದ್ಯಾಪೀಠವು ಮತ್ತಷ್ಟು ವೈಜ್ಞಾನಿಕತೆಗಳೊಂದಿಗೆ ಬೆಳೆದು ನಿಲ್ಲಲಿ.
>
> “ -ಮನೋಜ್ ಸಿನ್ಹಾ, ಲೆಫ್ಟಿನೆಂಟ್ ಗೌರ್ನರ್ ಜಮ್ಮು ಮತ್ತು ಕಾಶ್ಮೀರ

ಬಹುಮಾಧ್ಯಮ ಸಂಪನ್ಮೂಲ ಕೇಂದ್ರ ಉದ್ಘಾಟನೆ...

ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ 'ಬಹುಮಾಧ್ಯಮ ಸಂಪನ್ಮೂಲ ಕೇಂದ್ರ'ವನ್ನು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗೌರ್ನರ್ ಮನೋಜ್ ಸಿನ್ಹಾ ಉದ್ಘಾಟಿಸಿದರು. ಅತ್ಯಾಧುನಿಕ ಡಿಜಿಟಲ್ ಕ್ಯಾಮೆರಾಗಳು, ವಿಡಿಯೋ ರೆಕಾರ್ಡಿಂಗ್ ಸ್ಟುಡಿಯೋ ಸೇರಿದಂತೆ ಬಹುಮಾಧ್ಯಮ ಸಂಪನ್ಮೂಲಗಳನ್ನು ಒಳಗೊಂಡ ಕೇಂದ್ರದಲ್ಲಿ ಅತಿಥಿ ಉಪನ್ಯಾಸಕರಿಂದ ವಿಶೇಷ ತರಗತಿಗಳ ನಡೆಸಲು ಬಳಕೆ ಮಾಡಲಾಗುವುದು.

ಚಿಂತನ–ಮಂಥನ ಕಾರ್ಯಕ್ರಮ

ಮೈಸೂರು,ಫೆ.11(ಪಿಎಂ)– 'ನಾಗರಿಕರೊಂದಿಗೆ ನಾಳಿನ ಚಿಂತನೆ, ಜನತಾದಳದಿಂದ ಜನಹಿತ ಕಾರ್ಯಕ್ರಮ' ಶೀರ್ಷಿಕೆಯಡಿ ಫೆ.13ರಂದು ವಿಧಾನಸಭಾ ಚುನಾವಣೆಯ ಜೆಡಿಎಸ್‌ನ ಕೆಆರ್ ಕ್ಷೇತ್ರದ ಅಭ್ಯರ್ಥಿ ಕೆ.ವಿ.ಮಲ್ಲೇಶ್ ನೇತೃತ್ವದಲ್ಲಿ ಚಿಂತನ–ಮಂಥನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಕುವೆಂಪುನಗರದ ಯಜಮಾನ ಕಲ್ಯಾಣ ಮಂಟಪದಲ್ಲಿ ಸಂಜೆ 5ಕ್ಕೆ ನಡೆಯಲಿದೆ.

ಐಟಿಐಗಳ ಹೋರಾಟಕ್ಕೆ ನನ್ನ ಬೆಂಬಲವಿದೆ...!

ವಿಧಾನಪರಿಷತ್ ಸಭಾಪತಿ ಬಸವರಾಜು ಹೊರಟ್ಟಿ ಅಭಯ



ಮೈಸೂರು, ಫೆ.11(ಜಿಎ)– ಬಡವರು ಹಾಗೂ ಮಧ್ಯಮ ವರ್ಗದ ಮಕ್ಕಳಿಗೆ ಬದುಕು ಕಟ್ಟಿಕೊಳ್ಳಲು ಐಟಿಐ ಕೋರ್ಸ್‌ಗಳು ನೆರವಾಗಿದ್ದು, ಐಟಿಐ ಕಲಿತವರು ಸ್ವಂತ ಕಾಲ ಮೇಲೆ ನಿಲ್ಲಬಹುದು ಎಂದು ತಿಳಿಸಿರುವ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ನಿಮ್ಮ ಹೋರಾಟಕ್ಕೆ ನನ್ನ ಬೆಂಬಲವಿದೆ ಎಂದರು.

ಮೈಸೂರಿನ ಕುವೆಂಪು ನಗರದ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ರಾಜ್ಯ ಅನುದಾನಿತ ಐಟಿಐ ನೌಕರರ ಸಂಘ ಮತ್ತು ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲಾ ಅನುದಾನಿತ ಐಟಿಐ ನೌಕರರ ಸಂಘ ಹಾಗೂ ಎಸ್. ಆರ್.ರವಿ ಅಭಿಮಾನಿಗಳು ಮತ್ತು ಗೆಳೆಯರ ಬಳಗದಿಂದ ಶನಿವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಐಟಿಐ ಸಂಸ್ಥೆಗಳನ್ನು ನಡೆಸುತ್ತಿರುವವರು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಹಿಂದಿನಿಂದಲೂ ಸಹಕಾರ ನೀಡಿದ್ದೇನೆ. ಸಭಾಪತಿಯಾಗಿ, ಹಲವು ಸಂದರ್ಭಗಳಲ್ಲಿ ಶಾಸಕನಂತೆ ಮಾತನಾಡಲು ಸಾಧ್ಯವಾಗುವುದಿಲ್ಲ ಆದರೆ, ಅನ್ಯಾಯವಾದಾಗ ಸಹಿಸುವುದಿಲ್ಲ ಅನುದಾನಿತ ಹಾಗೂ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆ(ಐಟಿಐ)ಗಳು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ. ನ್ಯಾಯಯುತವಾದ ಹೋರಾಟ ಮತ್ತು ಬೇಡಿಕೆಗಳಿಗೆ ನನ್ನ ಸಹಕಾರ ಹಾಗೂ ಬೆಂಬಲ ಸದಾ ಇರುತ್ತದೆ ಎಂದು ಭರವಸೆ ನೀಡಿದರು.

ಹಿಂದೆ ಖಾಸಗಿ ಐಟಿಐಗಳಿಗೆ ಅನುದಾನ ಬರುತ್ತಿರಲಿಲ್ಲ. ನೌಕರರಿಗೆ ಉದ್ಯೋಗ ಭದ್ರತೆಯೇ ಇರಲಿಲ್ಲ. ಹೋರಾಟದಿಂದಾಗಿ ನೀವು ಕೆಲಸ ಉಳಿಸಿಕೊಂಡಿದ್ದೀರಿ. ಹೋರಾಟದ ಮನೋಭಾವವನ್ನು ಬಿಡಬಾರದು. ಅನುದಾನರಹಿತ ಐಟಿಐನವರಿಗೂ ನೀವು ಸಾಥ್ ಕೊಡಬೇಕು ಎಂದು ಸಲಹೆ ನೀಡಿದ ಅವರು ಹಳೆಯ ಪಿಂಚಣಿ ವ್ಯವಸ್ಥೆ (ಒಪಿಎಸ್) ಜಾರಿಗೆ ತರಲಾಗುವುದಿಲ್ಲ ಎಂದು ಮುಖ್ಯಮಂತ್ರಿಯೇ ಸ್ಪಷ್ಟವಾಗಿ ಹೇಳಿದ್ದಾರೆ. ಆದರೂ ಹೋರಾಟ ನಡೆಯುತ್ತಿಲ್ಲವೇ? ಅನ್ಯಾಯ ಸರಿಪಡಿಸಲು ನಿಮ್ಮೊಂದಿಗೆ ಇರುತ್ತೇನೆ ಎಂದು ಭರವಸೆ ನೀಡಿದರು.

ಈ ವೇಳೆ ಶಾಸಕ ತನ್ವೀರ್ ಸೇಠ್ ಮಾತನಾಡಿ, ಐಟಿಐ ಶಿಕ್ಷಕರು ವಿದ್ಯಾರ್ಥಿಗಳಿಗೆ ತಂತ್ರಜ್ಞಾನದ ಬಗ್ಗೆ ಸರಿಯಾದ ಮಾಹಿತಿ ನೀಡಬೇಕು. ರಾಜ್ಯಾದ್ಯಂತ 130ಕ್ಕೂ ಅಧಿಕ ಇಂಜಿನಿಯರಿಂಗ್ ಕಾಲೇಜುಗಳಿವೆ. ಅವುಗಳಲ್ಲಿಯೂ ಐಟಿಐ ಕೋರ್ಸ್‌ಗಳನ್ನು ಅಳವಡಿಸಬೇಕು. ಇದರಿಂದ ಐಟಿಐ ಮಾಡುವ ಬಡ ವಿದ್ಯಾರ್ಥಿಗಳು ಹಾಗೂ ಐಟಿಐ ಮುಗಿಸಿ ಬಂದವರಿಗೆ ಹೆಚ್ಚು ಅವಕಾಶ ದೊರೆಯುತ್ತಿದೆ ಎಂದರು.

2006ರ ನಂತರ ಅನುದಾನಕ್ಕೆ ಒಳಪಟ್ಟ ಐಟಿಐಗಳ ನೌಕರರಿಗೆ ಪಿಂಚಣಿ ಸೌಲಭ್ಯ ಒದಗಿಸುವಂತೆ ಆಗ್ರಹಿಸಿ ಸಭಾಪತಿಗೆ ಮನವಿ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಪುಟ್ಟಣ್ಣ, ರಾಜ್ಯ ಅನುದಾನಿತ ಐಟಿಐ ನೌಕರರ ಸಂಘದ ಅಧ್ಯಕ್ಷ ಎಸ್.ಆರ್.ರವಿ ಉದ್ಯಮಿ ವಿ.ಕುಮಾರ್ ಸೇರಿದಂತೆ ಮತ್ತಿತರರಿದ್ದರು.

ಶಿಫಾರಸ್ಸಿಲ್ಲದೆ ಸಾಧಕರಿಗೆ ಸಂದಿವೆ ಪದ್ಮ ಪ್ರಶಸ್ತಿಗಳು

ನೈಜ ಸಾಧಕರಿಗೆ ಸಂದ ಗೌರವಕ್ಕೆ ಸುತ್ತೂರು ಶ್ರೀಗಳ ಸಂತಸ

ಮೈಸೂರು, ಫೆ11(ಎಸ್‌ಬಿಡಿ)– ಪ್ರಸ್ತಾವನೆ, ಶಿಫಾರಸು ಇಲ್ಲದೆಯೇ ಸಾಧಕರನ್ನು ಗುರುತಿಸಿ ಪದ್ಮ ಪ್ರಶಸ್ತಿ ನೀಡಿ ಗೌರವಿಸಿರುವುದು ಬಹಳ ಜನರಲ್ಲಿ ಆಶ್ಚರ್ಯ ಉಂಟು ಮಾಡಿದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಅಖಿಲ ಭಾರತೀಯ ಸಾಹಿತ್ಯ ಪರಿಷತ್, ಹೆಚ್.ವಿ.ರಾಜೀವ್ ಸ್ನೇಹ ಬಳಗ, ಹೊಯ್ಸಳ ಕರ್ನಾಟಕ ಸಂಘ ಹಾಗೂ ವಿವಿಧ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ಆಯೋಜಿಸಿದ್ದ 'ವಂದನೆ –ಅಭಿನಂದನೆ' ಪದ್ಮ ಪುರಸ್ಕೃತರಿಗೆ ಆತ್ಮೀಯ ಗೌರವ ಕಾರ್ಯಕ್ರಮದಲ್ಲಿ ಮಾತನಾಡಿ, ರಾಷ್ಟ್ರ, ರಾಜ್ಯ, ಜಿಲ್ಲೆ ಮಟ್ಟದಲ್ಲಿ ಸರ್ಕಾರ, ಮಠಮಾನ್ಯಗಳು, ಸಂಘ–ಸಂಸ್ಥೆಗಳ ಮೂಲಕ ವಿವಿಧ ಕ್ಷೇತ್ರದ ಸಾಧಕರನ್ನು ಗುರುತಿಸಿ ಅಭಿನಂದಿಸುವ ಮೂಲಕ ಸಮಾಜಕ್ಕೆ ಪ್ರೇರಣೆ ನೀಡುವ ಸತ್ಕಾರ್ಯ ನಡೆದು ಬಂದಿದೆ. ಹಾಗೆಯೇ ಭಾರತ ಸರ್ಕಾರ ಕೊಡಮಾಡುವ ಪದ್ಮ ಪ್ರಶಸ್ತಿಗಾಗಿ ಹಲವು ಅರ್ಜಿ, ಪ್ರಸ್ತಾವನೆ ಸಲ್ಲಿಕೆಯಾಗಿದ್ದವು. ಆದರೆ ಪ್ರಸ್ತಾವನೆ, ಶಿಫಾರಸು ಮೀರಿ ಯಾರಿಗೂ ಕಾಣಿಸದಂತೆ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರನ್ನು ಗುರುತಿಸಿ, ನಿಜವಾದ ಅರ್ಹರನ್ನು ಹುಡುಕಿ ಪ್ರಶಸ್ತಿ ನೀಡಿರುವುದು ಬಹಳ ಜನರಲ್ಲಿ ಆಶ್ಚರ್ಯ ಉಂಟು ಮಾಡಿದೆ. ಪ್ರಶಸ್ತಿ ಪುರಸ್ಕೃತರೂ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು.

ಪತ್ತೆದಾರಿ ಕಾದಂಬರಿಗಳ ಕಾಲಮಾನದಲ್ಲಿ ಐತಿಹಾಸಿಕ ಹಾಗೂ ಪ್ರಚಲಿತ ವಸ್ತುವಿನ ಆಧಾರದಲ್ಲಿ ಓದುಗರನ್ನು ಸೆಳೆದಿರುವುದಕ್ಕೆ ಎಸ್.ಎಲ್.ಭೈರಪ್ಪನವರ ಕಾದಂಬರಿಗಳು ಸಾಕ್ಷಿ. ಸಂಗೀತ, ನೃತ್ಯದ ಬಗ್ಗೆ ಅವರಲ್ಲಿದ್ದ ಜ್ಞಾನವನ್ನು ಶ್ರೀ ಸಿದ್ಧೇಶ್ವರ ಸ್ವಾಮೀಜಿ ಅವರೂ ಪ್ರಶಂಸಿಸಿದ್ದರು. ಸಿರಿಧಾನ್ಯ ಆಹಾರದ ಪಿತಾಮಹರೆನಿಸಿಕೊಂಡಿರುವ ಡಾ.ಖಾದರ್ ಅವರು ಆಹಾರ ಕ್ರಮ ಸರಿಯಾಗಿದ್ದರೆ ಔಷಧಿ ಅಗತ್ಯವಿಲ್ಲ ಎಂದು ತಿಳಿಸಿಕೊಟ್ಟಿದ್ದಾರೆ.



ಪುರಾತತ್ವ ಇಲಾಖೆಯಲ್ಲಿ ಸುಬ್ಬರಾಮನ್ ಅವರ ಸೇವೆ ಅವಿಸ್ಮರಣೀಯ. ಪ್ರಾಚೀನ ಚಿತ್ರಕಲೆಯನ್ನು ಸೂಕ್ಷ್ಮ ರೀತಿಯಲ್ಲಿ ಸಂರಕ್ಷಣೆ ಮಾಡಿರುವ ಇವರಿಗೆ ಹಸ್ತ ಪ್ರತಿಗಳ ಸಂರಕ್ಷಣೆ ಬಗ್ಗೆಯೂ ಅಪಾರ ಅರಿವಿದೆ. ವರದರಾಜ ಅಯ್ಯಂಗಾರ್ ಅವರ ಸೊಸೆ ವಿದುಷಿ ಜಯಲಕ್ಷ್ಮೀ ಅವರ ಸಂಸ್ಕೃತ ಸಾಹಿತ್ಯ ಸೇವೆಯೂ ಪ್ರಶಂಸನೀಯ. ಇಂತಹ ಸಾಧಕರನ್ನು ಅಭಿನಂದಿಸುತ್ತಿರುವುದು ಸಂತಸದ ಸಂಗತಿ ಎಂದು ನುಡಿದರು.

ಭೈರಪ್ಪ ವಿಶ್ವ ಸಾಹಿತಿ: ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣ ಮಾಡಿದ ಕುವೆಂಪು ಭಾಷಾಭಾರತಿ ವಿಶ್ರಾಂತ ಮುಖ್ಯಸ್ಥ ಡಾ.ಪ್ರಧಾನ ಗುರುದತ್ತ ಅವರು, ಎಸ್.ಎಲ್.ಭೈರಪ್ಪ ಹೊಗಳಿಕೆಗೆ ಮೀರಿದ ಸಾಧಕರು. ಇವರ ಬಹುತೇಕ ಎಲ್ಲಾ ಕೃತಿಗಳೂ ಮರಾಠಿಗೆ ಭಾಷಾಂತರವಾಗಿವೆ. ಹಾಗಾಗಿ ಅಲ್ಲಿನ ಜನ ಇವರನ್ನು ಕನ್ನಡದಲ್ಲಿ ಬರೆಯುವ ಮರಾಠಿ ಸಾಹಿತಿ ಎನ್ನುತ್ತಾರೆ. ದ.ರಾ.ಬೇಂದ್ರೆಯವರನ್ನೂ ಹೀಗೆ ಭಾವಿಸಿದ್ದರು. ಇಂಗ್ಲಿಷ್, ಉರ್ದು, ಸಂಸ್ಕೃತ, ಲಿಪಿ ಇಲ್ಲದ ಸಂಕೇತಿ ಭಾಷೆಗೂ ಭಾಷಾಂತರವಾಗಿವೆ. ವಿದ್ವನ್ಮಣಿಗಳು ಹಾಗೂ ಸಾಮಾನ್ಯರಿಗೆ ಪ್ರಿಯವಾಗುವ ಸಾಧನೆ ಮಾಡಿದವರನ್ನು ಜನಪ್ರಿಯ ಎನ್ನುತ್ತಾರೆ. ಹೀಗೆ ಜನಪ್ರಿಯರಾದ ಭೈರಪ್ಪನವರ ಪುಸ್ತಕಗಳ ಮರುಮುದ್ರಣ ಶತಮಾನ ಕಳೆದರೂ ಮೀರಿಸಲಾಗದ ಸಾಧನೆಯಾಗಿದೆ. 'ಆವರಣ' ಕಾದಂಬರಿ ಮಲೆಯಾಳಂ ಸಾಹಿತ್ಯ ವಲಯದಲ್ಲಿ ಸಂಚಲನ ಮೂಡಿಸಿದ್ದನ್ನು ಅಲ್ಲಿನ ವಿಮರ್ಶಕರೇ ಹೇಳಿದ್ದಾರೆ. ಅಸ್ಸಾಂ ಸಿಎಂ ಪತ್ರ ಬರೆದು ಅಭಿನಂದಿಸಿದರು. ಇವರೆಂದೂ ಪ್ರಶಸ್ತಿ ಬೆನ್ನತ್ತಿ ಹೋದವರಲ್ಲ. ಹಲವು ಬಾರಿ ವಿನಯವಾಗಿ ನಿರಾಕರಿಸಿ, ತರುಣ ಸಾಧಕರ ಪ್ರೋತ್ಸಾಹಿಸಲು ಕೋರಿದ್ದಾರೆ. ತಮ್ಮ ಹುಟ್ಟೂರಿಗೆ ನೀರು ಕಲ್ಪಿಸಲು ಸರ್ಕಾರವನ್ನು ಆಗ್ರ ಹಿಸಿದ್ದು, ಅದು ಸಾಕಾರ ವಾಗುತ್ತಿದೆ. ಪುಸ್ತಕಗಳಿಂದ ಬಂದ ಗೌರವಧನವನ್ನು ತಾಯಿಯ ಹೆಸರಿನ ಪ್ರತಿಷ್ಠಾನಕ್ಕೆ ನೀಡಿದ್ದಾರೆ. ದೇಹಕ್ಕೆ ವಯಸ್ಸಾದರೂ ಯಶಸ್ಸಿಗೆ ಮುಪ್ಪು, ಸಾವಿಲ್ಲ ಎನ್ನುವ ಸಾಲಿಗೆ ಸೇರಿದವರಿವರು. ಇವರ ಕೃತಿ ಗಳು ರಷ್ಯನ್ ಹಾಗೂ ಚೀನಿ ಭಾಷೆಗಳಿಗೂ ಭಾಷಾಂತವಾಗಿವೆ. ಭೈರಪ್ಪನವರು ಪ್ರಾದೇಶಿಕ, ರಾಷ್ಟ್ರ ಮೀರಿದ ವಿಶ್ವ ಸಾಹಿತಿ ಎಂದು ಎಂದು ಬಣ್ಣಿಸಿದರು.

ಹೀಗೆ ಮಾಡಿದರೆ ಆಸ್ಪತ್ರೆ ಮುಚ್ಚುತ್ತವೆ: ಅಭಿನಂದಿತರಾದ ಡಾ.ಖಾದರ್ ಅವರು ಮಾತನಾಡಿ, ಕಳೆದ 75 ವರ್ಷಗಳಿಂದ ಕಾರ್ಪೊರೇಟ್ ಕಂಪನಿಗಳ ಷಡ್ಯಂತ್ರದಿಂದ ಕೃತಕ ಆಹಾರ ಪದಾರ್ಥಗಳನ್ನು ಸೇವಿಸುತ್ತಿದ್ದೇವೆ. ಈ ಬಗ್ಗೆ 25 ವರ್ಷಗಳಿಂದ ವೈಜ್ಞಾನಿಕ ಪ್ರಯೋಗಳ ಮೂಲಕ ಸಾಬೀತುಪಡಿಸಲಾಗಿದೆ. ಮಧುಮೇಹ ವಾಸಿಯಾಗದ ರೋಗ ಎಂದು ಪ್ರಪಂಚಕ್ಕೆ ಸಾರಲಾಗಿದೆ. ಆದರೆ ಅವೈಜ್ಞಾನಿಕ, ಕೆಟ್ಟ ಆಹಾರ ಸೇವಿಸುವುದನ್ನು ಬಿಟ್ಟರೆ 30 ದಿನಗಳಲ್ಲಿ ಮಧುಮೇಹ ವಾಸಿಯಾಗುತ್ತದೆ. ಆಹಾರ ಸರಿಯಿಲ್ಲದಿದ್ದರೆ ಯಾವ ಔಷಧಿಯೂ ಕೆಲಸ ಮಾಡುವುದಿಲ್ಲ. ಸಿರಿಧಾನ್ಯಗಳ ರಕ್ತದ ಸಮತೋಲನ ಸಮರ್ಪಕವಾಗಿಸಿ ಕಾಯಿಲೆಗಳನ್ನು ತಡೆಯುತ್ತವೆ. ಎರಡೂ ವರೆ ದಶಕಗಳ ಜಾಗೃತಿ ಪರಿಣಾಮ ಶೇ.2–3ರಷ್ಟು ಜನ ಸಿರಿಧಾನ್ಯ ಬಳಸುತ್ತಿದ್ದಾರೆ. ಎಲ್ಲರೂ ಉತ್ತಮ ಆಹಾರ ಕ್ರಮ ಅನುಸರಿಸಿದರೆ 20–30 ವರ್ಷಗಳಲ್ಲಿ ಆಸ್ಪತ್ರೆಗಳು ಮುಚ್ಚುತ್ತವೆ ಎನ್ನುವುದು ನನ್ನ ದೃಢವಾದ ನಂಬಿಕೆ ಎಂದರು.

ಅಮೂಲ್ಯವಾದುವುಗಳ ಸಂರಕ್ಷಣೆ: ಪದ್ಮಶ್ರೀ ಪುರಸ್ಕೃತರಾದ ಪುರಾತತ್ವ ಇಲಾಖೆ ನಿವೃತ್ತ ನಿರೀಕ್ಷಕ ಡಾ.ಎಸ್. ಸುಬ್ಬರಾಮನ್ ಅವರು ಮಾತನಾಡಿ, ಅಜಂತ ಗುಹೆಗಳಲ್ಲಿನ ಪುರಾತನ ಚಿತ್ರಗಳ ಸಂರಕ್ಷಣೆ, ಹೈದರಾಬಾದ್ ನಿಜಾಮರಿಂದ ಪುರಾತತ್ವ ಚಿತ್ರಗಳ ಸಂರಕ್ಷಣಾ ಪ್ರಯತ್ನ, ಕನಿಷ್ಕ ಚಕ್ರವರ್ತಿ ಆಳ್ವಿಕೆ ಪ್ರದೇಶದಲ್ಲಿದ್ದ 139 ಹಾಗೂ 189 ಅಡಿ ಎತ್ತರದ ಬುದ್ಧನ ವಿಗ್ರಹ ಸಂರಕ್ಷಣೆ ಕಾರ್ಯದಲ್ಲಿ ಭಾಗಿಯಾಗಿದ್ದು ಹೀಗೆ ಹಲವು ವಿಚಾರಗಳನ್ನು ಸ್ಮರಿಸಿಕೊಂಡರು.

ಸಂಸ್ಕೃತ ಪತ್ರಿಕೆಗೆ ಸಹಕಾರ: ಪದ್ಮಶ್ರೀ ಪುರಸ್ಕೃತ ಸುಧರ್ಮಾ ಸಂಸ್ಕೃತ ಪತ್ರಿಕೆ ಸಂಪಾದಕಿ ಜಯಲಕ್ಷ್ಮೀ ಅವರು ಮಾತನಾಡಿ, ಈ ಪ್ರಶಸ್ತಿ ಸುಧರ್ಮಾ ಪತ್ರಿಕೆಯ ಪ್ರತಿಯೊಬ್ಬ ಓದುಗರಿಗೂ ಸಲ್ಲುತ್ತದೆ. ಹೆಚ್.ವಿ.ನಾಗರಾಜರಾವ್ ಅವರ ಮಾರ್ಗದರ್ಶನ ಮರೆಯಲಾಗದು. ಪತ್ರಿಕೆ ಬೆಳವಣಿಗೆಗೆ ಪ್ರತಿಯೊಬ್ಬರ ಸಹಕಾರ ಅತ್ಯಗತ್ಯ ಎಂದು ಮನವಿ ಮಾಡಿದರು.

ಆತ್ಮೀಯ ಅಭಿನಂದನೆ: ಸಮಾರಂಭದಲ್ಲಿ ಪದ್ಮಭೂಷಣ ಪುರಸ್ಕೃತರಾದ ಡಾ.ಎಸ್.ಎಲ್.ಭೈರಪ್ಪ, ಸಿರಿಧಾನ್ಯ ಆಹಾರ ಪಿತಾಮಹರೆಂದು ಪ್ರಸಿದ್ಧರಾಗಿರುವ ಪದ್ಮಶ್ರೀ ಪುರಸ್ಕೃತ ಡಾ.ಖಾದರ್ ವಲ್ಲಿ ಡಿದೇಕುಲಾ, ಪದ್ಮಶ್ರೀ ಪುರಸ್ಕೃತರಾದ ಪುರಾತತ್ವ ಇಲಾಖೆ ನಿವೃತ್ತ ನಿರೀಕ್ಷಕ ಡಾ.ಎಸ್.ಸುಬ್ಬರಾಮನ್ ಹಾಗೂ ಈ ಹಿಂದೆ ಪದ್ಮಶ್ರೀ ಪುರಸ್ಕಾರಕ್ಕೆ ಭಾಜನರಾಗಿರುವ ಸುಧರ್ಮಾ ಸಂಸ್ಕೃತ ಪತ್ರಿಕೆ ಸಂಪಾದಕಿ ಜಯಲಕ್ಷ್ಮೀ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಇದೇ ವೇಳೆ ಸುತ್ತೂರು ಶ್ರೀಗಳೂ ಮಠದ ಪರವಾಗಿ ಅಭಿನಂದಿಸಿದರು. ಪುರಾತತ್ವ, ಇತಿಹಾಸ ಸಂಶೋಧಕರಾದ ಡಾ.ಹೆಚ್.ವಿ. ನಾಗರಾಜರಾವ್, ಪ್ರಾಚೀನ ಇತಿಹಾಸ ತಜ್ಞ ಡಾ.ರೋಹಿತ್ ಈಶ್ವರ್, ನೈಸರ್ಗಿಕ ಕೃಷಿಕ ಹೊನ್ನೂರು ಪ್ರಕಾಶ್ ಅಭಿನಂದಿತರ ಕುರಿತು ಮಾತನಾಡಿದರು. ಮುಡಾ ಮಾಜಿ ಅಧ್ಯಕ್ಷರೂ ಆದ ಕಾರ್ಯಕ್ರಮ ಸಂಚಾಲಕ ಹೆಚ್.ವಿ.ರಾಜೀವ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ವಿಶೇಷ ಮಕ್ಕಳೂ ಕೂಡ ಎಷ್ಟೋ ಸಾಧನೆ ಮಾಡಿದ್ದಾರೆ: ಎಂಎಲ್‌ಸಿ ಮಂಜೇಗೌಡ



ಮೈಸೂರು, ಫೆ. 11– ವಿಶೇಷ ಮಕ್ಕಳು ದೇವರ ಮಕ್ಕಳಾಗಿದ್ದು, ತಂದೆ ತಾಯಿಯರು ಧೈರ್ಯಗೆಡದೆ ಅವರನ್ನು ನೋಡಿಕೊಳ್ಳಿರಿ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಸಲಹೆ ನೀಡಿದರು. ನಗರದ ಸರಸ್ವತಿಪುರಂನಲ್ಲಿರುವ ಸ್ವ–ಸಹಾಯ ಸಮುಚ್ಚಯ ನಿರೀಕ್ಷೆ ವಿಶೇಷ ಮಕ್ಕಳ ಶಾಲೆಯಲ್ಲಿ ನಡೆದ 36ನೇ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಚೆನ್ನಾಗಿರುವ ಮಕ್ಕಳಿಗೆ ಪಾಠ ಮಾಡುವುದೇ ಕಷ್ಟದ ಕೆಲಸವಾಗಿದ್ದು. ಇಂತಹ ಸಂದರ್ಭದಲ್ಲಿ ವಿಶೇಷ ಮಕ್ಕಳಿಗೆ ಪಾಠ ಹೇಳಿ, ಬುದ್ಧಿ ಕಲಿಸಿ ಈ ಸಮಾಜಕ್ಕೆ ಕೊಡುಗೆಯಾಗಿ ನೀಡುತ್ತಿರುವ ಈ ಸಂಸ್ಥೆ ನೂರು ವರ್ಷ ಚೆನ್ನಾಗಿ ನಡೆಯಲಿ. ವಿಶೇಷಮಕ್ಕಳಿಗೆ ಜನ್ಮ ನೀಡಿದ ತಂದೆ ತಾಯಂದಿರು ಎದೆಗುಂದಬೇಕಾಗಿಲ್ಲ. ವಿಶೇಷ ಮಕ್ಕಳು ಇಂದು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕ್ರೀಡೆ, ಸಂಗೀತಾ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಆದ್ದರಿಂದ ಆ ಮಕ್ಕಳ ಭವಿಷ್ಯದ ಬಗ್ಗೆ ತಾಯಂದಿರು ಚಿಂತೆ ಮಾಡಬೇಡಿ ಮುಂದೆ ಅವರನ್ನು ಭಗವಂತ ನೋಡಿಕೊಳ್ಳುತ್ತಾನೆ ಎಂದ ಅವರು, ಮುಡಾದಿಂದ ಸಂಸ್ಥೆಗೆ ಮಂಜೂರಾಗಿರುವ ಜಾಗದಲ್ಲಿ ಶಾಲೆ. ನಿರ್ಮಿಸಲು ವಿಧಾನಪರಿಷತ್ ಸದಸ್ಯರ ಅನುದಾನದಲ್ಲಿ 10 ಲಕ್ಷ ರೂ.ಗಳನ್ನು ನೀಡುವುದಾಗಿ ಭರವಸೆ ನೀಡಿದರು.

ಬೇಬಿ ಮಠದ ಪೀಠಾಧಿಪತಿಗಳಾದ ಡಾ॥ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಮಾತನಾಡಿ, ಭಗವಂತ ವಿಶೇಷ ಮಕ್ಕಳ ತಂದೆ ತಾಯಿಯರ ತಾಳ್ಮೆಯನ್ನು ಪರೀಕ್ಷೆ ಮಾಡಲು ಕೊಟ್ಟಿರುವ ಪರೀಕ್ಷೆ ಇದಾಗಿದ್ದು, ವಿಶೇಷ ಮಕ್ಕಳನ್ನು ಸವಾಲಾಗಿ ಸ್ವೀಕರಿಸಿ, ಎದೆಗುಂದಬೇಡಿ ಎಂದ ಅವರು, ಈ ಮಕ್ಕಳಿಗೆ ಬುದ್ದಿ ಹೇಳಿ, ತಿದ್ದಿ ತೀಡುವ ಶಾಲೆಯ ಶಿಕ್ಷಕರು ಎರಡನೇ ತಾಯಿಯಾಗಿದ್ದಾರೆ ಎಂದರು.

ಸಮಾರಂಭದಲ್ಲಿ ಶಾಲೆಯ ಗೌರವ ಅಧ್ಯಕ್ಷೆ ಸವಿನಾ, ಕಾರ್ಯದರ್ಶಿ ತ್ರಿಮೂರ್ತಿ, ಖಜಾಂಚಿ ಕೆ.ಎ. ಮುತಾಲಿಕ್, ಕೆ.ಎ. ಪಾಂಡುರಂಗಶೆಟ್ಟಿ ಬಿ.ಎಸ್. ಜಗನಾಥ್ ಉಪಸ್ಥಿತರಿದ್ದರು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಕೆ.ಆರ್.ಕ್ಷೇತ್ರ ಮಧುಮೇಹ ಮುಕ್ತ ಮಾಡಲು ನೆರವಾಗಿ

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ. ಜಿ.ಮನ್ಸುಖ್ ಮಾಂಡವಿಯಾ ಅವರಲ್ಲಿ ಶಾಸಕ ರಾಮದಾಸ್ ಮನವಿ



ಮೈಸೂರು, ಫೆ11(ಎಂಟಿವೈ)–ಮೈಸೂರಿನ ಕೆ.ಆರ್.ವಿಧಾನಸಭಾ ಕ್ಷೇತ್ರವನ್ನು ಮಧುಮೇಹ ಮುಕ್ತ ಕ್ಷೇತ್ರವನ್ನಾಗಿ ಮಾಡಲು ಕೈಗೊಂಡಿರುವ ಕ್ರಮಗಳ ಬಗ್ಗೆ ಶಾಸಕ ಎಸ್.ಎ.ರಾಮದಾಸ್, ಕೇಂದ್ರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ. ಜಿ.ಮನ್ಸುಖ್ ಮಾಂಡವಿಯಾ ಅವರಿಗೆ ವಿವರಿಸಿದ್ದಲ್ಲದೆ, ಅಗತ್ಯ ಸಹಕಾರ ಕೋರಿದ್ದಾರೆ.

ಇತ್ತೀಚೆಗೆ ದೆಹಲಿಗೆ ತೆರಳಿ ಕೇಂದ್ರ ಸಚಿವ ಡಾ. ಜಿ.ಮನ್ಸುಖ್ ಮಾಂಡವಿಯಾ ಅವರನ್ನು ಭೇಟಿ ಮಾಡಿರುವ ಶಾಸಕ ಎಸ್.ಎ.ರಾಮದಾಸ್, ಕೃಷ್ಣರಾಜ ವಿಧಾನ ಸಭಾ ಕ್ಷೇತ್ರವನ್ನು 'ಮಧುಮೇಹ ಮುಕ್ತ' ಕ್ಷೇತ್ರವಾಗಿಸಲು ಸಂಕಲ್ಪ ಮಾಡಿದ್ದು, ಅದಕ್ಕಾಗಿ ರೂಪಿಸಲಾದ ಯೋಜನೆಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ವಯಸ್ಕರಲ್ಲಿ ಸಾಂಕ್ರಾಮಿಕವಲ್ಲದ ರೋಗಗಳ ಬಗ್ಗೆ ವಿಶೇಷವಾಗಿ ಮಧುಮೇಹದ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಮೊಬೈಲ್ ಟೀಮ್ ಮೂಲಕ ನಿಯಮಿತವಾಗಿ 30 ವರ್ಷ ಮೇಲ್ಪಟ್ಟವರ ತಪಾಸಣೆ ನಡೆಸಲಾಗುತ್ತಿದೆ.

ಆರೋಗ್ಯ ಮತ್ತು ಆಯುಷ್ ಇಲಾಖೆ, ನ್ಯಾಚುರೋಪತಿ ಇಲಾಖೆಗಳ ಸಹಯೋಗದಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಜೀವನ ಶೈಲಿಯನ್ನು ಬದಲಿಸಿಕೊಳ್ಳಲು ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಆರೋಗ್ಯ ಜಾಗೃತಿಗೆ ಥೀಮ್ ಆಧಾರಿತ ಉದ್ಯಾನವನ ನಿರ್ಮಿಸಿ ದೈಹಿಕ ಕಸರತ್ತಿಗೆ ಉತ್ತೇಜಿಸಲಾಗಿದೆ. ಓಪನ್ ಜಿಮ್ನಾಷಿಯಂ, ವಾಕಿಂಗ್ ಪಾತ್‌ಗಳ ನಿರ್ಮಾಣ, ಮಧುಮೇಹಕ್ಕೆ ಸಂಬಂಧಿಸಿದ ಮಾಹಿತಿ ನೀಡಲು ಹೋರ್ಡಿಂಗ್ ಅಳವಡಿಸಲಾಗುತ್ತಿದೆ. ತಪ್ಪದೆ 30 ವರ್ಷ ಮೇಲ್ಪಟ್ಟವರಿಗೆ ಮಧುಮೇಹ ತಪಾಸಣೆ ನಡೆಸಲಾಗುತ್ತಿದೆ. ಮನೆ ಮನೆಯಲ್ಲಿ ಸಮೀಕ್ಷೆ ನಡೆಸಲಾಗಿದ್ದು, ಇದುವರೆಗೆ 24,313 ಮಧುಮೇಹಿ ರೋಗಿಗಳು ಪತ್ತೆಯಾಗಿದ್ದಾರೆ ಎಂದು ಕೇಂದ್ರ ಸಚಿವರಿಗೆ ಮಾಹಿತಿ ನೀಡಿದ್ದಾರೆ.

ಪತ್ತೆಯಾದ ಮಧುಮೇಹಿಗಳಿಗೆ ಔಷಧಿಗಳ ಪೂರೈಕೆ, ಸೂಕ್ತ ಚಿಕಿತ್ಸಾ ವಿಧಾನವನ್ನು ಮನವರಿಕೆ ಮಾಡಿಕೊಡಲಾಗುತ್ತಿದೆ. ಅಲ್ಲದೆ ರೋಗಿಗಳ ಕುಟುಂಬದ ಸದಸ್ಯರು ಮತ್ತು ಮಧುಮೇಹಿಗಳಿಗೆ ಸೂಕ್ತ ಸಲಹೆ ನೀಡಲಾಗುತ್ತಿದೆ. ಮಧುಮೇಹ ರೋಗಿಗಳಿಗೆ ಆರೋಗ್ಯ, ಅದರಲ್ಲೂ ಕಣ್ಣಿನ ತಪಾಸಣೆ, ಮೂತ್ರಪಿಂಡದ ಕಾರ್ಯಕ್ಷಮತೆ ಪರೀಕ್ಷೆ, ಲಿಪಿಡ್ ಪ್ರೊಫೈಲ್ ಪರೀಕ್ಷೆ, ಎಕೋ ಕಾರ್ಡಿಯೋಗ್ರಾಮ್ ಮತ್ತು ಯಕೃತ್ತಿನ ಕಾರ್ಯ ಪರೀಕ್ಷೆ ನಡೆಸಲಾಗುತ್ತಿದೆ. ಅಲ್ಲದೆ ಯೋಗಾಭ್ಯಾಸವನ್ನು ಉತ್ತೇಜಿಸುವುದು, ಅಲೋಪತಿ ಔಷಧ ಪದ್ಧತಿಯೊಂದಿಗೆ ಆಯುಷ್ ಪದ್ಧತಿಯನ್ನು ಅಳವಡಿಸಿಕೊಳ್ಳಲು ಸಲಹೆ ನೀಡಲಾಗುತ್ತಿದೆ. ಕ್ಷೇತ್ರದಲ್ಲಿ ಒಟ್ಟು 19 ವಾರ್ಡ್‌ಗಳಲ್ಲಿದ್ದು, ಎಲ್ಲಾ ವಾರ್ಡ್‌ಗಳಲ್ಲೂ ಆರೋಗ್ಯ ತಪಾಸಣೆ ಶಿಬಿರ ನಡೆಸಲಾಗಿದೆ. 400ಕ್ಕೂ ಹೆಚ್ಚು ಜನರಿಗೆ ಕಣ್ಣಿನ ಪೊರೆ ಸಮಸ್ಯೆ ಕಂಡು ಬಂದಿದ್ದು, ದಿನಕ್ಕೆ 30 ಜನರಿಗೆ ಎಸ್‌ಎಂಟಿ ಆಸ್ಪತ್ರೆಯಲ್ಲಿ ಉಚಿತವಾಗಿ ಶಸ್ತ್ರ ಚಿಕಿತ್ಸೆ ನಡೆಯುತ್ತಿದೆ ಎಂದು ವಿವರಿಸಿದ್ದಾರೆ.

ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬಗಳಿಗೆ ಆಯುಷ್ಮಾನ್ ಭಾರತ್, ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ ವಿಮಾ ಯೋಜನೆಯನ್ನು ಬಳಸಿಕೊಳ್ಳಲು ಅರಿವು ಮೂಡಿಸಲಾಗಿದೆ. ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರು ಒದಗಿಸಲಾಗುತ್ತಿದೆ. ಬೋರ್‌ವೆಲ್ ನೀರನ್ನು ಉದ್ಯಾನವನಕ್ಕೆ ಉಪಯೋಗಿಸಲಾಗುತ್ತಿದೆ. ಈ ಕಾರ್ಯ ಅಂತಿಮ ಹಂತಕ್ಕೆ ತಲುಪಿದೆ. ಪ್ರತ್ಯೇಕ ಡಯಾಬಿಟಿಸ್ ಸೆಂಟರ್ ಪ್ರಾರಂಭಿಸಲು ಚಿಂತನೆ ನಡೆಸಲಾಗಿದ್ದು, ಅದಕ್ಕೆ ನೆರವು ನೀಡುವಂತೆ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಜಿ.ಮನ್ಸುಖ್ ಮಾಂಡವಿಯಾ ಅವರಲ್ಲಿ ಮನವಿ ಮಾಡಿದ್ದಾರೆ.

ಒಂದನೇ ಪುಟದಿಂದ

ಈಗ ನನಗೂ ಆಶೀರ್ವಾದ ಮಾಡಿ

ಮೇಲಿರುವುದಾಗಿ ಸಭೆ ವೇಳೆ ತಿಳಿಸಿದರು. ರಾಜ್ಯದಲ್ಲಿ ಭ್ರಷ್ಟ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದು, ಅಗತ್ಯ ವಸ್ತುಗಳ ಬೆಲೆ ಗಗನ ಕ್ಕೇರುತ್ತಿವೆ. ಜನತೆ ಸಂಕಷ್ಟದಲ್ಲಿದ್ದು ಮುಂದೆ ತಮ್ಮ ಆಶೀರ್ವಾದದಿಂದ ಅಧಿಕಾರಕ್ಕೆ ಬರುವ ಕಾಂಗ್ರೆಸ್ ಪಕ್ಷ ಪ್ರತಿ ಮನೆಯೊಡತಿಗೆ ತಿಂಗ ಳೊಂದಕ್ಕೆ 2 ಸಾವಿರ ರೂ. ನೆರವು, ಮನೆಯೊಂದಕ್ಕೆ 200 ಯುನಿಟ್ ಉಚಿತ ವಿದ್ಯುತ್, ತಲಾ 10 ಕೆಜಿ ಅಕ್ಕಿ ಮತ್ತಿತರ ಸೌಲಭ್ಯಗಳನ್ನು ಕಲ್ಪಿಸುವುದಾಗಿ ಭರವಸೆ ನೀಡಿದರು. ಈ ಹಿಂದೆ ಸಮ್ಮಿಶ್ರ ಸರ್ಕಾರದಲ್ಲಿ ಮಂಡ್ಯ ಕಾಂಗ್ರೆಸ್ ಮುಖಂಡರ ವಿರೋಧದ ನಡುವೆಯೂ ಕುಮಾರಸ್ವಾಮಿ ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಅವರನ್ನು ಮಂಡ್ಯ ಕ್ಷೇತ್ರದಲ್ಲಿ ನಿಲ್ಲಿಸಿ ತಾವೇ ಖುದ್ದು ಪ್ರಚಾರ ಮಾಡಿದ್ದನ್ನು ಸ್ಮರಿಸಿದ ಅವರು ಎಲ್ಲಾ ರಾಜಕೀಯ ವಿರಸ ಮರೆತು ನಾವು ಜೊತೆಗೂಡಿದ್ದೆವು ಎಂದು ಎಚ್.ಡಿ.ಕುಮಾರಸ್ವಾಮಿ ಬೀಗ್ಗಿಸಿದ್ದನ್ನು ನೆನಪಿಸಿದರು.

ರಾಜಕಾರಣ ನಿಂತ ನೀರಲ್ಲ. ಮದ್ದೂರಿನಲ್ಲಿ ಅಭ್ಯರ್ಥಿ ಬೇರೆ ಯಾರೂ ಅಲ್ಲ, ಡಿ.ಕೆ.ಶಿವಕುಮಾರ್ ಎಂದು ಭಾವಿಸಿ ಜಿಲ್ಲೆಯ ರಾಜಕಾರಣದ ಅಭಿವೃದ್ಧಿಯ ಅರಿವಿರುವ ನಿಮ್ಮ ಮನೆ ಮಗನಾದ ನನ್ನ ಕೈ ಬಲಪಡಿಸಿ. ರಾಜ್ಯದ ಜನರ ಸೇವೆಗೆ ಕೈಜೋಡಿಸುವಂತೆ ಮನವಿ ಮಾಡಿದರು. ಮೂರು ಬಾರಿ ಶಾಸಕರಾಗಿರುವ ಡಿ.ಸಿ.ತಮ್ಮಣ್ಣ ಅವರಿಗೆ ಕಾಂಗ್ರೆಸ್ ಕೊಡುಗೆ ಅಪಾರವಾದದ್ದು. ಅವರು 1999ರಲ್ಲಿ ಕಿರುಗಾವಲು ಕ್ಷೇತ್ರವನ್ನು ಜಿ.ಮಾದೇಗೌಡ ಬಿಟ್ಟುಕೊಟ್ಟರು. 2004ರಲ್ಲಿ ಎಸ್.ಎಂ.ಕೃಷ್ಣ ಅವರು ಮದ್ದೂರು ಕ್ಷೇತ್ರ ಬಿಟ್ಟುಕೊಟ್ಟರು ಎಂದು ಅವರ ತ್ಯಾಗ ಸ್ಮರಿಸಿದರಲ್ಲದೆ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವು ಖಚಿತವಾಗಿದೆ.

ಜಿಲ್ಲೆಯ ಹಿರಿಯ ರಾಜಕಾರಣಿಗಳಾದ ಹೆಚ್.ಕೆ.ವೀರಣ್ಣಗೌಡ, ಕೆ.ವಿ.ಶಂಕರೇಗೌಡ, ಜಿ.ಮಾದೇಗೌಡ, ಎಸ್.ಎಂ.ಕೃಷ್ಣ, ಎಂ. ಮಂಚೇಗೌಡ ಮತ್ತಿತರ ನಾಯಕರ ದೂರದೃಷ್ಟಿ ದೊಡ್ಡದಿದ್ದು, ಮುಂದಿನ ದಿನಗಳಲ್ಲಿ ಇವರ ಕನಸುಗಳ ಸಾಕಾರ ಕಾಂಗ್ರೆಸ್ ಪಕ್ಷದಿಂದ ಸಾಧ್ಯವೆಂದರು. ಎಸ್.ಎಂ.ಕೃಷ್ಣ ಅವರಿಂದ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ, ಸ್ತ್ರೀಶಕ್ತಿ ಸಂಘಗಳ ಸ್ಥಾಪನೆ, ಎಸ್.ಬಂಗಾರಪ್ಪ ಅವರ ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್, ಸಿದ್ದರಾಮಯ್ಯ ಅವಧಿಯಲ್ಲಿ ಅನ್ನಭಾಗ್ಯ ಯೋಜನೆ ಮರೆಯುವುದುಂಟೇ ಎಂದರು. ಬಿಜೆಪಿ ಅಧಿಕಾರದಿಂದ ದೂರವಿಡಲು 80 ಸ್ಥಾನ ಪಡೆದಿದ್ದ ಕಾಂಗ್ರೆಸ್, ಕುಮಾರಣ್ಣನ ಮನೆಗೆ ತೆರಳಿ 38 ಸ್ಥಾನ ಹೊಂದಿದ್ದರೂ ಮುಖ್ಯಮಂತ್ರಿ ಹುದ್ದೆ ನೀಡಿದ್ದೆವು.ಈಗ ಮಂಡ್ಯ ಜಿಲ್ಲೆಯ ಏಳು ಮಂದಿ ಜೆಡಿಎಸ್ ಶಾಸಕರು ಮಾಡಿರುವ ಅಭಿವೃದ್ಧಿಯಾದರೂ ಏನೆಂದು ಪ್ರಶ್ನಿಸಿದ ಅವರು ಮುಂದಿನ ಅವಧಿಗೆ ಕಾಂಗ್ರೆಸ್ ಪಕ್ಷಕ್ಕೆ ಬಲ ತುಂಬಬೇಕೆಂದರು. 'ಕಮಲ ಕೆರೆಯಲ್ಲಿದ್ದರೆ ಚಂದ, ತೆನೆ ಹೊಲದಲ್ಲಿದ್ದರೆ ಚಂದ, ದಾನ ಧರ್ಮ ಮಾಡಿರುವ ಕೈ ಅಧಿಕಾರಕ್ಕೆ ಬಂದರೆ ಚಂದ' ಎಂಬ ಜಾಲತಾಣದಲ್ಲಿ ಬಂದ ಅಭಿಮಾನಿಯೊಬ್ಬರ ಕವಿತೆಯನ್ನು ಸಭಿಕರ ಮುಂದೆ ಉಲ್ಲೇಖಿಸಿದ ಡಿಕೆಶಿ, ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ತರುವಂತೆ ಮನವಿ ಮಾಡಿದರು.

ಕೆಪಿಸಿಸಿ ಸದಸ್ಯ ಎಸ್.ಗುರುಚರಣ್ ಮಾತನಾಡಿ, ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಭ್ರಷ್ಟ ಬಿಜೆಪಿ ಸರ್ಕಾರ ಕಿತ್ತೊಗೆಯಲು ಪ್ರತಿಯೊಬ್ಬರು ಸಂಕಲ್ಪ ತೊಡಬೇಕು. ತಮ್ಮ ತಾತ ಎಸ್.ಸಿ.ಮಲ್ಲಯ್ಯ ಅವರು ಶಿಂಷಾ ಎಡ ಮತ್ತು ಬಲದಂಡೆ ನಾಲೆಗಳನ್ನು ನಿರ್ಮಿಸಿ ರೈತರಿಗೆ ಅನುಕೂಲ ಕಲ್ಪಿಸಿದರು. ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಜಿಲ್ಲೆಯ ರೈತರಿಗೆ ಅನುಕೂಲವಾಗಲೆಂಬ ಉದ್ದೇಶದಿಂದ ಕೊಪ್ಪದಲ್ಲಿ ಸಕ್ಕರೆ ಕಾರ್ಖಾನೆ ಆರಂಭಿಸಿ ಆ ಭಾಗದ ರೈತರಿಗೆ ಅನುಕೂಲ ಕಲ್ಪಿಸಿರುವುದಾಗಿ ಹೇಳಿದರು.

ಇದಕ್ಕೂ ಮುನ್ನ ಕಾಂಗ್ರೆಸ್ ಪಕ್ಷದ 2ನೇ ಹಂತದ ಪ್ರಜಾಧ್ವನಿ ರಥಯಾತ್ರೆಯನ್ನು 5 ಸಾವಿರಕ್ಕೂ ಅಧಿಕ ಕಾರ್ಯಕರ್ತರು ತಾಲೂಕಿನ ನಿಡಘಟ್ಟ ಗ್ರಾಮದಿಂದ ಬೈಕ್ ರ್‍ಯಾಲಿ ಮೂಲಕ ಸ್ವಾಗತಿಸಿದರು. ಸಮಾವೇಶದಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು. ತಾಲೂಕಿನ ನಿಡಘಟ್ಟ, ಸೋಮನಹಳ್ಳಿ, ರುದ್ರಾಕ್ಷಿಪುರ ಹಾಗೂ ಶಿವಪುರದಲ್ಲಿ ಕಾರ್ಯಕರ್ತರು, ಮುಖಂಡರು ಬೃಹತ್ ಗಾತ್ರದ ಹಾರಗಳನ್ನು ಕ್ರೇನ್ ಮೂಲಕ ಹಾಕಿದರಲ್ಲದೇ ಜೆಸಿಬಿ ಯಂತ್ರದ ಮೂಲಕ ಹೂವಿನ ಮಳೆಗೈದರು.

ವೇದಿಕೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ವಿಧಾನಸಭೆ ಪ್ರತಿಪಕ್ಷ ಉಪನಾಯಕ ಯು.ಟಿ.ಖಾದರ್, ಮಂಡ್ಯ ಜಿಲ್ಲಾ ಕಾಂಗ್ರೆಸ್ ಉಸ್ತುವಾರಿ ಕುಸುಮ್ ಕುಮಾರ್ ಚೌಧರಿ, ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್, ಮಾಜಿ ಸಚಿವರಾದ ಪಿ.ಎಂ. ನರೇಂದ್ರಸ್ವಾಮಿ, ಎಚ್.ಎಂ.ರೇವಣ್ಣ, ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ, ಮಾಜಿ ಶಾಸಕರಾದ ಬಿ.ರಾಮಕೃಷ್ಣ, ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ರಮೇಶ್‌ಬಾಬು ಬಂಡಿಸಿದ್ದೇಗೌಡ, ಮಲ್ಲಾಜಮ್ಮ, ಮಾಜಿ ಸಂಸದ ವಿ.ಎಸ್.ಉಗ್ರಪ್ಪ, ಕೆಪಿಸಿಸಿ ಕಿಸಾನ್ ಘಟಕದ ಅಧ್ಯಕ್ಷ ಸಚಿನ್ ಮೀಗಾ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಉಪಸ್ಥಿತರಿದ್ದರು.

ಕಮಲ ಕೆರೆಯಲ್ಲಿರಲಿ, ತೆನೆ ಹೊಲದಲ್ಲಿರಲಿ: ಡಿಕೆಶಿ

ಬಿಜೆಪಿಯಿಂದ ರಾಜ್ಯ, ರಾಷ್ಟ್ರವನ್ನು ಕಾಪಾಡಬೇಕಾದರೆ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು ಎಂದರು. ನಮ್ಮ ಮನೆಯಲ್ಲಿ ನನ್ನೊಬ್ಬನನ್ನು ಬಿಟ್ಟರೆ ಬೇರೆ ಯಾರೂ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಸಂಸದರನ್ನು ವಿಧಾನಸಭೆಗೆ ನಿಲ್ಲಿಸುವ ತೀರ್ಮಾನ ಮಾಡಿಲ್ಲ. ಬೇರೆ ಪಕ್ಷಗಳಲ್ಲಿ ಏನೇ ತೀರ್ಮಾನ ಕೈಗೊಂಡರೂ ಅದು ನಮಗೆ ಸಂಬಂಧವಿಲ್ಲ ಎಂದರು. ಬಿಜೆಪಿಯವರು ಪ್ರಚಾರಕ್ಕೆ ಪ್ರಧಾನಿಯನ್ನು ಕರೆದು ತಂದು ಪ್ರಚಾರ ಮಾಡಿಸಲಿ, ನಾವು ಅದಕ್ಕೆ ತಲೆಕೆಡಿಸಿಕೊಳ್ಳುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಜನರ ತೀರ್ಮಾನವೇ ಅಂತಿಮ. ರಾಜಕೀಯ ಮಾಡಬೇಕು ಅಷ್ಟೇ, ಬೇರೆ ಯಾರನ್ನೂ ಕಟ್ಟಿ ಹಾಕಲು ಸಾಧ್ಯವಿಲ್ಲ ಎಂದರು.

ಅದೇ ನಿಜವಾದ ಪ್ರಶಸ್ತಿ

ಪ್ರಸ್ತುತವೆನಿಸಿ ಜನ ಓದಬೇಕು. ಕುಮಾರವ್ಯಾಸ ಭಾರತ 500 ವರ್ಷಕ್ಕಿಂತ ಹಿಂದಿನದಾದರೂ ಪ್ರಸ್ತುತವೆನಿಸಿದೆ. ಈಗಲೂ ಕುಮಾರವ್ಯಾಸ ಭಾರತ ವಾಚನ ಕೇಳುತ್ತಾರೆ. ಹಳ್ಳಿಗಳಲ್ಲಿ ಕರ್ಣ, ದ್ರೌಪದಿ ಸ್ವಯಂವರ ಇನ್ನಿತರ ಕತೆಗಳನ್ನು ಹೇಳುವಂತೆ ತಾವೇ ಕೇಳುತ್ತಾರೆ. ವಾಚನ ಮಾಡುವವರು ಬಿಡಿಸಿ ಹೇಳುವುದಿಲ್ಲ. ಹಾಡಿನ ಮೂಲಕ ಕತೆ ಹೇಳುವುದರಿಂದ ಜನ ಸರಳವಾಗಿ ಅರ್ಥೈಸಿಕೊಳ್ಳುತ್ತಾರೆ. ಅಂದರೆ ಕುಮಾರವ್ಯಾಸ ಭಾರತ 500 ವರ್ಷಗಳಾದರೂ ಉಳಿದಿದೆ. ಹಾಗೆ ನನ್ನ ಪುಸ್ತಕವೂ ಶತಮಾನಗಳ ಕಾಲ ಉಳಿಯುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಇದು ನನ್ನ ಬಯಕೆಯಷ್ಟೆ. ಪ್ರಶಸ್ತಿ ಬಂದಿದೆ ಈ ಸಂದರ್ಭಕ್ಕೆ ಸಂತೋಷ. ಓದುಗರಿಗೆ ಸಂತೋಷವಾಗಿರುವುದರಿಂದ ನನಗೂ ಸಂತೋಷ ಎಂದರು.

ಧರ್ಮಶ್ರೀಯಿಂದ ಆಮಂತ್ರಣ: ನಾನು ಸಾಹಿತ್ಯ ವಿದ್ಯಾರ್ಥಿಯಲ್ಲ. ತತ್ವಶಾಸ್ತ್ರ ಓದಿ ಅದರಲ್ಲಿ ಸಂಶೋಧನೆ ಮಾಡಿ, ಆ ವಿಷಯದ ಪಾಠವನ್ನೂ ಮಾಡುತ್ತಿದೆ. ನಂತರ ಸಾಹಿತ್ಯದ ಕಡೆಗೆ ತಿರುಗಿದೆ. ನಾನೇಕೆ ಬರೆಯುತ್ತೇನೆ ಎನ್ನುವುದಕ್ಕೆ ಹಲವೆಡೆ ವಿವರಣೆ ನೀಡಿದ್ದೇನೆ. ನನ್ನ ಮೊಟ್ಟಮೊದಲ ಕಾದಂಬರಿ 'ಧರ್ಮಶ್ರೀ'ಯನ್ನು 1957–58ರಲ್ಲಿ ಬರೆದಿದ್ದು. ಅದರಲ್ಲಿ ಓದಿನಲ್ಲಿ ಚುರುಕಿರುವ, ಚಿಕ್ಕ ವಯಸ್ಸಿನಿಂದಲೇ ಭಾರತೀಯ ಸಂಸ್ಕೃತಿ ಬಗ್ಗೆ ಆಸಕ್ತಿಯಿಂದ ಅಧ್ಯಯನ ಮಾಡುತ್ತಿದ್ದ ಬಡ ಕುಟುಂಬದ ಮಡಿವಂತ ಬ್ರಾಹ್ಮಣ ಹುಡುಗ ಹಾಗೂ ತರಗತಿ ಸಹಪಾಠಿ ಕ್ರಿಶ್ಚಿಯನ್ ಹುಡುಗಿಯೊಂದಿಗೆ ಪ್ರೀತಿಯಾಗುತ್ತದೆ. ಹುಡುಗ ವಿವಾಹದ ಬಗ್ಗೆ ಪ್ರಸ್ತಾಪಿಸಿದಾಗ ಧರ್ಮ ಎದುರಾಗುತ್ತದೆ. ನೀನು ಕ್ರಿಶ್ಚಿಯನ್ ಧರ್ಮಕ್ಕೆ ಸಂಭ್ರಮದಿಂದ ಸ್ವಾಗತಿಸಿ, ನಿನಗೆ ಅನುಕೂಲಗಳನ್ನೂ ಮಾಡಿಕೊಡಲಾಗುತ್ತದೆ. ಆದರೆ ನನ್ನನ್ನು ನಿನ್ನ ಧರ್ಮಕ್ಕೆ ಸ್ವೀಕರಿಸುವುದಿಲ್ಲ ಎಂದು ಹುಡುಗಿ ಹೇಳುತ್ತಾಳೆ. ಕಡೆಗೆ ನೌಕರಿ ಇನ್ನಿತರ ಅನುಕೂಲ ವಾಗುತ್ತದೆ ಎಂದು ಹುಡುಗ ಮತಾಂತರವಾಗಿ ವಿವಾಹವಾಗುತ್ತಾನೆ. ಕೆಲ ವರ್ಷಗಳ ಬಳಿ ಆತ ಮೊದಲ ಬಾರಿಗೆ ಬೇಲೂರಿಗೆ ಹೋಗಿ ಅಲ್ಲಿ ಶಿಲ್ಪಕಲೆ, ದೇವರ ಮೂರ್ತಿಗಳನ್ನು ನೋಡಿದಾಗ ತಪ್ಪು ಮಾಡಿದ ಭಾವ ಕಾಡುತ್ತದೆ. ಮುಂದುವರೆದು ಆತ ಊಟ ಬಿಟ್ಟು ಕಾಯಿಲೆ ಬೀಳುತ್ತಾನೆ. ಆಗ ಆರ್ಯಸಭಾದ ಒಬ್ಬರು ಶುದ್ಧೀಕರಣದ ಮೂಲಕ ಮತ್ತೆ ನಮ್ಮ ಧರ್ಮಕ್ಕೆ ವಾಪಸ್ಸಾಗಬಹುದೆಂದು ತಿಳಿಸುತ್ತಾರೆ. ಅದಕ್ಕೆ ಆತನ ಪತ್ನಿಯೂ ಒಪ್ಪಿ ಬರುತ್ತಾಳೆ. ಧರ್ಮಶ್ರೀ ಕಾದಂಬರಿಯಲ್ಲಿ ಆರಂಭವಾಗಿದ್ದು ಸಮಗ್ರ ರೂಪದಲ್ಲಿ 2007ರಲ್ಲಿ ಬರೆದ 'ಆವರಣ' ಕಾದಂಬರಿ ಸೇರಿದೆ. ಇದೀಗ ಈ ವಿಚಾರ ನ್ಯಾಯಾಲಯದಲ್ಲಿದೆ. ಇದ್ದಕಿದ್ದಂತೆ ಬೇರೆ ಧರ್ಮಕ್ಕೆ ಮತಾಂತರವಾಗಲು ಅವಕಾಶವಿಲ್ಲ. ಜಿಲ್ಲಾಧಿಕಾರಿಗಳ ಮುಂದೆ ಮತಾಂತರಕ್ಕೆ ನಿಖರ ಕಾರಣ ಹಾಗೂ ಆ ಬಗ್ಗೆ ಸ್ಪಷ್ಟನೆ ನೀಡಬೇಕು. ಚರ್ಚೆ, ಪ್ರಶ್ನೋತ್ತರದ ಬಳಿಕ ಜಿಲ್ಲಾಧಿಕಾರಿಗಳು ಪ್ರಕಟಿಸಬೇಕು. ಈ ನಿಟ್ಟಿನಲ್ಲಿ ಆರೇಳು ರಾಜ್ಯಗಳಲ್ಲಿ ಕಾನೂನು ಮಾಡಿದ್ದಾರೆ. ರಾಜಕೀಯ ಕಾರಣದಿಂದ ಹಲವು ರಾಜ್ಯಗಳು ಇನ್ನೂ ಮಾಡಿಲ್ಲ ಎಂದು ತಿಳಿಸಿದರು.

ಆಳವಾಗಿ ಅರಿಯುವ ಸ್ವಭಾವ: ಒಂದು ಸಮಸ್ಯೆ ನನ್ನ ಮನಸ್ಸಿನಲ್ಲಿ ಬಂದರೆ ಆ ಬಗ್ಗೆ ಆಳವಾಗಿ ಅಧ್ಯಯನ ಮಾಡುವ ಸ್ವಭಾವ ವಯಸ್ಸಿಗೆ ಅನುಗುಣವಾಗಿ ಮಾಗಿದಂತೆಲ್ಲಾ ಹೆಚ್ಚಾಗಿದೆ. ಯಾವುದೇ ಕಲಾವಿದ ಅದರಲ್ಲೂ ಸಾಹಿತಿ ಆದವನಿಗೆ ಆಲೋಚನೆ ಜೊತೆಗೆ ಕಲ್ಪನೆಯೂ ಇರುತ್ತದೆ. ಕಲ್ಪನೆ ಮೂಲಕ ಬರೆಯುವ ಸಾಹಿತ್ಯ ಓದುಗರ ಅಂತಃಕರಣ ಮುಟ್ಟಿ ಪರಿಣಾಮ ಉಂಟು ಮಾಡುತ್ತದೆ. ಇದು ನನ್ನ ಸ್ವಭಾವ. ನಾನು ಗುಜರಾತ್‌ನಲ್ಲಿ 1960–67 ವರೆಗೆ ಸರ್ದಾರ್ ವಲ್ಲಭಬಾಯ್ ಪಟೇಲ್ ಯೂನಿವರ್ಸಿಟಿಯಲ್ಲಿ ತತ್ವಶಾಸ್ತ್ರ ಉಪನ್ಯಾಸಕನಾಗಿದ್ದೆ. ಆ ಸಂದರ್ಭದಲ್ಲಿ 'ಅಮುಲ್' ಹಾಲು ಉತ್ಪನ್ನ ಕೇಂದ್ರದ ಬಗ್ಗೆ ತಿಳಿದುಕೊಂಡಿದ್ದೆ. ವ್ಯಾಕ್ಯೂಮ್ ಟ್ಯೂಬ್ ಮೂಲಕ ಹಸುಗಳಿಂದ ಹಾಲು ಕರೆಯುವ ಬಗ್ಗೆ ಪಶುವೈದ್ಯರನ್ನು ಪ್ರಶ್ನಿಸಿದ್ದೆ. ಕೆಚ್ಚಲಲ್ಲಿ ಒಂದಿಷ್ಟೂ ಹಾಲು ಉಳಿಯಬಾರದು ಎಂದು ಆ ಕ್ರಮ ಅನುಸರಿಸುವುದಾಗಿ ಹೇಳಿದ್ದರು. ಆಗ 'ತಾಯಿ–ಮಗು'ವನ್ನು ಉದಾಹರಿಸಿ ಮರುಪ್ರಶ್ನೆ ಮಾಡಿದ್ದೆ. ಆದರೆ ಪ್ರಾಣಿ ಹಾಗೂ ಮನುಷ್ಯನ ವಿಚಾರಗಳು ಭಿನ್ನ ಎಂದಿದ್ದರು. ಆದರೆ ಇದು ಜೀವನದ ಮೌಲ್ಯಗಳಿಗೆ ಸಂಬಂಧಪಟ್ಟ ಪ್ರಶ್ನೆ. ಇತ್ತೀಚೆಗೆ ಪಠ್ಯಪುಸ್ತಕ ಸಂಬಂಧ ಗದ್ದಲವಾಗಿತ್ತು. ಆ ಸಂದರ್ಭದಲ್ಲಿ ಗೋವಿನ ಕತೆ ಪದ್ಯ ನೆನಪಾಯಿತು. ನಾವು ವಿದ್ಯಾರ್ಥಿಗಳಾಗಿದ್ದಾಗ ಗೋವಿನ ಕತೆ ಕೇಳಿ ಕಣ್ಣೀರಿಡುತ್ತಿದ್ದೆವು. ಆದರೆ ಇಂತಹ ಕತೆಗಳನ್ನು ಪಠ್ಯದಲ್ಲಿ ಉಳಿಸುವುದೇ ಇಲ್ಲ. ಕಾರಣ ಹಸು ಎಂದರೆ ಏನೇನೋ ಪ್ರಶ್ನೆಗಳು ಸೃಷ್ಟಿಯಾಗುತ್ತವೆ. ಆದರೆ ಹಿಂದೆಲ್ಲಾ ಕೃಷಿಗೆ ಹಸು, ಎತ್ತುಗಳೇ ಆಸರೆಯಾಗಿದ್ದವು. ಗೊಬ್ಬರ, ಗಂಜಲವನ್ನು ಬೆಳೆಗೆ ಬಳಸಲಾಗುತ್ತಿತ್ತು. ಈಗ ಯಂತ್ರೋಪಕರಣ ಬಂದಿವೆ. ರಾಸಾಯನಿಕಯುಕ್ತ ಆಹಾರ ಪದಾರ್ಥವನ್ನು ತಿನ್ನುತ್ತಿದ್ದೇವೆ. ಏನು ಊಟ ಮಾಡುವುದಕ್ಕೂ ಭಯಪಡುವ ಪರಿಸ್ಥಿತಿ ಇದೆ ಎಂದರು.

ಹಿಮಾಲಯ ಪ್ರೇರಣೆ: ಕಲಿಯಬೇಕಿರುವುದು ಬಹಳಷ್ಟಿದೆ. ನನ್ನ ಕಾದಂಬರಿ ವಿಷಯ, ವಿಸ್ತಾರ ಹಾಗೂ ಆಳವಾಗಿರುತ್ತದೆ. ಇದು ನನ್ನ ಮನಸ್ಸಿನಲ್ಲಿ ಯಾವ ರೀತಿ ಗಾಢವಾಯಿತು ಎನ್ನುವುದನ್ನು ಹಲವು ಬಾರಿ ಹೇಳಿದ್ದೇನೆ. ನಾನು ಹಿಮಾಲಯವನ್ನು ಬಹಳಷ್ಟು ಸಲ ನೋಡಿದ್ದೇನೆ. ಪೂರ್ವದಿಂದ ಉತ್ತರದ ಕಡೆಗೆ ಕೈಲಾಸ ಮಾನಸ ಸರೋವರವನ್ನು ನಡೆದೇ ಹೋಗಿದ್ದೇನೆ. ಪರ್ವತಗಳನ್ನು ಹತ್ತಿ ಇಳಿಯಬೇಕು. ಅದು ಅಲೆಯಂತೆ ಅನುಭವ ನೀಡುತ್ತದೆ. ಅದು ನನ್ನ ಬರವಣಿಗೆಯಲ್ಲಿ ಆಳವಾಗಿ ಪರಿಣಾಮ ಬೀರಿದೆ ಎಂದು ತಿಳಿಸಿದರು.

ಮೈಸೂರಲ್ಲಿ ಗೆಡ್ಡೆ–ಗೆಣಸು ಮೇಳಕ್ಕೆ ಚಾಲನೆ

ಏನೇನೋ ತಿಂದ ಮೇಲೆ ನಮ್ಮ ಮೂಲ ಆಹಾರವೇ ನಮಗೆ ಮೇಲೂ...!

- ಗಣ್ಯರು, ತಜ್ಞರಿಂದ ನಮ್ಮ ಅನಾದಿ ಕಾಲದಿಂದ ಬಂದ ನೈಸರ್ಗಿಕ ಆಹಾರ ಪದ್ಧತಿ ಗುಣಗಾನ
- ಮೇಳಕ್ಕೆ ಜನರಿಂದ ಉತ್ತಮ ಪ್ರತಿಕ್ರಿಯೆ: ಗೆಡ್ಡೆ-ಗೆಣಸಿನ ಖಾದ್ಯ ತಯಾರಿಕಾ ಸ್ಪರ್ಧೆ





ಇಂದು ಅಡುಗೆ ಸ್ಪರ್ಧೆ

ಭಾನುವಾರ ಕಂದಮೂಲಗಳ ಆಹಾರ ತಯಾರಿಕೆ ಸ್ಪರ್ಧೆ ನಡೆಯಲಿದ್ದು, ಆಸಕ್ತರು ಗೆಡ್ಡೆ ಗೆಣಸುಗಳನ್ನು ಬಳಸಿ, ಮನೆಯಲ್ಲೇ ತಯಾರಿಸಿದ ತಿನಿಸನ್ನು ಮೇಳಕ್ಕೆ ತರಲಿದ್ದಾರೆ. ಉತ್ತಮ ಖಾದ್ಯಕ್ಕೆ ಬಹುಮಾನವಿರುತ್ತದೆ.



ಮೈಸೂರು,ಫೆ.11(ಎಂಟಿವೈ)– ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ಶನಿವಾರ ಆರಂಭವಾದ ಎರಡು ದಿನಗಳ ಗೆಡ್ಡೆ ಗೆಣಸು ಮೇಳ ಆರಂಭವಾಗಿದ್ದು, ಇಲ್ಲಿ ವಿವಿಧ ಬಗೆಯ ಗೆಡ್ಡೆ ಗೆಣಸು ಗ್ರಾಹಕರನ್ನು ಆಕರ್ಷಿಸುತ್ತಿದೆ. ಅದರಲ್ಲೂ ಗೆಣಸಿನಿಂದ ತಯಾರಿಸಿದ ವಿವಿಧ ಬಗೆಯ ತಿನಿಸುಗಳು ನಾಲಿಗೆ ರುಚಿ ತಣಿಸುತ್ತಿವೆ.

ಮೈಸೂರಿನ ಸಹಜ ಸಮೃದ್ಧ ಸಂಸ್ಥೆ ಆಯೋಜಿಸಿದ್ದ 'ಗೆಡ್ಡೆ ಗೆಣಸು' ಮೇಳದಲ್ಲಿ ವಿವಿಧೆಡೆಯಿಂದ ಬಂದಿರುವ ರೈತರು, ಆದಿವಾಸಿ ಸಮುದಾಯದ ಕೃಷಿಕರು ತಾವು ಬೆಳೆದಿರುವ ಗೆಣಸು, ಸುವರ್ಣಗೆಡ್ಡೆ, ಶುಂಠಿ ಸೇರಿದಂತೆ ವಿವಿಧ ಗೆಡ್ಡೆ ಗೆಣಸುಗಳನ್ನು ಮಾರಾಟಕ್ಕಿಟ್ಟಿದ್ದಾರೆ. ಅಲ್ಲದೆ, ಗೆಣಸಿನಿಂದ ತಯಾರಿಸಿದ ವಿವಿಧ ಬಗೆಯ ತಿನಿಸುಗಳು ಮೇಳದಲ್ಲಿ ಲಭ್ಯವಿದೆ. ಅಲ್ಲದೆ, ಸಿರಿಧಾನ್ಯಗಳು, ವಿವಿಧ ಗಿಡಗಳ ಬೀಜ, ಬಗೆ ಬಗೆಯ ಹಲಸಿನ ಗಿಡಗಳನ್ನು ಮಾರಾಟಕ್ಕಿಡಲಾಗಿದೆ. ಎರಡು ದಿನಗಳ ಗೆಡ್ಡೆ ಗೆಣಸು ಮೇಳಕ್ಕೆ ಮೊದಲ ದಿನವೇ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ಬಾರಿಯ ವಿಶೇಷ ಕೊಲಂಬಿಯಾದ ಯೋಕನ್ ಬೀನ್ಸ್.

ಪ್ರದರ್ಶನ: ಕೇರಳದಿಂದ ಆಗಮಿಸಿರುವ ಗೆಣಸು ತಳಿ ಸಂರಕ್ಷಕ ರೈತ ಎನ್.ಎಂ. ಶಾಜಿ ಪ್ರದರ್ಶನಕ್ಕೆ ತಂದಿರುವ 200 ಬಗೆಯ ಗೆಡ್ಡೆ ಗೆಣಸುಗಳನ್ನು ಪ್ರದರ್ಶನಕ್ಕಿಟ್ಟಿದ್ದಾರೆ. ಚಿಕ್ಕ ಗಾತ್ರದ ಗೆಣಸಿನಿಂದ 15–20 ಕೆಜಿ ತೂಕದ ಗೆಡ್ಡೆ–ಗೆಣಸು ಪ್ರದರ್ಶನದಲ್ಲಿ ಗಮನ ಸೆಳೆಯುತ್ತಿದೆ. ವಿಶೇಷವಾಗಿ ಕೊಲಂಬಿಯಾದ ಯೋಕನ್ ಬೀನ್ಸ್ ಮೇಳದ ಮುಖ್ಯ ಆಕರ್ಷಣೆಯಾಗಿವೆ.

ಮೂಲ ಆಹಾರ ಪದ್ಧತಿಗೆ ಮರಳಬೇಕಿದೆ ಡಿಸಿ: ಗೆಣಸು ಮೇಳಕ್ಕೆ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಭೂಮಿ ಒಳಭಾಗದಲ್ಲಿ ಬೆಳೆಯುವ ಗೆಡ್ಡೆ–ಗೆಣಸುಗಳಲ್ಲಿ ಪ್ರೋಟಿನ್ ಅಂಶ ಹೆಚ್ಚಾಗಿರುತ್ತದೆ. ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಗುಣವನ್ನು ಹೊಂದಿವೆ. ಕೊರೊನಾ ಸಂದರ್ಭದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಲು ಜನ ಪರದಾಡಿದ್ದಾರೆ. ವಿಟಮಿನ್‌ಗಾಗಿ ಮಾತ್ರೆ ಸೇವಿಸಿದ್ದ ನಿದರ್ಶನ ನಮ್ಮ ಮುಂದೆ ಇದೆ. ಈ ನಿಟ್ಟಿನಲ್ಲಿ ಇದೀಗ ಆರೋಗ್ಯ ಕಾಪಾಡಿಕೊಳ್ಳಲು ಪೂರಕವಾಗಿರುವ ಗೆಡ್ಡೆಗೆಣಸುಗಳ ಬಳಕೆಗೆ ಜನರಲ್ಲಿ ಆಸಕ್ತಿ ಹೆಚ್ಚಾಗುತ್ತಿರುವುದು ಒಳ್ಳೆ ಬೆಳವಣಿಗೆ. ಯುವ ಜನರೂ ಒಳಗೊಂಡಂತೆ ಬಹುತೇಕ ಮಂದಿ ನಮ್ಮ ಮೂಲ ಆಹಾರ ಪದ್ಧತಿಯೇ ಶ್ರೇಷ್ಠ ಎಂಬ ಅರಿವು ಮೂಡಿದೆ. ಹಾಗಾಗಿ ಇದೀಗ ನಾವು ಗೆಡ್ಡೆ ಗೆಣಸು ಸೇವನೆಗೆ ಮರಳುತ್ತಿದ್ದೇವೆ ಎಂದರು.

'ಊರು ಸುತ್ತಿದ ಮೇಲೆ ನಮ್ಮೂರೇ ನಮಗೆ ಮೇಲು' ಎಂಬಂತೆ ಎಲ್ಲಾ ಆಹಾರ ಪದ್ಧತಿಗಳನ್ನು ನೋಡಿರುವವರು ಇದೀಗ ಸಿರಿಧಾನ್ಯ, ಗೆಡ್ಡೆ ಗೆಣಸಿನಂತಹ ಮೂಲ ಆಹಾರಕ್ಕೆ ಮರಳುತ್ತಿದ್ದಾರೆ. ಆರೋಗ್ಯ ದೃಷ್ಟಿಯಿಂದ ಇದು ಉತ್ತಮ ಬೆಳವಣಿಗೆ. ಕೋವಿಡ್ ನಂತರ ಸಾವಯವ ಬೆಳೆಗೆ ಮಹತ್ವ ಬಂದಿದೆ. ಜಿಲ್ಲೆಯಲ್ಲಿ ಸಹಜ ಸಮೃದ್ಧಿಯಾಗಿ ಸಿಗುವ ಗೆಡ್ಡೆ ಗೆಣಸು ಮೇಳ ಆಯೋಜಿಸಿರುವುದು ಶ್ಲಾಘನೀಯ. ಈ ಹಿಂದೆ ನಮ್ಮ ದೇಸಿಯ ಔಷಧ ಪದ್ಧತಿಯಂತೆ ಅರಿಸಿನ ಹಚ್ಚಿಕೊಂಡು ಖಾಯಿಲೆಯಿಂದ ಗುಣವಾಗುತ್ತಿದ್ದರು. ನಮ್ಮ ದೇಸಿಯ ಔಷಧಗಳ ಮಹತ್ವವನ್ನು ವಿದೇಶಿಗರು ಅರಿತು ಬಳಸುವುದರೊಂದಿಗೆ, ವಿವಿಧ ಕಂಪನಿಗಳು ಆ ಜ್ಞಾನವನ್ನು ತಾವು ಬಳಕೆ ಮಾಡಿಕೊಂಡು ಪೇಟೆಂಟ್ ಮಾಡಿಸಿಕೊಳ್ಳುತ್ತಿದ್ದಾರೆ. ನಮ್ಮ ಮೂಲ ಜ್ಞಾನವನ್ನು ಈ ರೀತಿ ಬೇರೆಯವರು ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಅವರು 'ಮರೆತು ಹೋದ ಆಹಾರ' ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಆಹಾರ ತಜ್ಞೆ ರತ್ನಾ ರಾಜಯ್ಯ ಮಾತನಾಡಿ, ನಮ್ಮ ಆಹಾರ ಸಮಸ್ಯೆಗಳಿಗೆ ಗೆಡ್ಡೆಗಳಲ್ಲಿ ಸೂಕ್ತ ಉತ್ತರವಿದೆ. ಇವುಗಳಿಂದ ತರಹೇವಾರಿ ಅಡುಗೆಗಳನ್ನು ಮಾಡಬಹುದು. ಇವುಗಳ ಸಂರಕ್ಷಣೆಯನ್ನು ರೈತರು ಮತ್ತು ಬಳಕೆಯನ್ನು ಗ್ರಾಹಕರು ಮಾಡಿ ಗೆಡ್ಡೆ ಗೆಣಸಿನ ವೈವಿಧ್ಯ ಉಳಿಸಿ ಬೆಳಸಬೇಕಿದೆ ಎಂದರು.

"ಕೇರಳದ ವಯನಾಡಿನ ಎನ್.ಎಂ.ಶಾಜಿ ಮಾತನಾಡಿ, ನಾನು 200 ಬಗೆಯ ವಿವಿಧ ಗೆಡ್ಡೆ ಗೆಣಸಿನ ತಳಿಗಳನ್ನು ಸಂಗ್ರಹಿಸಿ, ಬೆಳೆಸುತ್ತಿದ್ದೇನೆ. ಗೆಣಸುಗಳ ತಳಿ ಹುಡುಕಿ ಅಂಡಮಾನ್‌ವರೆಗೂ ಹೋಗಿ ಬಂದಿದ್ದೇನೆ. ಆಸಕ್ತರಿಗೆ ಬಿತ್ತನೆ ಗೆಡ್ಡೆಗಳ ನೀಡುತ್ತಿದ್ದೇನೆ. ಈ ಕಾರ್ಯಕ್ಕೆ ರಾಷ್ಟ್ರ ಪ್ರಶಸ್ತಿ ಕೂಡ ಸಂದಿದೆ ಎಂದರು.

ಜೇನುಕುರುಬ ಸಮುದಾಯದ ನಾಯಕಿ ಪಾರ್ವತಿ ಮಾತನಾಡಿ, ಪೋಷಕಾಂಶಗಳಿಂದ ಸಮೃದ್ಧವಾದ ನೈಸರ್ಗಿಕ ಗೆಡ್ಡೆ ಗೆಣಸುಗಳನ್ನು ಮತ್ತೆ ನಮ್ಮ ಅನ್ನದ ತಟ್ಟೆಗೆ ಬರವಮಾಡಿಕೊಳ್ಳಬೇಕು. ಕಾಡಿನ ಗೆಣಸುಗಳನ್ನು ನಿರಂತರವಾಗಿ ಬಳಸುವುದರ ಮೂಲಕ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕಿದೆ ಎಂದರು.

ಇದಕ್ಕೂ ಮುನ್ನ ಮೇಳದ ಆಯೋಜಕ ಸಹಜ ಸಮೃದ್ಧ ಸಂಸ್ಥೆಯ ನಿರ್ದೇಶಕ ಜಿ.ಕೃಷ್ಣ ಪ್ರಸಾದ್ ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮ ಊಟದ ತಟ್ಟೆಯನ್ನು ವೈವಿಧ್ಯಗೊಳಿಸುವ ತರಕಾರಿಗಳ ಸಾಲಿನಲ್ಲಿ ಗೆಡ್ಡೆ ಗೆಣಸುಗಳಿಗೆ ವಿಶೇಷ ಸ್ಥಾನವಿದೆ. ಪೌಷ್ಟಿಕಾಂಶಗಳಿಂದ ಸಮೃದ್ಧವಾಗಿರುವ ಗೆಡ್ಡೆ ಗೆಣಸುಗಳಿಗೆ ಇನ್ನಷ್ಟು ಆದ್ಯತೆ ಕೊಡಬೇಕಾಗಿದೆ. ಗ್ರಾಹಕರಿಗೆ ಗೆಡ್ಡೆ ಗೆಣಸುಗಳ ಪರಿಚಯ ಮಾಡಲು ಈ ಮೇಳ ಆಯೋಜಿಸಿದ್ದೇವೆ. ನಮ್ಮ ಆದಿವಾಸಿಗಳು, ರೈತರು ಬೆಳೆದ ರಾಸಾಯನಿಕ ಮುಕ್ತ ಪದಾರ್ಥ ಜನರ ಊಟದ ತಟ್ಟೆಗೆ ಬರಬೇಕು ಎಂಬುದೇ ನಮ್ಮೆಲ್ಲರ ಆಶಯವಾಗಿದೆ ಎಂದರು.

ಆದಿವಾಸಿಗಳ ಕೃಷಿ ಉತ್ಪನ್ನಕ್ಕೆ ಸೂಕ್ತ ಮಾರುಕಟ್ಟೆ ಕಲ್ಪಿಸಲು ನಿರ್ಧಾರ

- ಕೃಷಿ ಉತ್ಪಾದಕರ ಸಂಘ ಸ್ಥಾಪನೆ: ಇದರ ಸದಸ್ಯತ್ವ ಶುಲ್ಕ ಸಿಎಸ್‌ಆರ್ ಫಂಡ್‌ನಿಂದ ಭರಿಸಲು ತೀರ್ಮಾನ
- ಮೈಸೂರು ಜಿಲ್ಲಾಧಿಕಾರಿಗಳ ಆದಿವಾಸಿಗಳ ಹಿತಚಿಂತನಾ ಸ್ತುತ್ಯಾರ್ಹ ಕಾಯಕ

ಮೈಸೂರು,ಫೆ.11(ಎಂಟಿವೈ)– ಕೃಷಿಯಲ್ಲಿ ತೊಡಗಿಸಿಕೊಂಡಿರುವ ಆದಿ ವಾಸಿಗಳ ಏಳಿಗೆಗಾಗಿ ಕೃಷಿ ಉತ್ಪಾದಕರ ಸಂಘ ಸ್ಥಾಪಿಸಿ, ಸದಸ್ಯತ್ವ ಶುಲ್ಕವನ್ನು ಸಿಎಸ್‌ಆರ್ ಫಂಡ್‌ನಲ್ಲಿ ಕೊಡಿಸಲು ಚಿಂತಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕೆವಿ. ರಾಜೇಂದ್ರ ತಿಳಿಸಿದ್ದಾರೆ.



ಗೆಡ್ಡೆಗೆಣಸು ಮೇಳ ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ, ಸರಗೂರು, ಪಿರಿಯಾಪಟ್ಟಣ, ಹುಣಸೂರು ಭಾಗದಲ್ಲಿ ಆದಿವಾಸಿಗಳು ನೆಲೆಸಿದ್ದಾರೆ. ಕೆಲವರು ಸಾಂಪ್ರದಾಯಿಕ ಕೃಷಿಯಲ್ಲಿ ತೊಡಗಿಸಿಕೊಂಡಿರುವ ಬಗ್ಗೆ ಮಾಹಿತಿ ದೊರೆತಿದೆ. ಆದಿವಾಸಿಗಳು ಬೆಳೆಯುವ ಬೆಳೆಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸುವ ನಿಟ್ಟಿನಲ್ಲಿ ಕೃಷಿ ಉತ್ಪಾದಕರ ಸಂಘ ಸ್ಥಾಪಿಸುವ ಆಲೋಚನೆ ಜಿಲ್ಲಾಡಳಿತದ ಮುಂದೆ ಇದೆ. ಈ ಸಂಘಕ್ಕೆ ಸದಸ್ಯರಾಗಲು ಒಂದು ಸಾವಿರ ರೂ. ಪಾವತಿಸಬೇಕಾಗುತ್ತದೆ. ಆದಿವಾಸಿಗಳು ಶುಲ್ಕ ಪಾವತಿಸಲು ಕಷ್ಟವಾಗುವುದರಿಂದ, ಆ ಮೊತ್ತವನ್ನು ಸಿಎಸ್‌ಆರ್ ಫಂಡ್ ಅಥವಾ ಆದಿವಾಸಿ ಕಲ್ಯಾಣ ಇಲಾಖೆಯಿಂದ ಹಣ ಕೊಡಿಸುವುದಕ್ಕೆ ನಿರ್ಧರಿಸಲಾಗಿದೆ. ಇದರಿಂದ ಕೃಷಿ ಚಟುವಟಿಕೆ ಮಾಡುವ ಆದಿವಾಸಿಗಳನ್ನು ಸಂಘಟಿಸುವುದರೊಂದಿಗೆ, ಬೇಡಿಕೆಗೆ ಅನುಗುಣವಾಗಿ ಕೃಷಿ ಉತ್ಪನ್ನಗಳನ್ನು ಬೆಳೆಯಲು ಪ್ರೇರಣೆ ನೀಡಿದಂತಾಗುತ್ತದೆ ಎಂದು ತಿಳಿಸಿದರು.

ಮಾರುಕಟ್ಟೆ ವ್ಯವಸ್ಥೆ: ಕೃಷಿ ಉತ್ಪಾದಕ ಸಂಘದ ಸದಸ್ಯರು ಬೆಳೆದ ವಸ್ತುಗಳಿಗೆ ಜಿಲ್ಲಾಡಳಿತವೇ ಮಾರುಕಟ್ಟೆ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಿದೆ. ಅಲ್ಲದೆ, ಗೆಡ್ಡೆ ಗೆಣಸು ಮೇಳದಂತೆ ವಿವಿಧೆಡೆ ವಿಶೇಷ ಮೇಳ ಆಯೋಜಿಸಿ, ಆದಿವಾಸಿಗಳು ಬೆಳೆದ ಪದಾರ್ಥಗಳನ್ನು ಮಾರಾಟ ಮಾಡು ವುದಕ್ಕೂ ಸೂಕ್ತ ವ್ಯವಸ್ಥೆ ಕಲ್ಪಿಸಲಾಗುತ್ತದೆ ಎಂದು ಭರವಸೆ ನೀಡಿದರು.

ನಬಾರ್ಡ್ ಯೋಜನೆಯಲ್ಲಿ ರೈತ ಸಂತೆ: ರೈತರ ಕಾರ್ಯಕ್ರಮಗಳಿಗೆ ಹೋದ ಸಂದರ್ಭದಲ್ಲಿ ಹಾಗೂ ವಿವಿಧ ವಸ್ತು ಪ್ರದರ್ಶನದಲ್ಲಿ ರೈತರು ಜಿಲ್ಲಾ ಡಳಿತದ ಮುಂದೆ ಸಾವಯವ ಪದ್ಧತಿಯಲ್ಲಿ ಬೆಳೆದ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ಪ್ರತ್ಯೇಕ ರೈತ ಸಂತೆ ಸ್ಥಾಪಿಸುವಂತೆ ಒತ್ತಾಯಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಬಾರ್ಡ್ ಯೋಜನೆಯಡಿ ರೈತ ಸಂತೆ ಸ್ಥಾಪಿಸಲು ನಿರ್ಧರಿಸಲಾಗಿದೆ. ತೆರೆದ ಸಂತೆ, ರೈತ ಸಂತೆ ಆರಂಭಿಸಲು ನಬಾರ್ಡ್ ಯೋಜನೆಯಡಿ 20 ಲಕ್ಷ ರೂ.ವರೆಗೆ ಹಣ ಖರ್ಚು ಮಾಡಬಹುದಾಗಿದೆ. ಯಾವುದೇ ಚಟು ವಟಿಕೆ ಇಲ್ಲದ ಸರ್ಕಾರಿ ಜಾಗವನ್ನು ರೈತರೇ ಗುರುತಿಸಿ, ಆ ಸ್ಥಳದಲ್ಲಿ ರೈತ ಸಂತೆ ನಿರ್ಮಿಸುವಂತೆ ಕೋರಿಕೆ ಸಲ್ಲಿಸಿದರೆ ಕ್ರಮ ಕೈಗೊಳ್ಳುವುದಾಗಿ ಭರವಸೆ ಸಲಹೆ ನೀಡಿದರು.



ಕಾಂಗ್ರೆಸ್ ಮೈಸೂರು ಜಿಲ್ಲಾ, ಗ್ರಾಮಾಂತರ ಸೇವಾದಳದ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ನಾಡನಹಳ್ಳಿಯ ಮಹದೇವ ಅವರನ್ನು ಮೈಸೂರು ಜಿಲ್ಲಾ ಹಾಗೂ ನಗರ ಸವಿತಾ ಸಮಾಜದ ಪರವಾಗಿ ಅಭಿನಂದಿಸಲಾಯಿತು. ಈ ವೇಳೆ ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ನಾಗೇಶ್, ನಗರ ಕಾರ್ಯದರ್ಶಿ ಹರೀಶ್ ರೆಡ್ಡಿ, ಹಿಂದುಳಿದ ವರ್ಗಗಳ ವೇದಿಕೆಯ ರಾಜ್ಯ ಅಧ್ಯಕ್ಷ ಕೆ.ಎಸ್.ಶಿವರಾಮು, ತಿ.ನರಸೀಪುರ, ನಂಜನಗೂಡು, ಕೆ.ಆರ್.ನಗರ, ಬನ್ನೂರು, ಮೈಸೂರು ನಗರದ ಪದಾಧಿಕಾರಿಗಳು ಹಾಗೂ ಮುಖಂಡರು ಉಪಸ್ಥಿತರಿದ್ದರು.

ನಾಳೆಯಿಂದ ಉಚಿತ ಕೀಲು ಮೂಳೆ ತಪಾಸಣಾ ಶಿಬಿರ

ಮೈಸೂರು, ಫೆ. 11– ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಫೆ. 13 ರಿಂದ 18 ರವರೆಗೆ ಉಚಿತ ಕೀಲು ಮೂಳೆ ತಪಾಸಣಾ ಶಿಬಿರವನ್ನು ಕೀಲು ಮೂಳೆ ತಜ್ಞವೈದ್ಯರಾದ ಡಾ.ಕಾರ್ತೀಕ್ ಹಥಾವರ್ ಹಾಗೂ ಡಾ. ಹರ್ಷ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಮೂಳೆ ವೈದ್ಯರೊಂದಿಗೆ ಉಚಿತ ಸಮಾಲೋಚನೆ ಇರುತ್ತದೆ. ವೈದ್ಯರು ಸೂಚಿಸುವ ಎಂ.ಆರ್.ಐ, ಸಿಟಿ, ಎಕ್ಸ್ ರೇ ತಪಾಸಣೆಯ ಮೇಲೆ ಹೊರರೋಗಿಗಳಿಗೆ ಶೇ.50 ರಿಯಾಯತಿ ನೀಡಲಾಗುವುದು. ಟಿಕೆಆರ್ ಮತ್ತು ಟಿಹೆಚ್‌ಆರ್‌ಗಳಿಗೆ ವಿಶೇಷ ಪ್ಯಾಕೇಜ್‌ಗಳು ಲಭ್ಯವಿವೆ. ಹೆಚ್ಚಿನ ಮಾಹಿತಿಗಾಗಿ 0821–2533600, 9986399862 ಸಂಪರ್ಕಿಸಬಹುದು.

ಭಾರತದ ಅಸ್ಮಿತೆ ಉತ್ತುಂಗಕ್ಕೇರಿಸುವ ನಿಟ್ಟಿನಲ್ಲಿ

ಎಬಿವಿಪಿಯಿಂದ ವಿದ್ಯಾರ್ಥಿ ಸಮೂಹಕ್ಕೆ ಅಗತ್ಯ ಮಾರ್ಗದರ್ಶನ

ಸಂಘಟನೆಯ ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಎಬಿವಿಪಿ ಸಂಘಟನಾ ಕಾರ್ಯದರ್ಶಿ ಸ್ವಾಮಿ ಮರಳಾಪುರ ಧ್ಯೇಯೋದ್ದೇಶ ವಿವರಣೆ

ಮೈಸೂರು,ಫೆ.11(ಪಿಎಂ)– ಭಾರತದ ಅಸ್ಮಿತೆ ಉತ್ತುಂಗಕ್ಕೇರಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ತೊಡಗಿಸಿಕೊಳ್ಳಲು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಅಗತ್ಯ ಮಾರ್ಗದರ್ಶನ ನೀಡುವ ಮಹತ್ತರ ಕಾರ್ಯ ನಿರ್ವಹಿಸುತ್ತಿದೆ ಎಂದು ಎಬಿವಿಪಿ ದಕ್ಷಿಣ ಮಧ್ಯಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ಸ್ವಾಮಿ ಮರಳಾಪುರ ಹೇಳಿದರು.

ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಎಬಿವಿಪಿ ಮೈಸೂರು ಜಿಲ್ಲಾ ಘಟಕದ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಸಂಘಟನೆಯ ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ 1949ರಲ್ಲಿ ಎಬಿವಿಪಿ ಸ್ಥಾಪನೆಗೊಂಡಿತು. ಅಂದಿನಿಂದ ಈವರೆಗಿನ ಸುದೀರ್ಘ ಅವಧಿಯಲ್ಲಿ ಎಬಿವಿಪಿ ಯುವ ಜನತೆಗೆ ಅಗತ್ಯ ಮಾರ್ಗದರ್ಶನ ನೀಡುತ್ತಿದೆ ಎಂದು ತಿಳಿಸಿದರು.

'ಶಿಕ್ಷಣ, ದೊಡ್ಡ ಪರಿವರ್ತನೆ ತರುವ ಸಾಧನ' ಎಂದು ಸ್ವಾಮಿ ವಿವೇಕಾನಂದ ಹೇಳಿದ್ದಾರೆ. ಹಾಗಾಗಿ ಶಿಕ್ಷಣದ ಮಹತ್ವ ಅರಿತುಕೊಳ್ಳಬೇಕು. ಸ್ವಾತಂತ್ರ್ಯ ಬಂದ 75 ವರ್ಷಗಳನ್ನು ಅವಲೋಕಿಸಿದರೆ ಇಡೀ ದೇಶದಲ್ಲಿ ನಾನಾ ರೀತಿಯ ಭ್ರಷ್ಟಾಚಾರ ಕಂಡಿದ್ದೇವೆ. ಇದಕ್ಕೆ ಕಾರಣ ಮೆಕಾಲೆ ಶಿಕ್ಷಣ ಪದ್ಧತಿಯ ಪರಿಣಾಮ. ಇದೀಗ ದೇಶದ ಅಭಿವೃದ್ಧಿ ಹಾಗೂ ವಿದ್ಯಾರ್ಥಿಯ ವೈಯಕ್ತಿಕ ಬೆಳವಣಿಗೆಗೆ ಪೂರಕವಾಗಿ ರಾಷ್ಟ್ರೀಯ ಶಿಕ್ಷಣ ನೀತಿ–2020 (ಎನ್‌ಇಪಿ–2020) ಜಾರಿಗೊಂಡಿದೆ ಎಂದರು.

ಎನ್‌ಇಪಿ–2020 ಜಾರಿಗೂ ಮುನ್ನ ಮೂರು ಲಕ್ಷಕ್ಕೂ ಹೆಚ್ಚು ಅಭಿಪ್ರಾಯಗಳು ವ್ಯಕ್ತವಾದವು. ಇಷ್ಟು ದೊಡ್ಡ ಪ್ರಮಾಣದಲ್ಲಿ ಅಭಿಪ್ರಾಯ ಹೊರಹೊಮ್ಮಲು ಎಬಿವಿಪಿ ದೇಶಾದ್ಯಂತ ಸೂಕ್ತ ಭೂಮಿಕೆ ಹಾಕಿತು. ಇದೀಗ ದೇಶಕ್ಕೆ ಅಗತ್ಯವಿದ್ದ ಶಿಕ್ಷಣ ನೀತಿ ಜಾರಿಯಾಗಿದೆ. ಇದನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ವಿಶೇಷವಾಗಿ ವಿದ್ಯಾರ್ಥಿ ಸಮೂಹ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಪ್ರಸ್ತುತ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡುವ ಅನಿವಾರ್ಯತೆ ಇಲ್ಲ. ಆದರೆ ಎಲ್ಲಾ ಕ್ಷೇತ್ರಗಳಲ್ಲೂ ಆದರ್ಶ ವ್ಯಕ್ತಿಗಳು ಹೊರಹೊಮ್ಮಬೇಕು. ಆದರ್ಶದ ಬದುಕು ಸಾಗಿಸಿ, ದೇಶದ ಬೆಳವಣಿಗೆಗೆ ಕೊಡುಗೆ ನೀಡಬೇಕು. ಈ ನಿಟ್ಟಿನಲ್ಲಿ ವಿದ್ಯಾರ್ಥಿ ಸಮೂಹ ಹೆಜ್ಜೆ ಹಾಕಬೇಕು. ಸರಿ–ತಪ್ಪುಗಳ ಬಗ್ಗೆ ಅವಲೋಕಿಸಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಬೇಕು. ಜೆಎನ್‌ಯುನಲ್ಲಿ ದೇಶ ವಿರೋಧ ಘೋಷಣೆಗಳು ವ್ಯಕ್ತವಾಗಿದ್ದವು. ನಾವು ಈ ದೇಶದ ಪ್ರಜೆಯಾಗಿ ಅದನ್ನು ವಿರೋಧಿಸಬೇಕು. ಆ ಮೂಲಕ ದೇಶ ಮತ್ತು ಸಮಾಜ ಕಟ್ಟುವ ಕೆಲಸ ಮಾಡಬೇಕು ಎಂದರು.

ಇಂದು ಈಶಾನ್ಯ ರಾಜ್ಯಗಳಲ್ಲಿ ದೇಶಾಭಿಮಾನ ಮನೆ ಮಾಡಿದೆ. ಅಂತಹ ಬದಲಾವಣೆಗೆ 56 ವರ್ಷಗಳ ಹಿಂದೆ ಎಬಿವಿಪಿ ನಾಂದಿ ಹಾಡಿತು. ಅದಕ್ಕೂ ಪೂರ್ವದಲ್ಲಿ ನಾಗಲ್ಯಾಂಡ್‌ನ ಗೋಡೆ ಗೋಡೆಗಳಲ್ಲಿ 'ಭಾರತದ ನಾಯಿಗಳಿಗೆ ಇಲ್ಲಿ ಪ್ರವೇಶವಿಲ್ಲ' ಎಂದು ಬರೆಯುತ್ತಿದ್ದ ಸನ್ನಿವೇಶವಿತ್ತು. ಇಡೀ ದೇಶದಲ್ಲಿ ಅತ್ಯಂತ ಕಡಿಮೆ ಅವಧಿಯಲ್ಲಿ ನಂಬರ್ ಒನ್ ಸಂಘಟನೆಯಾಗಿ ಎಬಿವಿಪಿ ಹೊರಹೊಮ್ಮಿದೆ 45 ಲಕ್ಷ ಸದಸ್ಯರನ್ನು ಹೊಂದಿದ್ದು, 7 ಸಾವಿರಕ್ಕೂ ಹೆಚ್ಚು ಜಿಲ್ಲಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ದೇಶದ ಎಲ್ಲಾ ವಿವಿಗಳಲ್ಲಿ ಎಬಿವಿಪಿ ಸಂಘಟನೆ ಸಕ್ರಿಯವಾಗಿದೆ ಎಂದು ಹೇಳಿದರು.

ರಾಜೀವ್‌ಗಾಂಧಿ ಪ್ರಧಾನಿ ಆಗಿದ್ದ ಸಂದರ್ಭದಲ್ಲಿ ಇಡೀ ದೇಶದಲ್ಲಿ ಎಬಿವಿಪಿ ನಡೆಸಿದ ಹೋರಾಟ ಪರಿಣಾಮ 21 ವರ್ಷಕ್ಕಿದ್ದ ಮತದಾನದ ಹಕ್ಕು 18 ವರ್ಷಕ್ಕೆ ಇಳಿಕೆಯಾಯಿತು. ದೇಶದಲ್ಲಿ 1976ರ ಸಂದರ್ಭದಲ್ಲಿ ಇಡೀ ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆ ಮೂಲಕ ಪ್ರಜಾಪ್ರಭುತ್ವ ವಿರೋಧಿ ಆಡಳಿತ ತಲೆ ಎತ್ತಿತ್ತು. ಅದರ ವಿರುದ್ಧ ಜೆಪಿ (ಜಯಪ್ರಕಾಶ್ ನಾರಾಯಣ್) ನೇತೃತ್ವದಲ್ಲಿ ಎಬಿವಿಪಿ ಇಡೀ ದೇಶದಲ್ಲಿ ಚಳವಳಿ ರೂಪಿಸಿತು ಎಂದರು.

ಎಬಿವಿಪಿ ಜಿಲ್ಲಾ ಸಂಚಾಲಕ ಎಂ.ಶಿವು ಪ್ರಾಸ್ತಾವಿಕವಾಗಿ ಮಾತನಾಡಿ, ವೈಚಾರಿಕ ನೆಲೆಗಟ್ಟಿನಲ್ಲಿ ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹಾರಕ್ಕಾಗಿ ಕಾರ್ಯ ನಿರ್ವಹಿಸುತ್ತಿರುವ ಎಬಿವಿಪಿ ಇಂದು ವಿಶ್ವದ ಅತೀ ದೊಡ್ಡ ಸಂಘಟನೆಯಾಗಿ ಹೊರಹೊಮ್ಮಿದೆ. ನಮ್ಮ ನೆಲದ ಸಂಸ್ಕೃತಿ–ಸಂಸ್ಕಾರ ಉಳಿಸಿ ಬೆಳೆಸಲು ಸದಾ ಸಕ್ರಿಯವಾಗಿದೆ. ಶಿಕ್ಷಣ ಕ್ಷೇತ್ರದ ಸರ್ವವ್ಯಾಪಿಯಾಗಿ ವಿವಿಧ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ಸಂಘಟನೆ ಧ್ವಜಾರೋಹಣ ನೆರವೇರಿಸಲಾಯಿತು. ಸಭಾ ಕಾರ್ಯಕ್ರಮದ ಬಳಿಕ ಶತಮಾನೋತ್ಸವ ಭವನ ಸಮೀಪದ ಕೃಷ್ಣರಾಜ ಬುಲೇವಾರ್ಡ್ ರಸ್ತೆ, ಚಾಮರಾಜ ಜೋಡಿ ರಸ್ತೆ ಸೇರಿದಂತೆ ವಿವಿಧ ರಸ್ತೆಗಳಲ್ಲಿ ಶೋಭಾಯಾತ್ರೆ ನಡೆಸಲಾಯಿತು. ಎಬಿವಿಪಿ ಕರ್ನಾಟಕ ದಕ್ಷಿಣ ಪ್ರಾಂತದ ಪ್ರಾಂತ ಕಾರ್ಯ ಸಮಿತಿ ಸದಸ್ಯೆ ನಮಿತಾ ನಾರಾಯಣ, ಮೈಸೂರು ನಗರ ಕಾರ್ಯದರ್ಶಿ ಪ್ರಜ್ವಲ್ ವೇದಿಕೆಯಲ್ಲಿದ್ದರು. ಎಬಿವಿಪಿ ಸದಸ್ಯರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಎಬಿವಿಪಿ ಸರ್ವ ಸ್ಪರ್ಶಿ, ಸರ್ವ ವ್ಯಾಪ್ತಿ...

ಎಬಿವಿಪಿ ಸರ್ವ ಸ್ಪರ್ಶಿ, ಸರ್ವ ವ್ಯಾಪ್ತಿಯಾಗಿ ಕಟ್ಟಕಡೆಯ ವಿದ್ಯಾರ್ಥಿ ತಲುಪುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಸಮಾಜ ಬದಲಾವಣೆಗೆ ಅನೇಕ ರೀತಿ ಆಯಾಮ ಕೊಟ್ಟು ಸಮಾಜದ ವಿಕಾಸಕ್ಕೆ ಕಾರಣವಾಗಿದೆ. ಆಳವಾದ ಅಧ್ಯಯನದ ಮೂಲಕ ವಿದ್ಯಾರ್ಥಿಗಳ ಚಿಂತನೆಗಳು ಮೂಡಿಬರಬೇಕು. ಪ್ರಾಕೃತಿಕ ಅಸಮತೋಲನದಿಂದ ಇಂದು ಅವಘಡಗಳು ಸಂಭವಿಸುತ್ತಿವೆ. ಹಾಗಾಗಿ ಪ್ರಕೃತಿಗೆ ಪೂರಕವಾಗಿ ನಡೆಯಬೇಕು. ಭಾರತದ ಶಕ್ತಿ ವೃದ್ಧಿಸುವ ನಿಟ್ಟಿನಲ್ಲಿ ವಿದ್ಯಾರ್ಥಿ ಸಮೂಹ ಚಿಂತಿಸಬೇಕು.

-ಸ್ವಾಮಿ ಮರಳಾಪುರ

5 ಕೋಟಿ ವೆಚ್ಚದ ಗುರುಭವನ ಕಾಮಗಾರಿಗೆ ಭೂಮಿ ಪೂಜೆ

ಶೀಘ್ರ ಬಸವ ಪುತ್ತಳಿ, 8 ಸಮುದಾಯ ಭವನಕ್ಕೆ ಚಾಲನೆ: ಶಾಸಕ ಬಿ.ಹರ್ಷವರ್ಧನ್

ನಂಜನಗೂಡು, ಫೆ.11– ಸುಸಜ್ಜಿತ ಗುರುಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದ್ದು, ಆ ಮೂಲಕ ಶಿಕ್ಷಕರ ಬಹು ವರ್ಷಗಳ ಬೇಡಿಕೆ ಈಡೇರಿಸಲಾಗಿದೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಗರದ ರೇಷ್ಮೆ ಇಲಾಖೆ ಆವರಣದಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ಗುರುಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, 2018ಕ್ಕೂ ಮುಂಚೆ ಕ್ರಿಯಾಯೋಜನೆ ಸಿದ್ಧಪಡಿಸಿದರೂ, ಅನುದಾನ ಬಿಡುಗಡೆಯಾಗದೆ, ಟೆಂಡರ್ ಪ್ರಕ್ರಿಯೆ ನಡೆಸದೆ ಬರೀ ಪ್ರಚಾರಕ್ಕಾಗಿ ಗುದ್ದಲಿಪೂಜೆ ನೆರವೇರಿಸುತ್ತಿದ್ದರು. ಆದರೆ ಕೆಲಸ ಪ್ರಾರಂಭವಾಗುತ್ತಿರಲಿಲ್ಲ. ನಾನು ಭೂಮಿ ಪೂಜೆ ನೆರವೇರಿಸಿದ ನಂತರ ಕೆಲಸ ಪ್ರಾರಂಭವಾಗಿ ಮುಕ್ತಾಯಗೊಳ್ಳುತ್ತಿದೆ. ಕ್ಷೇತ್ರದಲ್ಲಿ ನಾನು ಮಾಡಿರುವ ಕೆಲಸಗಳು ಕಣ್ಣಿಗೆ ರಾಚುವಂತಿವೆ ಎಂದ ಅವರು, ಬಸವ ಪುತ್ಥಳಿ ಮತ್ತು 8 ಸಮುದಾಯ ಭವನಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆಯಾಗಿದ್ದು ಶೀಘ್ರ ಭೂಮಿ ಪೂಜೆ ನೆರವೇರಿಸಲಾಗುವುದು ಎಂದರು.

ಕೊಟ್ಟ ಮಾತಿನಂತೆ ನಡೆದಿದ್ದೇನೆ: ನಾನು ಶಾಸಕನಾಗಿ ಆಯ್ಕೆಯಾದ ಬಳಿಕ ಗುರುಭವನ ನಿರ್ಮಿಸಿ ಕೊಡುವುದಾಗಿ ಭರವಸೆ ನೀಡಿದ್ದೆ. ನಗರದ ರೇಷ್ಮೆ ಇಲಾಖೆ ಜಾಗವನ್ನು ಕಂದಾಯ ಇಲಾಖೆಗೆ ಹಸ್ತಾಂತರಿಸಲು ಹಲವು ಸಮಸ್ಯೆ ಉದ್ಭವಿಸಿದವು. ನಾನು ವಿಧಾನಸೌಧದಿಂದ ವಿಕಾಸಸೌಧಕ್ಕೆ ಕಡತವನ್ನು ಕೈಯಲ್ಲಿಡಿದುಕೊಂಡು ಅಲೆದು ಹಠಕ್ಕೆ ಬಿದ್ದು 1 ಎಕರೆ 15 ಕುಂಟೆ ಜಾಗ ಮಂಜೂರಾತಿ ಮಾಡಿಸಿದ್ದೇನೆ. ಅಲ್ಲದೇ 5 ಕೋಟಿ ವೆಚ್ಚದಲ್ಲಿ ಗುರುಭವನ ನಿರ್ಮಾಣಕ್ಕೆ ಯೋಜನೆ ಸಿದ್ಧಪಡಿಸಿದ್ದು, 25 ಲಕ್ಷ ಅನುದಾನ ಬಿಡುಗಡೆಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ನಮ್ಮದೇ ಸರ್ಕಾರ ಬರಲಿದ್ದು, ಆದ್ಯತೆ ಮೇರೆಗೆ 2 ಕೋಟಿ ರೂ. ಬಿಡುಗಡೆಗೊಳಿಸಿ ಗುರುಭವನ ಪೂರ್ಣಗೊಳಿಸುತ್ತೇನೆ ಎಂದು ಭರವಸೆ ನೀಡಿದರು.



ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ಮಾತನಾಡಿ, ಗುರುಭವನಕ್ಕೆ ಜಾಗ ನೀಡಲು ಶಾಸಕರು ನಾಲ್ವರು ಶಿಕ್ಷಣ ಸಚಿವರು ಬದಲಾದರೂ ಎಡೆಬಿಡದೆ ಸತತ ಪ್ರಯತ್ನ ನಡೆಸಿ ಇದ್ದ ಅಡೆ ತಡೆಯನ್ನೆಲ್ಲಾ ನಿವಾರಿಸಿ ಜಾಗ ಮಂಜೂರು ಮಾಡಿಸುವ ಜೊತೆಗೆ 25 ಲಕ್ಷ ಅನುದಾನ ನೀಡಿ ಕಾಮಗಾರಿ ಪ್ರಾರಂಭಿಸಿದ್ದಾರೆ. ಜೊತೆಗೆ ಕ್ಷೇತ್ರದಲ್ಲಿ 138 ಶಾಲಾ ಕೊಠಡಿ ನಿರ್ಮಾಣಕ್ಕೆ ಅನುದಾನ ನೀಡಿದ್ದಲ್ಲದೆ ವಿವೇಕ ಯೋಜನೆಯಲ್ಲಿ 37 ಶಾಲಾ ಕೊಠಡಿ ಮಂಜೂರಾತಿ ಮಾಡಿಸಿದ್ದಾರೆ. 8 ಅಮೃತ ಶಾಲೆ ನಿರ್ಮಿಸಿ ಕೊಡುವ ಮೂಲಕ ಮೂಲ ಸೌಕರ್ಯ ಒದಗಿಸಿದ್ದಾರೆ. ಅಲ್ಲದೆ ಶಿಕ್ಷಕರ ಸಮಸ್ಯೆಗಳಿಗೂ ಸ್ಪಂದಿಸುತ್ತಾ ಶ್ರಮಿಸುತ್ತಿದ್ದಾರೆ ಎಂದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಧರ್ಮ ರತ್ನಾಕರ ಮಾತನಾಡಿ, ಶಿಕ್ಷಕರಿಗೆ ಅನುಕೂಲ ಕಲ್ಪಿಸಿರುವವರನ್ನು ಸ್ಮರಿಸುವುದು ನಮ್ಮ ಕರ್ತವ್ಯ. ಅದರಂತೆ ಶಾಸಕ ಹರ್ಷವರ್ಧನ್ ಶಿಕ್ಷಣ ಪ್ರೇಮಿಯಾಗಿದ್ದು, ಕ್ಷೇತ್ರದಲ್ಲಿ ಶಿಕ್ಷಕರಿಗಾಗಿ ಒಳ್ಳೆ ಕೆಲಸ ಮಾಡಿದ್ದಾರೆ. ಅವರಿಗೆ ಮತ್ತೊಮ್ಮೆ ಶಿಕ್ಷಕರೆಲ್ಲರೂ ಆಶೀರ್ವದಿಸೋಣ ಎಂದು ಕರೆ ನೀಡಿದರು.

ಈ ವೇಳೆ ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಸೋಮೇಗೌಡ, ಮುದ್ದು ಮಾದೇಗೌಡ, ಲೀಲಾ, ಶಿಕ್ಷಣ ಸಂಯೋಜಕರಾದ ಕೆ.ಜಿ.ಮಹೇಶ್, ಮಹೇಶ್, ಚೆನ್ನಪ್ಪ, ಪ್ರಸನ್ನ ಸೇರಿದಂತೆ ಹಲವು ಶಿಕ್ಷಕರಿದ್ದರು.

> ಯಾವುದೇ ಕ್ಷೇತ್ರದ ಅಭಿವೃದ್ಧಿಗೆ ಉತ್ತಮ ಶಿಕ್ಷಣ ವ್ಯವಸ್ಥೆ, ಆಸ್ಪತ್ರೆ, ರಸ್ತೆಗಳಿರಬೇಕು. ಸಂಸದ ವಿ.ಶ್ರೀನಿವಾಸಪ್ರಸಾದ್ ಕನಸಿನಂತೆ ನಂಜನಗೂಡನ್ನು ಸ್ಯಾಟಲೈಟ್ ಟೌನ್ ಮಾಡಲು ಮೂಲ ಸೌಕರ್ಯ ಅಭಿವೃದ್ಧಿಪಡಿಸಲಾಗಿದೆ. ಗುರುಭವನ ಶಿಕ್ಷಣ ವ್ಯವಸ್ಥೆ ಹೇಗಿದೆ ಎಂಬುದನ್ನು ಪ್ರತಿಬಿಂಬಿಸುತ್ತದೆ. ಆದ್ದರಿಂದ ಸುಸಜ್ಜಿತ ಭವನ ನಿರ್ಮಾಣಕ್ಕೆ ಮುಂದಾಗಿದ್ದೇನೆ. ಅಲ್ಲದೆ ನಾನು ಆಯ್ಕೆಯಾದ ನಂತರ 25 ಕೋಟಿ ರೂ. ಅನುದಾನ ತಂದು ಶಾಲಾ ಕಟ್ಟಡಗಳ ನಿರ್ಮಾಣಗೊಳಿಸಿ ಭೌತಿಕ ಕಟ್ಟಡ ಉತ್ತಮಗೊಳಿಸಿದ್ದೇನೆ. ಅಲ್ಲದೆ ಶತಮಾನಗಳ ಶಾಲೆಯಾದ ಜ್ಯೂನಿಯರ್ ಕಾಲೇಜಿಗೆ 47 ಲಕ್ಷ ಅನುದಾನ ನೀಡಿ ದುರಸ್ತಿ ಮಾಡಲಾಗಿದೆ. ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ನಿರ್ಮಿಸುವುದು ನನ್ನ ಕನಸಾಗಿದೆ. ಆ ಕನಸು ನನಸು ಮಾಡಲು ಮತ್ತೊಮ್ಮೆ ನೀವು ಆಶೀರ್ವದಿಸಿ.
> – ಬಿ.ಹರ್ಷವರ್ಧನ್, ಶಾಸಕ

ಇಂದು ಶಾಸಕ ಅನಿಲ್ ಚಿಕ್ಕಮಾದು ಹುಟ್ಟುಹಬ್ಬ

ಹೆಚ್.ಡಿ.ಕೋಟೆ, ಫೆ.11– ಕೋಟೆ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕ ಅನಿಲ್ ಚಿಕ್ಕಮಾದು ಅವರ 34ನೇ ಹುಟ್ಟುಹಬ್ಬವನ್ನು ಫೆ.12ರಂದು ಭಾನುವಾರ ಅದ್ಧೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಕಾಂಗ್ರೆಸ್ ಮುಖಂಡ ಸತೀಶ್‌ಗೌಡ ತಿಳಿಸಿದ್ದಾರೆ.



ಹುಟ್ಟುಹಬ್ಬ ಅಂಗವಾಗಿ ಬೆಳಗ್ಗೆ ತಾಲೂಕಿನ ಕಂಚಮಳ್ಳಿ ಗೇಟ್‌ಗೆ ಆಗಮಿಸುವ ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಸಾವಿರಾರು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಅದ್ಧೂರಿಯಾಗಿ ಸ್ವಾಗತಿಸಲಿದ್ದಾರೆ. ನಂತರ ಅಲ್ಲಿಂದ ಹಂಪಾಪುರ, ಹೊಮ್ಮರಗಳ್ಳಿ, ಕೋಳಗಾಲ, ಮಾದಾಪುರ, ಹೈರಿಗೆ ಮೂಲಕ ಬೈಕ್ ರ್‍ಯಾಲಿಯಲ್ಲಿ ಶಾಸಕರನ್ನು ಕರೆತರಲಾಗುವುದು. ಈ ವೇಳೆ ದಾರಿಯುದ್ದಕ್ಕೂ ಅಭಿಮಾನಿಗಳು ಹಾಗೂ ಕಾರ್ಯಕರ್ತರು ಕೇಕ್ ಕತ್ತರಿಸಿ ಹುಟ್ಟುಹಬ್ಬದ ಶುಭಾಶಯ ಕೋರುವರು. ನಂತರ ಶಾಸಕ ಅನಿಲ್ ಚಿಕ್ಕಮಾದು ಕುಟುಂಬ ಸಮೇತರಾಗಿ ತಾಲೂಕಿನ ಶಕ್ತಿದೇವತೆ ಚಿಕ್ಕದೇವಮ್ಮನ ಬೆಟ್ಟಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸುವರು. ಈ ವೇಳೆ ಶಾಸಕರ ತಾಯಿ ನಾಗಮ್ಮ, ಪತ್ನಿ ಸೌಮ್ಯ, ಪುತ್ರಿ ರಿಷಿಕ ಸೇರಿದಂತೆ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಉಪಸ್ಥಿತರಿರುವರು. ಬಳಿಕ ಸರಗೂರಿನ ಗಣಪತಿ ದೇವಾಲಯದಲ್ಲೂ ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ನಂತರ ಸರಗೂರಿನಲ್ಲಿ ಬೃಹತ್ ಗಾತ್ರದ ಕೇಕ್ ಕತ್ತರಿಸುವ ಮೂಲಕ ಶಾಸಕ ಅನಿಲ್ ಚಿಕ್ಕಮಾದು ಹುಟ್ಟುಹಬ್ಬ ಆಚರಿಸಿಕೊಳ್ಳಲಿದ್ದಾರೆ ಎಂದರು.

ಬಳಿಕ ಮೆರವಣಿಗೆಯಲ್ಲಿ ತೆರಳುವ ಶಾಸಕರಿಗೆ ಹ್ಯಾಂಡ್‌ಪೋಸ್ಟ್ ವೃತ್ತದಲ್ಲಿ ಬೃಹತ್ ಗಾತ್ರದ ಸೇಬಿನ ಹಾರ ಹಾಕುವ ಮೂಲಕ ಕಾರ್ಯಕರ್ತರು, ಅಭಿಮಾನಿಗಳು ಶುಭಾಶಯ ಕೋರಲಿದ್ದಾರೆ ಎಂದರು. ಬಳಿಕ ಹೆಚ್.ಡಿ.ಕೋಟೆಯಲ್ಲಿರುವ ನಿವಾಸದಲ್ಲಿ ಕಾರ್ಯಕರ್ತರು ಹಾಗೂ ಮುಖಂಡರ ಸಮ್ಮುಖದಲ್ಲಿ ಬೃಹತ್ ಕೇಕ್ ಕತ್ತರಿಸುವ ಮೂಲಕ ಶಾಸಕ ಅನಿಲ್ ಚಿಕ್ಕಮಾದು ಹುಟ್ಟುಹಬ್ಬ ಆಚರಿಸಿಕೊಳ್ಳಲಿದ್ದಾರೆ. ಹುಟ್ಟುಹಬ್ಬ ಅಂಗವಾಗಿ ಸಾರ್ವಜನಿಕರಿಗೆ ಊಟದ ವ್ಯವಸ್ಥೆ ಮಾಡಲಾಗಿದೆ ಎಂದರು.

18 ವರ್ಷ ತುಂಬಿದವರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಿ

ಮತದಾನದ ಜಾಗೃತಿ ಮೂಡಿಸುವ ಸಭೆಯಲ್ಲಿ ತಾಪಂ ಇಓ ಸಿ.ಕೃಷ್ಣ ಕರೆ

ತಿ.ನರಸೀಪುರ, ಫೆ.11– 18 ವರ್ಷ ತುಂಬಿದ ಯುವಕ, ಯುವತಿಯರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಿ, ಮತದಾನ ಮಾಡಲು ಅರಿವು ಮೂಡಿಸುವಂತೆ ತಾಪಂ ಇಓ ಸಿ.ಕೃಷ್ಣ ಕರೆ ನೀಡಿದರು.



ಪಟ್ಟಣದ ತಾಪಂ ಸಭಾಂಗಣದಲ್ಲಿ ತಾಪಂ ಸ್ವೀಪ್ ಸಮಿತಿ ವತಿಯಿಂದ ನಡೆದ ತಾಲೂಕಿನ ಎಲ್ಲಾ ಗ್ರಾಪಂ ವ್ಯಾಪ್ತಿಯ ಮಹಿಳಾ ಸಂಘಗಳ ಪ್ರತಿನಿಧಿಗಳು, ಎನ್‌ಆರ್‌ಎಲ್ ಹಾಗೂ ಚುನಾವಣಾ ಸಿಬ್ಬಂದಿ, ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳಿಗೆ ಮತದಾನದ ಬಗ್ಗೆ ಜಾಗೃತಿ ಮೂಡಿಸುವ ಸಂಬಂಧ ಕರೆದಿದ್ದ ಸಭೆಯಲ್ಲಿ ಅವರು ಮಾತನಾಡಿದರು.

18 ವರ್ಷ ತುಂಬಿದವರನ್ನು ಮತದಾನದ ಪಟ್ಟಿಗೆ ಕಡ್ಡಾಯವಾಗಿ ಸೇರ್ಪಡೆ ಮಾಡಬೇಕು. ಅವರು ಕಡ್ಡಾಯವಾಗಿ ಮತದಾನ ಮಾಡಬೇಕು. ಯಾವುದೇ ಕಾರಣಕ್ಕೂ ಮತದಾರರ ಪಟ್ಟಿಯಿಂದ ಹಾಗೂ ಮತದಾನದಿಂದ ವಂಚಿತರಾಗಬಾರದು. ಹೀಗಾಗಿ ಗ್ರಾಮೀಣ ಭಾಗದ ಜನರಲ್ಲಿ ಜಾಗೃತಿ ಮೂಡಿಸುವಂತೆ ತಿಳಿಸಿದರು.

ಇದೇ ವೇಳೆ ಕರಪತ್ರಗಳ ವಿತರಣೆ, ಅರಿವು ಮೂಡಿಸುವ ವಿಡಿಯೋ ಪ್ರದರ್ಶನದ ಮೂಲಕ ಪ್ರತಿನಿಧಿಗಳಿಗೆ ಮಾಹಿತಿ ನೀಡಲಾಯಿತು. ಸಭೆಯಲ್ಲಿ ಎನ್‌ಆರ್‌ಎಲ್‌ಎಂನ ರೂಪಶ್ರೀ, ವಲಯ ಮೇಲ್ವಿಚಾರಕರಾದ ಸುರೇಶ್, ಮೋಹನ್ ಕುಮಾರಿ, ಹರ್ಷಿತ್ ಎಸ್‌ಇಪಿ ತಾಲೂಕು ವ್ಯವಸ್ಥಾಪಕ ಮನು ಹಾಗೂ ಇತರೆ ಪ್ರತಿನಿಧಿಗಳು ಹಾಜರಿದ್ದರು.

ಹುಣಸೂರಲ್ಲಿ ಉಚಿತ ಆರೋಗ್ಯ ತಪಾಸಣಾ, ರಕ್ತದಾನ ಶಿಬಿರ

ಹುಣಸೂರು, ಫೆ.11– ಮಾಜಿ ಪುರಸಭಾಧ್ಯಕ್ಷ ದಿ.ಕೆ.ಬಿ.ಶಿವಪ್ಪ ಮತ್ತು ಚಿಕ್ಕತಾಯಮ್ಮನವರ ಸ್ಮರಣಾರ್ಥ ಮಾತೃತ್ವ ಹೆಲ್ತ್‌ಕೇರ್ ಸರ್ವೀಸಸ್ ಮತ್ತು ಲಯನ್ಸ್ ಸಂಸ್ಥೆ ಮೈಸೂರು ವತಿಯಿಂದ ನಗರದಲ್ಲಿ ಉಚಿತ ಆರೋಗ್ಯ ತಪಾಸಣಾ ಹಾಗೂ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು. ನಗರದ ಕಲ್ಕುಣಿಕೆ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ದೀಪ ಬೆಳಗುವ ಮೂಲಕ ಆರೋಗ್ಯ ತಪಾಸಣಾ ಹಾಗೂ ರಕ್ತದಾನ ಶಿಬಿರವನ್ನು ಲಯನ್ಸ್ ಸಂಸ್ಥೆ ಅಧ್ಯಕ್ಷ ವಿನೋದ್ ರಾಶಿಂಕರ್ ಹಾಗೂ ನಗರಸಭಾ ಸದಸ್ಯ ಸಾಯಿನಾಥ್ ಉದ್ಘಾಟಿಸಿದರು.

ನಗರಸಭಾ ಸದಸ್ಯ ಸಾಯಿನಾಥ್ ಮಾತನಾಡಿ, ದಿ.ಶಿವಪ್ಪನವರು ಅಧ್ಯಕ್ಷರಾಗಿದ್ದಾಗ ಅನೇಕ ಅಭಿವೃದ್ಧಿ ಕಾರ್ಯದ ಜೊತೆಗೆ ದೀನ–ದಲಿತರಿಗೆ ಸಹಾಯ ಮಾಡಿದ್ದರು. ಅವರ ಸ್ಮರಣಾರ್ಥ ಅವರ ಕುಟುಂಬದವರು ಆರೋಗ್ಯ ಶಿಬಿರ ನಡೆಸುತ್ತಿರುವುದು ಶ್ಲಾಘನೀಯ ಎಂದರು.

ಲಯನ್ಸ್ ಸಂಸ್ಥೆ ಅಧ್ಯಕ್ಷ ವಿನೋದ್ ರಾಶಿಂಕರ್ ಮಾತನಾಡಿದರು. ಬಿಜೆಪಿ ನಗರ ಯುವ ಮೋರ್ಚಾ ಅಧ್ಯಕ್ಷ ಚೇತನ್ ಕುಮಾರ್ ಮಾತನಾಡಿ, ನಮ್ಮ ತಾತ ದಿ.ಕೆ.ಬಿ.ಶಿವಪ್ಪ ಮಾಡಿದಂತಹ ಅನೇಕ ಸಮಾಜಮುಖಿ ಕಾರ್ಯಗಳನ್ನು ಇಂದಿಗೂ ಜನ ನೆನೆಸಿಕೊಳ್ಳುತ್ತಾರೆ. ಇಂದು ನನ್ನ ಜನ್ಮದಿನವನ್ನು ಆರೋಗ್ಯ ಸೇವೆ ಮಾಡುವ ಮೂಲಕ ಆಚರಿಸಿಕೊಳ್ಳುತ್ತಿದ್ದೇನೆ ಎಂದರು.



ಈ ವೇಳೆ 400ಕ್ಕೂ ಹೆಚ್ಚು ಮಂದಿ ಶಿಬಿರದಲ್ಲಿ ಪಾಲ್ಗೊಂಡು ತಪಾಸಣೆಗೆ ಒಳಪಟ್ಟರು. 25 ಮಂದಿ ರಕ್ತದಾನ ಮಾಡಿದರೆ, 270 ವಿದ್ಯಾರ್ಥಿಗಳು ದಂತ ತಪಾಸಣೆ ಮಾಡಿಸಿಕೊಂಡರು ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ದೇವರಹಳ್ಳಿ ಸೋಮಶೇಖರ್, ನಗರಸಭಾ ಸದಸ್ಯರಾದ ಗಣೇಶ್ ಕುಮಾರಸ್ವಾಮಿ, ವಿವೇಕಾನಂದ, ರಮೇಶ್, ಅರುಣ್ ಚವ್ಹಾಣ್, ಶ್ರೀನಿವಾಸ್, ಮಾಜಿ ಪುರಸಭಾ ಸದಸ್ಯ ಆನಂದ್, ವೈದ್ಯರಾದ ಡಾ.ಶ್ವೇತ, ಡಾ.ಶ್ರುತಿ, ಮಹೇಂದ್ರ ಹೆಗ್ಡೆ, ದ್ರಾಕ್ಷಾಯಿಣಿ, ಮೀನಾ ಹಾಗೂ ಇತರರಿದ್ದರು.


ಸೈನಿಕರಂತೆ ಅರಣ್ಯ ರಕ್ಷಕರು ದೇಶದ ಹಸಿರು ಸೇನಾನಿಗಳು

ಅಡವಿ ಅಲರ್ಟ್ ಫೌಂಡೇಷನ್ ಮುಖ್ಯಸ್ಥ ಪವನ್ ಜೋಷಿ



ಹುಣಸೂರು, ಫೆ.11– ದೇಶ ಕಾಯುವ ಸೈನಿಕರಂತೆ ಅರಣ್ಯ ಸಂರಕ್ಷಿಸುವ ಅರಣ್ಯ ರಕ್ಷಕರು ಈ ದೇಶದ ಹಸಿರು ಸೇನಾನಿಗಳು ಎಂದು ಅಡವಿ ಅಲರ್ಟ್ ಫೌಂಡೇಷನ್ ಮುಖ್ಯಸ್ಥ ಪವನ್ ಜೋಷಿ ತಿಳಿಸಿದರು.

ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ ಕರ್ತವ್ಯ ನಿರ್ವಹಿಸುವ 200 ಅರಣ್ಯ ರಕ್ಷಕರಿಗೆ ಟೋಪಿ (ಕ್ಯಾಪ್) ವಿತರಿಸಿ ಮಾತನಾಡಿದ ಅವರು, ನಾವು ಮುಂದಿನ ದಿನಗಳಲ್ಲಿ ಅರಣ್ಯ ಕಾಯುವ ಮುಂಚೂಣಿ ಸಿಬ್ಬಂದಿಗಳಿಗೆ ಉಪಯೋಗವಾಗುವ ವಸ್ತುಗಳನ್ನು ನೀಡಲಿದ್ದೇವೆ. ಅರಣ್ಯ ಮತ್ತು ಪರಿಸರ ಉಳಿಸುವ ಪ್ರಾಮಾಣಿಕ ಅಧಿಕಾರಿಗಳೆಂದರೆ ಅರಣ್ಯದೊಳಗೆ ಕೆಲಸ ಮಾಡುವ ಸಿಬ್ಬಂದಿಗಳು. ಅವರಿಗೆ ಸರ್ಕಾರ ಇನ್ನು ಹಲವು ಆಧುನಿಕ ಸಲಕರಣೆಗಳನ್ನು ನೀಡಿ ಅರಣ್ಯ ಸಂರಕ್ಷಣೆಗೆ ಮುಂದಾಗಬೇಕೆಂದು ತಿಳಿಸಿದರು. ಈ ವೇಳೆ ಆನೆ ಚೌಕೂರು ವಲಯ ಅರಣ್ಯಾಧಿಕಾರಿ ದಿಲೀಪ್, ತಿತಿಮತಿ ವಲಯ ಅರಣ್ಯ ಅಧಿಕಾರಿ ಅಶೋಕ್, ಉಪವಲಯ ಅರಣ್ಯಾಧಿಕಾರಿ ಶ್ರೀನಿವಾಸ್, ಯೋಗೇಶ್ವರಿ ಮತ್ತು ಅರಣ್ಯ ಇಲಾಖೆ ಸಿಬ್ಬಂದಿ ವರ್ಗ ಹಾಜರಿದ್ದರು.



ಜಯಪುರ ಹೋಬಳಿ ಡಿ.ಸಾಲುಂಡಿ ಗ್ರಾಮದ ಬಸವೇಶ್ವರ ನವಚೇತನ ಟ್ರಸ್ಟ್ ವಿಶೇಷ ಮಕ್ಕಳೊಂದಿಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹುಟ್ಟುಹಬ್ಬ ಆಚರಿಸಿಕೊಂಡು, ಮಕ್ಕಳಿಗೆ ಸಿಹಿ ವಿತರಿಸಿದರು. ಇದೇ ವೇಳೆ ಕಾಂಗ್ರೆಸ್ ಮುಖಂಡರಾದ ಶಾಂತಮ್ಮ, ರಾಮಕೃಷ್ಣ ದಂಪತಿ ವಿಶೇಷ ಮಕ್ಕಳ ಶಾಲೆಗೆ 25 ಸಾವಿರ ಮೌಲ್ಯದ ದಿನಸಿ ಸಾಮಾನು ನೀಡಿದರು. ಮುಖಂಡರಾದ ದೊಡ್ಡೇಗೌಡ, ಆನಂದ್, ರಾಧಾ, ಟ್ರಸ್ಟ್ ಸಂಸ್ಥಾಪಕ ಮರೀಗೌಡ ಇದ್ದರು.

ಪೌಷ್ಟಿಕ ಆಹಾರ ಸೇವನೆಯಿಂದ ದೈಹಿಕ, ಮಾನಸಿಕ ಕ್ಷಮತೆ ಹೆಚ್ಚಳ

ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ಶಶಿಕಲಾ



ತಿ.ನರಸೀಪುರ, ಫೆ.11– ಪೌಷ್ಟಿಕ ಆಹಾರ ಸೇವನೆಯಿಂದ ದೈಹಿಕ ಮತ್ತು ಮಾನಸಿಕ ಕ್ಷಮತೆ ಹೆಚ್ಚುತ್ತದೆ. ಹಾಗಾಗಿ ಮಕ್ಕಳಿಗೆ ದಿನನಿತ್ಯ ಪೌಷ್ಟಿಕಾಂಶಯುಕ್ತ ಆಹಾರಗಳನ್ನೇ ನೀಡಬೇಕು ಎಂದು ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ಶಶಿಕಲಾ ತಿಳಿಸಿದರು.

ತಾಲೂಕಿನ ಮೂಗೂರಿನ ಕರ್ನಾಟಕ ಪಬ್ಲಿಕ್ ಶಾಲೆ(ಪ್ರಾಥಮಿಕ)ಯಲ್ಲಿ ಹಮ್ಮಿಕೊಂಡಿದ್ದ ಶಾಲಾ ಸಾಮಾಜಿಕ ಲೆಕ್ಕಪರಿಶೋಧನೆ ಮತ್ತು ಪ್ರಧಾನಮಂತ್ರಿ ಪೋಷಣ್ ಅಭಿಯಾನ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

ದೇಶದಲ್ಲಿ ಮಕ್ಕಳು ಮತ್ತು ಮಹಿಳೆಯರು ಹೆಚ್ಚು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಹಾಗಾಗಿ ಮಹಿಳೆಯರು ಮತ್ತು ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಬೇಕು ಎಂದರು.

ತಾಲೂಕಿನ ಎಂ.ಕೆಬ್ಬೆಹುಂಡಿ, ಹೆಮ್ಮಿಗೆ, ಮೂಗೂರು(ಕೆಪಿಎಸ್‌ಸಿ), ಕುಪ್ಯ ಮತ್ತು ವಿದ್ಯೋದಯ ಸೇರಿದಂತೆ 5 ಹಿರಿಯ ಪ್ರಾಥಮಿಕ ಶಾಲೆಗಳನ್ನು ಲೆಕ್ಕ ಪರಿಶೋಧನೆಗೆ ಆಯ್ಕೆ ಮಾಡಿದ್ದು, ಮಕ್ಕಳು ತಮ್ಮ ಸಮಸ್ಯೆ ಹೇಳಿಕೊಳ್ಳಲು ಸಹಾಯವಾಣಿ ಪೆಟ್ಟಿಗೆ ಇಡಬೇಕು. ಶುಚಿತ್ವ, ಕುಡಿಯುವ ನೀರು, ಶೌಚಾಲಯ, ಅನ್ನಭಾಗ್ಯ ಯೋಜನೆಯಡಿ ಪೋಷಕಾಂಶಯುಕ್ತ ಆಹಾರ ನೀಡಲು ಸೂಚನೆ ನೀಡಲಾಯಿತು.

ಈ ವೇಳೆ ಸಹಾಯಕ ಲೆಕ್ಕ ಪರಿಶೋಧಕ ರಂಗರಾಜು, ಗ್ರಾಪಂ ಅಧ್ಯಕ್ಷೆ ಚಂದ್ರಮ್ಮ, ಪಿಡಿಓ ಪೂರ್ಣಿಮಾ, ಕಾರ್ಯದರ್ಶಿ ದೀಪಾ, ಮುಖ್ಯಶಿಕ್ಷಕಿ ಭ್ರಮರಾಂಭ, ಕೆಪಿಎಸ್ ಬಾಲಕಿಯರ ವಿಭಾಗದ ಎಸ್‌ಡಿಎಂಸಿ ಅಧ್ಯಕ್ಷ ಸಿದ್ದರಾಜು, ಮಹೇಶ.ಎಸ್, ಸದಸ್ಯರಾದ ಎಂ.ಎನ್.ರಾಜು, ಗುರುಸ್ವಾಮಿ, ಕೆ.ಮಹೇಶ, ಮೈತ್ರಿ ಗಿರೀಶ್, ತೋಟಗಾರಿಕೆ ಸಹಾಯಕ ಅಧಿಕಾರಿ ವಿಶ್ವನಾಥ್, ಎಸ್‌ಡಿಎ ಜವರೇಗೌಡ, ಶಿಕ್ಷಕರಾದ ಪ್ರಕಾಶ್, ವಿಶ್ವನಾಥ್, ತುಳಸಿ, ಪ್ರೇಮ, ಚಂದ್ರಿಕಾ, ವಿದ್ಯಾಶ್ರೀ, ಮರೀಗೌಡ, ಆನಂದ್, ಚಂದ್ರಿಕಾ, ಸಲೀನಾ, ದೈಹಿಕ ಶಿಕ್ಷಕ ಪ್ರೇಮಚಂದ್ರಪಾಲ್, ಶಾಲೆ ಅಡುಗೆಯವರು, ಪೋಷಕರು ಹಾಗೂ ಗ್ರಾಮಸ್ಥರು ಹಾಜರಿದ್ದರು.



ನಂಜನಗೂಡು ತಾಲೂಕಿನ ಮಲ್ಕುಂಡಿ ಗ್ರಾಮದಲ್ಲಿ ಶ್ರೀ ಅಯ್ಯಪ್ಪ ಸ್ವಾಮಿ ಭಕ್ತಿ ಮಂಡಳಿಯಿಂದ ಪಡಿಪೂಜೆ ಏರ್ಪಡಿಸಲಾಗಿತ್ತು. ಈ ವೇಳೆ ಗುರುಸ್ವಾಮಿಗಳಾದ ಎಂ.ಪುಟ್ಟಸ್ವಾಮಿ, ಎಂ.ಪಿ.ಶ್ರೀನಿವಾಸ್ ಸೇರಿದಂತೆ ಸ್ವಾಮಿಗಳು ಹಾಜರಿದ್ದರು.

ವಾರದ ಅವಧಿಗೆ ರಿಯಾಯ್ತಿ ವಿಸ್ತರಿಸಲು ಮನವಿ

ಮೈಸೂರು, ಫೆ.11(ಆರ್‌ಕೆ)–ರಿಯಾಯ್ತಿ ದರದಲ್ಲಿ ಸಂಚಾರ ನಿಯಮ ಉಲ್ಲಂಘನೆ ದಂಡ ಪಾವತಿಸಲು ಕಾಲಾವಧಿಯನ್ನು ಮತ್ತೊಂದು ವಾರದ ಅವಧಿಗೆ ವಿಸ್ತರಿಸಬೇಕೆಂದು ಮೈಸೂರು ನಗರ ಕಾಂಗ್ರೆಸ್ ಪಕ್ಷದ ವಕ್ತಾರ ಟಿ.ಶ್ರೀನಿವಾಸ್ ಮನವಿ ಮಾಡಿದ್ದಾರೆ. ಶೇ.50ರಷ್ಟು ರಿಯಾಯಿತಿ ನೀಡಿರುವುದು ಸ್ವಾಗತಾರ್ಹ. ಆದರೆ, ಕಡಿಮೆ ಅವಧಿಯಲ್ಲಿ ಹಣ ಹೊಂದಿಸಲು ಬಡವರು, ಕೂಲಿ ಕಾರ್ಮಿಕರು ಹಾಗೂ ಮಧ್ಯಮ ವರ್ಗದವರಿಗೆ ಕಷ್ಟವಾಗಿದೆ. ಅಲ್ಲದೇ ನೂಕು–ನುಗ್ಗಲಿನಲ್ಲಿ ದಂಡದ ಹಣ ಪಾವತಿಸಲು ಕೆಲವರಿಗೆ ಸಾಧ್ಯವಾಗದ ಕಾರಣ ಒಂದು ವಾರದವರೆಗೆ ವಿಸ್ತರಿಸಿ ಎಲ್ಲರಿಗೂ ಅವಕಾಶ ನೀಡುವಂತೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಲ್ಲಿ ಅವರು ಮನವಿ ಮಾಡಿದ್ದಾರೆ.



ಹನಗೋಡು ಗ್ರಾಪಂ ವ್ಯಾಪ್ತಿಯ ಕಾಂಗ್ರೆಸ್ ಕಾರ್ಯಕರ್ತರು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡರ ನೇತೃತ್ವದಲ್ಲಿ ಜೆಡಿಎಸ್‌ಗೆ ಸೇರ್ಪಡೆಯಾದರು. ಹನಗೋಡು ಗ್ರಾಪಂ ಅಧ್ಯಕ್ಷೆ ಜಯಲಕ್ಷ್ಮಿ, ಉಪಾಧ್ಯಕ್ಷ ಬೋರೇಗೌಡ, ಸದಸ್ಯರಾದ ಮಹದೇವ, ಚಂದ್ರು, ಮಾಧು, ರತ್ನ ಶ್ರೀಧರ್, ನೂರ್ಜಾನ್, ಚನ್ನಯ್ಯ ಸೂರ, ಗುಂಡ ಅಲಿಯಾಸ್ ರವಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡು ಮುಂದಿನ ಚುನಾವಣೆಯಲ್ಲಿ ಜಿ.ಡಿ.ಹರೀಶ್‌ಗೌಡರನ್ನು ಬೆಂಬಲಿಸುವುದಾಗಿ ಭರವಸೆ ನೀಡಿದರು. ಈ ವೇಳೆ ಮೈಮಲ್ ನಿರ್ದೇಶಕ ಕೆಎಸ್. ಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜ್ ಸೇರಿದಂತೆ ಇತರರಿದ್ದರು.


ಕೆ.ಆರ್.ನಗರದಲ್ಲಿ ಜನಾಶೀರ್ವಾದ ಯಾತ್ರೆಗೆ ವ್ಯಾಪಕ ಬೆಂಬಲ

ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಖಚಿತ: ದಲಿತ ಮುಖಂಡ ಡಿ.ಕೆ.ಕೊಪ್ಪಲು ರಾಜಯ್ಯ

ಹೆಬ್ಬಾಳು, ಫೆ.11– ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ನೇತೃತ್ವದಲ್ಲಿ ನಡೆಯುತ್ತಿರುವ ಜನಾಶೀರ್ವಾದ ಯಾತ್ರೆಗೆ ವ್ಯಾಪಕ ಬೆಂಬಲ ದೊರೆತಿದ್ದು, ಈ ಬಾರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಖಚಿತ ಎಂದು ದಲಿತ ಮುಖಂಡ ಡಿ.ಕೆ.ಕೊಪ್ಪಲುರಾಜಯ್ಯ ತಿಳಿಸಿದರು.

ಇಲ್ಲಿನ ಡಿ.ಕೆ.ಕೊಪ್ಪಲು ಗೇಟ್ ಬಳಿ ಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಕುಟುಂಬ ಸಮೇತರಾಗಿ ಮನೆ ಮನೆಗೆ ತೆರಳಿ ಜನತೆ ಆಶೀರ್ವಾದ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಇದರಿಂದ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಲ್ಲಿ ಉತ್ಸಾಹ ಹೆಚ್ಚಾಗಿದ್ದು, ಪಕ್ಷದ ಗೆಲುವಿಗಾಗಿ ಶ್ರಮಿಸಲಿದ್ದಾರೆ ಎಂದರು.

ಒಕ್ಕಲಿಗ ಸೇರಿದಂತೆ ಎಲ್ಲಾ ಸಮುದಾಯದವರು ಕಾಂಗ್ರೆಸ್‌ಗೆ ಆಶೀರ್ವಾದ ಮಾಡುವುದಾಗಿ ತಿಳಿಸುತ್ತಿದ್ದು, ಚುನಾವಣೆಯಲ್ಲಿ ಡಿ.ರವಿಶಂಕರ್ ಗೆಲುವು ನಿಶ್ಚಿತ. ರಾಜ್ಯದಲ್ಲೂ ಕಾಂಗ್ರೆಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ವಿಪಕ್ಷ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆಯುತ್ತಿರುವ ಪ್ರಜಾಧ್ವನಿ ಯಾತ್ರೆ ಯಶಸ್ವಿಯಾಗಿದ್ದು, ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಸಹಕಾರಿಯಾಗಲಿದೆ ಎಂದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾರ್ಗದರ್ಶನದಲ್ಲಿ ಚುನಾವಣೆಗೂ ಮುನ್ನ ಪಕ್ಷ ಕುಟುಂಬದ ಒಡತಿಗೆ ಮಾಸಿಕ 2 ಸಾವಿರ, 200 ಯೂನಿಟ್ ವಿದ್ಯುತ್ ಉಚಿತ ಮತ್ತು ಅಕ್ಕಿ ಸೇರಿದಂತೆ ಇತರ ಸವಲತ್ತುಗಳನ್ನು ನೀಡುವುದಾಗಿ ಘೋಷಿಸಿದೆ. ಇದನ್ನು ಜನತೆ ಅರ್ಥ ಮಾಡಿಕೊಂಡು ಜನಪರವಾಗಿರುವ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಬೇಕು ಎಂದು ಕೋರಿದರು.

ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ಮಾತನಾಡಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದ ಪ್ರಜಾಧ್ವನಿ ಯಾತ್ರೆ ಫೆ.16 ರಂದು ಕ್ಷೇತ್ರಕ್ಕೆ ಆಗಮಿಸಲಿದ್ದು ಸಾಲಿಗ್ರಾಮದಲ್ಲಿ ನಡೆಯುವ ಸಮಾವೇಶದಲ್ಲಿ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡು ಯಾತ್ರೆ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ವಕೀಲ ಕೆಸಿ.ಹರೀಶ್ ಮಾತನಾಡಿದರು. ಈ ವೇಳೆ ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ಮತ್ತು ಪತ್ನಿ ಸುನೀತಾ ಅವರನ್ನು ನಿವೃತ್ತ ಎಸ್‌ಐ ಸಿ.ಡಿ.ರಾಜಾಚಾರ್ ಕುಟುಂಬದವರು ಮತ್ತು ಗ್ರಾಮಸ್ಥರು ಅಭಿನಂದಿಸಿದರು.

ಸಿದ್ದಾಪುರ ಗ್ರಾಪಂ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ, ಮಾಜಿ ಸದಸ್ಯ ಪ್ರಸನ್ನ, ಮುಖಂಡರಾದ ಸರಿತಾ, ಲತಾ, ಶ್ರುತಿ, ಮಂಜುನಾಥ್, ಹರೀಶ್ ಕುಮಾರ್, ಲೋಕೇಶ್ ಭರಣಿ, ಹೆಚ್.ಎಂ.ಕೀರ್ತಿ, ಮಹದೇವ್, ಕೆಸಿ.ಬಾಬು, ಭೋಜರಾಜ್, ಶೇಖರ್, ತಮ್ಮಯ್ಯ, ಡೈರಿ ಮಾಧು, ನಾಗರಾಜು, ಗವಿಯಪ್ಪ, ಜಯರಾಮೇಗೌಡ, ರುಕ್ಮಾಂಗದ, ಆನಂದ, ಜಯರಾಮಯ್ಯ ಮತ್ತಿತರರಿದ್ದರು.


ಹೆಚ್.ಡಿ. ಕೋಟೆ ವಿಧಾನಸಭಾ ಕ್ಷೇತ್ರದ
ಜನಪ್ರಿಯ ಶಾಸಕರಾದ
ಶ್ರೀಯುತ
ಅನಿಲ್ ಚಿಕ್ಕಮಾದು
ರವರಿಗೆ
34 ನೇ
ಜನುಮದಿನದ
ಶುಭಾಶಯಗಳು
ಶುಭಕೋರುವವರು:
ಹೆಚ್. ಡಿ. ಕೋಟೆ ಮತ್ತು
ಸರಗೂರು ತಾಲ್ಲೂಕಿನ
ಕಾಂಗ್ರೆಸ್ ಮುಖಂಡರುಗಳು
ಹಾಗೂ ಅಭಿಮಾನಿಗಳು
ಶ್ರೀ ಹೆಚ್.ಎನ್. ಸತೀಶ್ ಗೌಡ್ರು
ಕಾಂಗ್ರೆಸ್ ಮುಖಂಡರು